ಮಂಗಳವಾರ, ಜೂನ್ 29, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸರದಿಯಲ್ಲಿ...
ಪ್ರಯಾಣಕ್ಕೆ ಮುನ್ನ ಮಹಿಳೆಯೊಬ್ಬರು ಸೋಂಕು ಪತ್ತೆ ಪರೀಕ್ಷೆಗಾಗಿ ಮುಂಬೈನ ರೈಲು ನಿಲ್ದಾಣದಲ್ಲಿ ಸೋಮವಾರ ಸರದಿಯಲ್ಲಿ ನಿಂತಿದ್ದರು



‘ಪಿಂಚಣಿ: ಪ್ರಮಾಣ ಪತ್ರಕ್ಕೆ ಒತ್ತಾಯಿಸಿಲ್ಲ’



ಬೆಂಗಳೂರು: ‘ಪಿಂಚಣಿದಾರರು ತಾವು ಜೀವಂತವಾಗಿರುವ ಕುರಿತು ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು ಎಂದು ಒತ್ತಡ ಹೇರಿಲ್ಲ’ ಎಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ಈ ಸಂಬಂಧ ಅಫಿಡವಿಟ್ ಸಲ್ಲಿಸಿದ ಕಂದಾಯ ಇಲಾಖೆ ಉಪ ನಿರ್ದೇಶಕಿ(ಸಾಮಾಜಿಕ ಭದ್ರತೆ ಮತ್ತು ಪಿಂಚಣಿ) ಡಾ.ಎಸ್. ಸವಿತಾ ಅವರು, ‘ಪ್ರಮಾಣ ಪತ್ರಕ್ಕೆ ಒತ್ತಾಯ ಮಾಡುತ್ತಿಲ್ಲ. ಅಲ್ಲದೇ, ಹಿರಿಯ ನಾಗರಿಕರಿಗೆ 2021ರ ಮೇ 31ರ ತನಕದ ಪಿಂಚಣಿ ಮೊತ್ತವನ್ನು ಈಗಾಗಲೇ ಪಾವತಿಸಲಾಗಿದೆ’ ಎಂದು ವಿವರಿಸಿದರು.

‘ಪಿಂಚಣಿದಾರರನ್ನು ಸ್ವಯಂಪ್ರೇರಿತವಾಗಿ ಗುರುತಿಸಲು ‘ನವೋದಯ’ ಆ್ಯಪ್ ಅಭಿ-ವೃದ್ಧಿಪಡಿಸಲಾಗಿದೆ. ಗ್ರಾಮ ಲೆಕ್ಕಿಗರು ಫಲಾನುಭವಿಗಳ ಮನೆ ಬಾಗಿಲಿಗೆ ಭೇಟಿ ನೀಡಿ ಅವರ ಭಾವಚಿತ್ರ ಸಹಿತ ಮಾಹಿತಿಗಳನ್ನು ಸಂಗ್ರಹಿಸಿ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದಾರೆ’ ಎಂದು ಹೇಳಿದರು.

ಬಚ್ಚಿಟ್ಟುಕೊಂಡ ಕ್ಯಾನ್ಸರ್ ಕೋಶಗಳನ್ನು ಹುಡುಕಿ ಕೊಲ್ಲುವ ತಂತ್ರಜ್ಞಾನ ಅಭಿವೃದ್ಧಿ

ರಕ್ತ ಕ್ಯಾನ್ಸರ್‌ಗೆ ಕನ್ನಡಿಗನ ಕ್ರಾಂತಿಕಾರಿ ಚಿಕಿತ್ಸೆ

ಪ್ರಜಾವಾಣಿ ವಿಶೇಷ

• ಎಸ್.ರವಿಪ್ರಕಾಶ್

ಬೆಂಗಳೂರು: ರಕ್ತ ಕ್ಯಾನ್ಸರ್‌ಗೆ ಅಮೆರಿಕಾದ ಪ್ರತಿಷ್ಠಿತ ಕ್ಯಾನ್ಸರ್ ಆಸ್ಪತ್ರೆ ‘ಮೆಮೊರಿಯಲ್ ಸ್ಲೋನ್ ಕೆಟ್ಟರಿಂಗ್ ಕ್ಯಾನ್ಸರ್ ಸೆಂಟರ್’ (ಎಂಎಸ್‌ಕೆಸಿಸಿ) ‘ಟಿ ಸೆಲ್ ಥೆರಪಿ’ ಎಂಬ ಕ್ರಾಂತಿಕಾರಿ ಚಿಕಿತ್ಸೆಯೊಂದನ್ನು ಅಭಿವೃದ್ಧಿ ಪಡಿಸಿದೆ.

ಈ ಚಿಕಿತ್ಸೆಯ ವಿನ್ಯಾಸಕ ಮತ್ತು ಕ್ಲಿನಿಕಲ್ ಟ್ರಯಲ್‌ನ ರೂವಾರಿ ಮಂಗಳೂರು ಮೂಲದ ಕನ್ನಡಿಗ ಡಾ.ಶಾಮ ಮಾಯಿಲಂಕೋಡಿ. ಈ ಚಿಕಿತ್ಸೆಗೆ ಅಮೆರಿಕಾದ ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ (ಎಫ್‌ಡಿಎ) ಇತ್ತೀಚೆಗೆ ಒಪ್ಪಿಗೆ ನೀಡಿದೆ.

ಮಲ್ಟಿಪಲ್ ಮೈಲೋಮ ಎಂದರೆ ಬಿಳಿ ರಕ್ತಕಣ ಕ್ಯಾನ್ಸರ್. ಇದನ್ನು ಗುಣಮುಖಪಡಿ-ಸಲು ಸಾಧ್ಯವಿಲ್ಲ. ಮೈಲೋಮಾ ಕ್ಯಾನ್ಸರ್‌ನಿಂ-ದಾಗಿ ಬಿಳಿ ರಕ್ತಕಣಗಳು ಹೋರಾಡುವ ಗುಣವನ್ನು ಕಳೆದು-ಕೊಳ್ಳುತ್ತವೆ. ಅಷ್ಟೇ ಅಲ್ಲ, ಪ್ರತಿಕೂಲಕರ ರೀತಿಯಲ್ಲಿ ಕೋಶಗಳು ತಮ್ಮ ಸಂಖ್ಯೆಯನ್ನು ಹಲವು ಪಟ್ಟು ವೃದ್ಧಿಸಿಕೊಳ್ಳುತ್ತಲೇ ಹೋಗುತ್ತವೆ. ದೇಹದ ಮೂಳೆ ಮತ್ತು ರಕ್ತಕ್ಕೆ ಅತ್ಯಧಿಕ ಪ್ರಮಾಣದಲ್ಲಿ ಪ್ರೋಟೀನ್ (ಇಮ್ಯು-ನೋಗ್ಲೋಬ್ಯುಲಿನ್) ಸೇರಿಸುತ್ತವೆ.

ಅಂಗಾಂಗಗಳಲ್ಲಿ ಸೇರಿಕೊಳ್ಳುವ ಮಿತಿಮೀರಿದ ಪ್ರೋಟೀನ್ ಹಾನಿಯುಂಟು ಮಾಡುತ್ತವೆ. ಮೂಳೆಯಲ್ಲಿನ ಸಾಮಾನ್ಯ ರಕ್ತ ಕಣಗಳಿಗೆ ಪ್ಲಾಸ್ಮಾ ಕೋಶಗಳು ಮುತ್ತಿಗೆ ಹಾಕುತ್ತವೆ. ತಕ್ಷಣವೇ ಒಂದು ಬಗೆಯ ರಾಸಾಯನಿಕ ಬಿಡುಗಡೆಯಾಗುತ್ತದೆ. ಆ ರಾಸಾಯನಿಕವು ಮೂಳೆಯನ್ನು ಭಕ್ಷಿಸುವಂತೆ ಇತರ ಕೋಶಗಳನ್ನು ಪ್ರಚೋದಿಸುವುದು ವಿಶೇಷ.

ಏನಿದು ‘ಟಿ ಸೆಲ್’ ಥೆರಪಿ:? ಕೆಮೆರಿಕ್ ಆ್ಯಂಟಿಜನ್ ರಿಸೆಪ್ಟರ್– ಟಿ (ಸಿಎಆರ್–ಟಿ) ಎಂದು ಕರೆಯಲಾಗುವ ಇದು ಕೋಶ ಆಧಾರಿತ ಚಿಕಿತ್ಸಾ ವಿಧಾನ. ಇದನ್ನು ನೋವೆಲ್ ಇಮ್ಯುನೊಲಾಜಿಕ್ ಥೆರಪಿ ಎಂದು ಕರೆಯಲಾಗುತ್ತದೆ. ಟಿ ಕೋಶಗಳು ಸಹಜವಾಗಿ ರೋಗ ಪ್ರತಿರೋಧಕ ಗುಣವನ್ನು ಹೊಂದಿರುತ್ತವೆ. ರೋಗಿಯ ರಕ್ತದಿಂದ ಟಿ ಕೋಶಗಳನ್ನು ಸಂಗ್ರಹಿಸಿಕೊಂಡು, ಬಳಿಕ ಅದನ್ನು ತಳಿ (ಆನುವಂಶಿಕ) ಎಂಜಿನಿಯರಿಂಗ್ ಮೂಲಕ ಕೋಶಗಳಲ್ಲಿ ಕೆಲವು ಮಾರ್ಪಾಡು ಮಾಡಲಾಗುತ್ತದೆ.

ಹೀಗೆ ರೂಪಾಂತರಗೊಂಡು ‘ವಿಶೇಷ ಶಕ್ತಿ’ ಪಡೆದ ‘ಟಿ ಕೋಶ’ವು ಕ್ಯಾನ್ಸರ್ ಕಣಗಳನ್ನು ಮಾತ್ರ ಪತ್ತೆ ಮಾಡಿ ನಾಶಗೊಳಿಸುವ ಗುಣ ಹೊಂದಿರುತ್ತವೆ. ರೂಪಾಂತರಗೊಂಡ ಟಿ ಕೋಶಗಳನ್ನು ಮತ್ತೆ ರೋಗಿಯ ದೇಹಕ್ಕೆ ಸೇರಿಸಲಾಗುತ್ತದೆ. ಒಂದು ಸಲದ ಚಿಕಿತ್ಸೆಗಾಗಿ ಇವುಗಳನ್ನು ಬಳಕೆ ಮಾಡಲಾಗುತ್ತದೆ.

8ನೇ ಪುಟ ನೋಡಿ

ಮಿದುಳು, ಶ್ವಾಸಕೋಶ ಕ್ಯಾನ್ಸರ್‌ಗೂ ಟ್ರಯಲ್



ಡಾ.ಶಾಮ

‘ಈ ಚಿಕಿತ್ಸೆ ಬಿಳಿರಕ್ತ ಕಣ ಕ್ಯಾನರ್‌ಗೆಂದು ಅಭಿವೃದ್ಧಿಗೊಂಡಿದ್ದರೂ, ಈಗ ಮೂರು ಬಗೆಯ ರಕ್ತ ಕ್ಯಾನರ್‌ಗಳ ಚಿಕಿತ್ಸೆಗೆ ಬಳಕೆ ಮಾಡಲು ಅವಕಾಶ ನೀಡಲಾಗಿದೆ. ಅವುಗಳೆಂದರೆ, ಲುಕೇಮಿಯಾ, ಲಿಂಫೋಮಾ ಮತ್ತು ಮಲ್ಟಿಪಲ್ ಮೈಲೋಮಾ. ಅಲ್ಲದೆ, ಮಿದುಳು, ಶ್ವಾಸಕೋಶ ಕ್ಯಾನ್ಸರ್‌ಗಳಿಗೂ ಇದು ಪರಿಣಾಮಕಾರಿಯೇ ಎಂಬುದರ ಬಗ್ಗೆ ಕ್ರಿನಿಕಲ್ ಟ್ರಯಲ್ಸ್ ನಡೆದಿವೆ’ ಎಂದು ಡಾ. ಶಾಮ ಮಾಯಿಂಲಕೋಡಿ ತಿಳಿಸಿದರು.

‘ನಾವು 100ಕ್ಕೂ ಹೆಚ್ಚು ಬಿಳಿ ರಕ್ತಕಣದ ಕ್ಯಾನ್ಸರ್ ರೋಗಿಗಳ ಮೇಲೆ ಕ್ಲಿನಿಕಲ್ ಟ್ರಯಲ್ ನಡೆದಿವೆ. ಈ ಎಲ್ಲ ರೋಗಿಗಳು ಇದಕ್ಕೂ ಮೊದಲು ಅಸ್ಥಿಮಜ್ಜೆ ಕಾಂಡಕೋಶ ಚಿಕಿತ್ಸೆಯೂ ಸೇರಿ ವಿವಿಧ ಬಗೆಯ ಚಿಕಿತ್ಸೆ ಪಡೆದು ಗುಣಮುಖರಾಗದೇ ಕೊನೆಯ ಪ್ರಯತ್ನ ಎಂದು ಬಂದವರು. ಟಿ ಕೋಶ ಚಿಕಿತ್ಸೆಗೆ ಶೇ 80 ರಿಂದ ಶೇ 95 ರಷ್ಟು ರೋಗಿಗಳು ಉತ್ತಮ ರೀತಿಯಲ್ಲಿ ಸ್ಪಂದಿಸಿದ್ದಾರೆ’ ಎನ್ನುತ್ತಾರೆ ಶಾಮ.

ಕ್ಯಾನ್ಸರ್ ಕಣಗಳ ಕಳ್ಳಾಟ!

ಹಲವು ಬಗೆಯ ಕ್ಯಾನ್ಸರ್ ಕೋಶಗಳು ಪ್ರತಿಕಾಯಗಳ ‘ಚಕ್ಷು’ವಿಗೆ ಪತ್ತೆಯಾಗದ ಮತ್ತು ನಾಶವಾಗದ ಸಾಮರ್ಥ್ಯವನ್ನು ಬೆಳೆಸಿಕೊಂಡಿವೆ. ಹೀಗಾಗಿ ನ್ಯಾಚುರಲ್ ಕಿಲ್ಲರ್ ಸೆಲ್ಸ್ (ಎನ್‌ಕೆ ಸೆಲ್ಸ್) ಅಥವಾ ಟಿ ಸೆಲ್ಸ್‌ಗಳನ್ನು ಯಾವುದೇ ಮಾರ್ಪಾಡು ಮಾಡದೇ ದೇಹದೊಳಗೆ ಬಿಟ್ಟರೂ ಕ್ಯಾನ್ಸರ್ ಕೋಶಗಳನ್ನು ಪತ್ತೆ ಮಾಡಿ ನಾಶ ಮಾಡಲು ಸಾಧ್ಯವಾಗಿಲ್ಲ. ಎನ್‌ಕೆ ಸೆಲ್ಸ್ ಮತ್ತು ಟಿ ಸೆಲ್ಸ್‌ಗಳಲ್ಲಿ ಸಹಜವಾಗಿ ಪ್ರತಿರೋಧಕ ಶಕ್ತಿ ಇದೆ. ಆದರೆ, ಕಿಲಾಡಿ ಕ್ಯಾನ್ಸರ್ ಕೋಶಗಳು ಈ ಎರಡೂ ಕೋಶಗಳ ಕಣ್ಣಿಗೆ ಬೀಳದಂತೆ ತಪ್ಪಿಸಿಕೊ-ಳ್ಳುತ್ತವೆ.

ತುರ್ತು ಸಾಲ ಖಾತರಿ ಯೋಜನೆಗೆ ಹೆಚ್ಚುವರಿಯಾಗಿ ₹ 1.5 ಲಕ್ಷ ಕೋಟಿ

ಕೋವಿಡ್: ಮತ್ತೊಂದು ಪ್ಯಾಕೇಜ್

ನವದೆಹಲಿ (ಪಿಟಿಐ): ಅರ್ಥ ವ್ಯವ-ಸ್ಥೆಯಲ್ಲಿ ಹೊಸ ಚೈತನ್ಯ ಮೂಡಿಸುವ ಉದ್ದೇಶದಿಂದ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮಗಳಿಗೆ ಸಾಲ ನೀಡಲು ಹೆಚ್ಚುವರಿಯಾಗಿ ₹ 1.5 ಲಕ್ಷ ಕೋಟಿ ನಿಗದಿ ಮಾಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಪ್ರಕಟಿಸಿದರು.



ನಿರ್ಮಲಾ ಸೀತಾರಾಮನ್

ಅಲ್ಲದೆ, ಆರೋಗ್ಯ ಸೇವಾ ಕ್ಷೇತ್ರಕ್ಕೆ ಹೆಚ್ಚಿನ ಹಣಕಾಸಿನ ನೆರವು ಒದಗಿಸಲಾಗುವುದು, ಪ್ರವಾಸೋ-ದ್ಯಮಕ್ಕೆ ಸಾಲದ ರೂಪದಲ್ಲಿ ಸಹಾಯ ಮಾಡಲಾಗುವುದು ಎಂದೂ ಅವರು ಪ್ರಕಟಿಸಿದರು. ಸೋಮವಾರ ಪ್ರಕಟಿಸಿದ ವಿವಿಧ ಕ್ರಮಗಳನ್ನು ಪರಿಗಣಿಸಿದರೆ, ಕೋವಿಡ್ ಸಾಂಕ್ರಾಮಿಕದಿಂದಾಗಿ ತೊಂದರೆಗೆ ಒಳಗಾಗಿರುವ ಅರ್ಥ ವ್ಯವಸ್ಥೆಯ ಪುನಶ್ಚೇತನಕ್ಕೆ ಕೇಂದ್ರ ಘೋಷಿಸಿರುವ ಆರ್ಥಿಕ ಪ್ಯಾಕೇಜ್‌ನ ಮೊತ್ತವು ₹ 6.29 ಲಕ್ಷ ಕೋಟಿ ಆಗುತ್ತದೆ.

ಬಡವರಿಗೆ ನವೆಂಬರ್‌ವರೆಗೆ ಉಚಿತವಾಗಿ ಆಹಾರ ಧಾನ್ಯ ನೀಡಲು ಈ ಹಿಂದೆಯೇ ಘೋಷಿಸಿರುವ ₹ 93 ಸಾವಿರ ಕೋಟಿ ಹಾಗೂ ಹಣಕಾಸು ವಲಯವು ಕೋವಿಡ್‌ನಿಂದ ತೊಂದರೆಗೆ ಒಳಗಾಗಿರುವ ವಲಯಗಳಿಗೆ ಕೊಡುವ ಸಾಲಕ್ಕೆ ಖಾತರಿ ನೀಡಲು ನಿಗದಿ ಮಾಡಿರುವ ಮೊತ್ತವನ್ನು ಈ ಪ್ಯಾಕೇಜ್ ಒಳಗೊಂಡಿದೆ.

ತುರ್ತು ಸಾಲ ಖಾತರಿ ಯೋಜನೆಯ ಮೊತ್ತವನ್ನು ಕೇಂದ್ರವು ₹ 4.5 ಲಕ್ಷ ಕೋಟಿಗೆ ಹೆಚ್ಚಿಸಿದೆ. ಇದಕ್ಕೆ ಮೊದಲು ಈ ಮೊತ್ತ ₹ 3 ಲಕ್ಷ ಕೋಟಿ ಆಗಿತ್ತು. ಈ ಯೋಜನೆಯ ಅಡಿಯಲ್ಲಿ ಸಣ್ಣ ಉದ್ದಿಮೆಗಳಿಗೆ ಅಡಮಾನ ಇಲ್ಲದೆಯೇ ಸಾಲ ನೀಡಲಾಗುತ್ತದೆ, ಸಾಲಕ್ಕೆ ಕೇಂದ್ರವು ಖಾತರಿದಾರ ಆಗಿರುತ್ತದೆ.

ಕೋವಿಡ್‌ನಿಂದಾಗಿ ತೀವ್ರ ತೊಂದರೆ ಅನುಭವಿಸಿರುವ ವಲಯಗಳ ನೆರವಿಗಾಗಿ ₹ 1.1 ಲಕ್ಷ ಕೋಟಿ ಮೊತ್ತದ ಸಾಲ ಖಾತರಿ ಯೋಜನೆಯನ್ನು ಕೂಡ ನಿರ್ಮಲಾ ಅವರು ಸೋಮವಾರ ಪ್ರಕಟಿಸಿದರು. ಈ ಯೋಜನೆಯ ಅಡಿಯಲ್ಲಿ ಆರೋಗ್ಯ ಸೇವಾ ವಲಯಕ್ಕಾಗಿ ₹ 50 ಸಾವಿರ ಕೋಟಿ ನಿಗದಿ ಮಾಡಲಾಗಿದೆ.

ಕಿರು ಹಣಕಾಸು ಸಂಸ್ಥೆಗಳು ಒಟ್ಟು 25 ಲಕ್ಷ ಜನರಿಗೆ ಕಡಿಮೆ ಬಡ್ಡಿ ದರದಲ್ಲಿ ಗರಿಷ್ಠ ₹ 1.25 ಲಕ್ಷದವರೆಗೆ ಸಾಲ ವಿತರಣೆ ಮಾಡಲಿವೆ ಎಂದು ನಿರ್ಮಲಾ ಹೇಳಿದರು.

ಪ್ರವಾಸೋದ್ಯಮ ಕ್ಷೇತ್ರಕ್ಕೆ...

ಕೋವಿಡ್‌ನಿಂದಾಗಿ ತೊಂದರೆ ಅನುಭವಿಸಿರುವ ಪ್ರವಾಸೋದ್ಯಮ ಕ್ಷೇತ್ರದ ಏಜೆನ್ಸಿಗಳಿಗೆ ₹ 10 ಲಕ್ಷದವರೆಗೆ ಸಾಲ ನೀಡಲಾಗುವುದು ಎಂದು ನಿರ್ಮಲಾ ಅವರು ಪ್ರಕಟಿಸಿದರು. ಅಲ್ಲದೆ, ಪ್ರವಾಸಿಗರಿಗೆ ಗೈಡ್ ಆಗಿ ಕೆಲಸ ಮಾಡುವವರಿಗೆ ₹ 1 ಲಕ್ಷದವರೆಗೆ ಸಾಲ ನೀಡಲಾಗುತ್ತದೆ ಎಂದೂ ಅವರು ಪ್ರಕಟಿಸಿದರು.

ಕೋವಿಡ್ ನಿರ್ಬಂಧಗಳು ತೆರವಾದ ನಂತರ ಭಾರತಕ್ಕೆ ಬರುವ ಮೊದಲ ಐದು ಲಕ್ಷ ಪ್ರವಾಸಿಗರಿಗೆ ಪ್ರವಾಸಿ ವೀಸಾ ಶುಲ್ಕ ವಿನಾಯಿತಿ ನೀಡಲಾಗುತ್ತದೆ. ವೀಸಾ ಶುಲ್ಕಕ್ಕೆ ವಿನಾಯಿತಿ ನೀಡುವುದರಿಂದ ಕೇಂದ್ರ ಸರ್ಕಾರಕ್ಕೆ ₹ 100 ಕೋಟಿ ವೆಚ್ಚವಾಗಲಿದೆ.

- ಉತ್ಪಾದನೆ ಆಧಾರಿತ ಉತ್ತೇಜನ ಯೋಜನೆಯನ್ನು ಬೃಹತ್ ಪ್ರಮಾಣದ ಎಲೆಕ್ಟ್ರಾನಿಕ್ಸ್ ಉತ್ಪನ್ನ ತಯಾರಿಕೆ ವಲಯಕ್ಕೆ 2025–26ರವರೆಗೆ ವಿಸ್ತರಣೆ ಮಾಡಲಾಗಿದೆ.
- ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುವ ಉದ್ದೇಶದ ಆತ್ಮನಿರ್ಭರ ಭಾರತ ರೋಜಗಾರ್ ಯೋಜನೆಯನ್ನು ಮುಂದಿನ ವರ್ಷದ ಮಾರ್ಚ್ 31ರವರೆಗೆ ವಿಸ್ತರಿಸಲಾಗುತ್ತದೆ. ಈ ವರ್ಷದ ಜೂನ್ 18ರವರೆಗೆ ಈ ಯೋಜನೆಯ ಅಡಿಯಲ್ಲಿ ಒಟ್ಟು 21.42 ಲಕ್ಷ ಜನ ಪ್ರಯೋಜನ ಪಡೆದಿದ್ದಾರೆ.

₹ 19,041 ಕೋಟಿ

ಭಾರತ್‌ನೆಟ್ ಯೋಜನೆಯ ಅಡಿಯಲ್ಲಿ ದೇಶದ ಎಲ್ಲ ಹಳ್ಳಿಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕ ಕಲ್ಪಿಸಲು ಸೋಮವಾರ ನಿಗದಿ ಮಾಡಿದ ಹೆಚ್ಚುವರಿ ಮೊತ್ತ. ಹೆಚ್ಚುವರಿ ಮೊತ್ತ ನಿಗದಿ ಮಾಡಿರುವ ಕಾರಣ, ಭಾರತ್‌ನೆಟ್ ಯೋಜನೆಗಾಗಿ ವೆಚ್ಚ ಮಾಡುವ ಒಟ್ಟು ಮೊತ್ತವು ₹ 61,109 ಕೋಟಿಗೆ ಹೆಚ್ಚಳವಾಗಲಿದೆ.

₹ 23,220 ಕೋಟಿ

ಆಸ್ಪತ್ರೆಗಳಲ್ಲಿ ಮಕ್ಕಳಿಗೆ ಮೀಸಲಾದ ಹಾಸಿಗೆಗಳನ್ನು, ಆರೋಗ್ಯ ಸೌಲಭ್ಯಗಳನ್ನು ಸಿದ್ಧಪಡಿಸಲು ನೀಡುವುದಾಗಿ ಘೋಷಿಸಿರುವ ಮೊತ್ತ. ಈ ಮೊತ್ತವನ್ನು ಹಾಲಿ ಹಣಕಾಸು ವರ್ಷದಲ್ಲಿಯೇ ವೆಚ್ಚ ಮಾಡುವುದಾಗಿ ಸಚಿವೆ ಪ್ರಕಟಿಸಿದ್ದಾರೆ. ಈ ಮೊತ್ತವು ಆರೋಗ್ಯ ಸಚಿವಾಲಯಕ್ಕೆ ತಕ್ಷಣದಿಂದಲೇ ಲಭ್ಯವಾಗುವಂತೆ ಮಾಡಲಾಗಿದೆ.

₹ 14,775 ಕೋಟಿ

ರೈತರಿಗೆ ಡಿಎಪಿ ಮತ್ತು ಇತರ ರಸಗೊಬ್ಬರ ಖರೀದಿಸಲು ಸಬ್ಸಿಡಿಗೆ ಹೆಚ್ಚುವರಿಯಾಗಿ ನೀಡಲಾಗುವ ಮೊತ್ತ

ತೊಂದರೆಗೆ ಒಳಗಾದ ವಲಯಗಳಿಗೆ ನೆರವಾಗುವತ್ತ ಗಮನ ನೀಡಿರುವ ಹೊಸ ಕ್ರಮಗಳೂ ಇದರಲ್ಲಿ ಇವೆ, ಹಳೆಯ ಯೋಜನೆಗಳ ಮುಂದುವರಿಕೆಯೂ ಇದೆ

ಅದಿತಿ ನಾಯರ್
ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ

ರಾಜ್ಯದಲ್ಲಿ 1 ಲಕ್ಷಕ್ಕೂ ಹೆಚ್ಚು ಡೋಸ್ ಲಸಿಕೆ ಪೋಲು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕರ್ನಾಟಕದಲ್ಲಿ ಇದುವರೆಗೆ 1 ಲಕ್ಷಕ್ಕೂ ಹೆಚ್ಚು ಡೋಸ್‌ಗಳಷ್ಟು ಕೋವಿಡ್ ಲಸಿಕೆ ಪೋಲಾಗಿದೆ. ಲಸಿಕೆ ಪೋಲಾಗಿರುವ ಜಿಲ್ಲೆಗಳಲ್ಲಿ ಬಾಗಲಕೋಟೆ ಮೊದಲ ಹಾಗೂ ಹಾಸನ ಎರಡನೇ ಸ್ಥಾನದಲ್ಲಿವೆ.

ರಾಜ್ಯದಲ್ಲಿ ಲಸಿಕೆ ಅಭಿಯಾನ ಆರಂಭಗೊಂಡ ಜನವರಿ 16ರಿಂದ ಇಲ್ಲಿಯವರೆಗೆ (ಜೂನ್ 25) ಬಾಗಲ-ಕೋಟೆಯಲ್ಲಿ 22,196 (ಶೇ 12.66) ಪೋಲಾಗಿದ್ದರೆ, ಹಾಸನದಲ್ಲಿ 17,028 (ಶೇ 8.01) ವ್ಯರ್ಥ ಆಗಿವೆ.

ಜಿಲ್ಲಾಧಿಕಾರಿಯೊಬ್ಬರು ನೀಡಿರುವ ದಾಖಲೆಗಳ ಪ್ರಕಾರ, ರಾಜ್ಯದ 20 ಜಿಲ್ಲೆಗಳಲ್ಲಿ ಸರಾಸರಿ ಶೇ 2.29ರಷ್ಟು ವ್ಯರ್ಥವಾಗಿದ್ದರೆ, ಉಳಿದ ಹತ್ತು ಜಿಲ್ಲೆಗಳ ಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ನಿಗದಿತ ಗುರಿಗಿಂತ ಹೆಚ್ಚಿನ ಲಸಿಕೆಗಳನ್ನು ಹಾಕಿರುವ ಶಿವಮೊಗ್ಗದಲ್ಲಿ ಶೇ –6, ಉಡುಪಿ ಶೇ –5.57, ದಕ್ಷಿಣ ಕನ್ನಡ ಶೇ –4.71, ಧಾರವಾಡ ಶೇ 4.25, ಹಾವೇರಿ ಶೇ 4.16, ಉತ್ತರಕನ್ನಡ ಶೇ –3.65, ಚಿಕ್ಕಮಗಳೂರು ಶೇ –2.25, ಬೆಳಗಾವಿ ಶೇ –1.72, ಕೊಡಗು ಶೇ –1.36, ಬೆಂಗಳೂರು (ಬಿಬಿಎಂಪಿ) ಶೇ –1.29 ಹಾಗೂ ಮೈಸೂರಿನಲ್ಲಿ ಶೇ –0.13 ಇದೆ.

8ನೇ ಪುಟ ನೋಡಿ

ಲಸಿಕೆ ಅಭಿಯಾನ ನಿರ್ವಹಿಸುವ ಆರೋಗ್ಯ ಕಾರ್ಯಕರ್ತರಿಗೆ ಸೂಕ್ತ ತರಬೇತಿ ಹಾಗೂ ಲಸಿಕೆಗಳ ಬಳಕೆ ಮೇಲಿನ ನಿಗಾದಿಂದಾಗಿ, ಹೆಚ್ಚಿನ ಮಂದಿಗೆ ಲಸಿಕೆ ನೀಡಲಾಗಿದೆ

ಕೆ.ಬಿ. ಶಿವಕುಮಾರ್
ಶಿವಮೊಗ್ಗ ಜಿಲ್ಲಾಧಿಕಾರಿ

‘ತಪ್ಪು ಮಾಹಿತಿ ದಾಖಲು’

ಬಾಗಲಕೋಟೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಅನಂತ ದೇಸಾಯಿ ಪ್ರತಿಕ್ರಿಯಿಸಿ, ‘ಕೋವ್ಯಾಕ್ಸಿನ್ ಹಾಗೂ ಕೋವಿಶೀಲ್ಡ್ ಎರಡೂ ಸೇರಿ, ಜಿಲ್ಲೆಯಲ್ಲಿ ಗುಳೇದಗುಡ್ಡ ತಾಲ್ಲೂಕಿಗೆ 54,800 ಡೋಸ್ ಲಸಿಕೆ ಪೂರೈಸಲಾಗಿದೆ. ಅಷ್ಟೂ ಬಳಕೆಯಾಗಿವೆ. ಆದರೆ, ಇಲಾಖೆಯ ಪೋರ್ಟಲ್‌ನಲ್ಲಿ ಅಲ್ಲಿನ ಸಿಬ್ಬಂದಿ 34,300 ಡೋಸ್ ಬಳಕೆಯಾಗಿವೆ ಎಂದು ತಪ್ಪಾಗಿ ಉಲ್ಲೇಖಿಸಿದ್ದಾರೆ. ಅವರ ಲೆಕ್ಕದಲ್ಲಿ 20 ಸಾವಿರಕ್ಕೂ ಹೆಚ್ಚು ಡೋಸ್ ಹಾಳಾಗಿವೆ ಎಂಬಂತಾಗಿದೆ. ಈ ರೀತಿ ತಪ್ಪು ಮಾಹಿತಿ ದಾಖಲಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಿದ್ದು, ಯಾವ ಹಂತದಲ್ಲಿ ಆ ತಪ್ಪಾಗಿದೆ ಎಂಬುದರ ಪರಿಶೀಲನೆ ನಡೆಸುತ್ತಿದ್ದೇವೆ’ ಎಂದರು.

‘ಪಂಜಾಬ್‌ನಲ್ಲಿ ಎಎಪಿ ಗೆದ್ದರೆ ಉಚಿತ ವಿದ್ಯುತ್’

ನವದೆಹಲಿ: ಪಂಜಾಬ್ ವಿಧಾನ ಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ಗೆದ್ದರೆ, ಆ ರಾಜ್ಯದಲ್ಲಿ ಉಚಿತವಾಗಿ ವಿದ್ಯುತ್ ನೀಡುವುದಾಗಿ ಅರವಿಂದ್ ಕೇಜ್ರಿವಾಲ್ ಅವರು ಸೋಮವಾರ ಭರವಸೆ ನೀಡಿದ್ದಾರೆ.

ಮುಂಬರುವ ಪಂಜಾಬ್ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಚಂಡೀಗಡಕ್ಕೆ ಮಂಗಳವಾರ ಭೇಟಿ ನೀಡಲಿದ್ದಾರೆ.

ಸಂಭಾವ್ಯ ದಾಳಿ ವಿಫಲ: ಎರಡು ಡ್ರೋನ್‌ಗಳನ್ನು ಯಶಸ್ವಿಯಾಗಿ ಹಿಮ್ಮೆಟಿಸಿದ ಸೈನಿಕರು

ಜಮ್ಮು ಸೇನಾಠಾಣೆ: ಮತ್ತೆ ಡ್ರೋನ್ ದಾಳಿ ಯತ್ನ

ಜಮ್ಮು (ಪಿಟಿಐ): ಜಮ್ಮುವಿನ ರತ್ನುಚಕ್-ಕಾಲೂಚಕ್ ಸೇನಾಠಾಣೆಯ ಮೇಲೆ ಭಾನುವಾರ ತಡರಾತ್ರಿ ನಡೆಯಬಹು-ದಾಗಿದ್ದ ಸಂಭಾವ್ಯ ಡ್ರೋನ್ ದಾಳಿಯನ್ನು ಸೈನಿಕರು ತಪ್ಪಿಸಿದ್ದಾರೆ. ಜಮ್ಮು ವಿಮಾನ ನಿಲ್ದಾಣದಲ್ಲಿನ ವಾಯುನೆಲೆಯ ಮೇಲೆ ಡ್ರೋನ್ ದಾಳಿ ನಡೆಯುವ ಮೊದಲು ಮತ್ತು ನಂತರ, ಕೆಲವೇ ಗಂಟೆಗಳ ಅಂತರದಲ್ಲಿ ಮತ್ತೆ ಡ್ರೋನ್ ದಾಳಿಯ ಯತ್ನ ನಡೆದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭಾನುವಾರ ರಾತ್ರಿ 11.45ರ ವೇಳೆಗೆ ಸೇನಾಠಾಣೆಯ ಆವರಣದಲ್ಲಿ ಮೊದಲ ಡ್ರೋನ್ ಕಾಣಿಸಿಕೊಂಡಿದೆ. ಆ ಡ್ರೋನ್ ಅನ್ನು ಹೊಡೆದುರುಳಿಸಲು ಸೈನಿಕರು 24 ಸುತ್ತು ಗುಂಡು ಹಾರಿಸಿದ್ದಾರೆ. ಆದರೆ, ಡ್ರೋನ್ ಅಲ್ಲಿಂದ ತಪ್ಪಿಸಿಕೊಂಡಿದೆ. ಅದೇ ಸೇನಾಠಾಣೆಯ ಆವರಣದ ಬೇರೆಡೆ ಭಾನುವಾರ ಬೆಳಿಗ್ಗೆ 2.40ರಲ್ಲಿ ಇನ್ನೊಂದು ಡ್ರೋನ್ ಕಾಣಿಸಿಕೊಂಡಿದೆ. ಎರಡೂ ಡ್ರೋನ್‌ಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲಾಗಿದೆ ಎಂದು ಸೇನೆಯ ಸಾರ್ವಜನಿಕ ಸಂಪರ್ಕಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ದೇವೇಂದರ್ ಆನಂದ್ ಮಾಹಿತಿ ನೀಡಿದ್ದಾರೆ.



ಡ್ರೋನ್ ದಾಳಿ ನಂತರ ಸೇನಾಠಾಣೆಯ ಬಳಿ ಪೊಲೀಸರು ಸಾರ್ವಜನಿಕರ ವಾಹನಗಳ ತಪಾಸಣೆ ನಡೆಸಿದರು ಪಿಟಿಐ ಚಿತ್ರ

300ಕ್ಕೂ ಹೆಚ್ಚು ಡ್ರೋನ್: 2019ರಲ್ಲಿ ಜಮ್ಮು-ಕಾಶ್ಮೀರದ ವಿಶೇಷಾಧಿಕಾರ ರದ್ದತಿ ಬಳಿಕ ಭಾರತ–ಪಾಕಿಸ್ತಾನ ಗಡಿಯಲ್ಲಿ 300ಕ್ಕೂ ಹೆಚ್ಚು ಡ್ರೋನ್‌ಗಳ ಹಾರಾಟವನ್ನು ಗುರುತಿಸಲಾಗಿದೆ ಎಂದು ಭದ್ರತಾ ಸಂಸ್ಥೆಗಳು ಹೇಳಿವೆ. ಡ್ರೋನ್‌ಗಳನ್ನು ಗುರುತಿಸಿ ತಡೆಯಲು ಸಾಧ್ಯವಾಗುವಂತಹ ತಂತ್ರಜ್ಞಾನವೂ ಸೇನೆಯ ಬಳಿ ಇಲ್ಲ ಎನ್ನಲಾಗಿದೆ. ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ ಡ್ರೋನ್ ತಡೆ ತಂತ್ರಜ್ಞಾನವನ್ನು ಕಾಡು, ಮರುಭೂಮಿ ಮತ್ತು ಜೌಗು ಪ್ರದೇಶಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ.

ಪ್ರಚೋದನೆಗೆ ತಕ್ಕ ಉತ್ತರ: ರಾಜನಾಥ್

ನವದೆಹಲಿ (ಪಿಟಿಐ): ಭಾರತವು ಶಾಂತಿಪ್ರಿಯ ದೇಶ, ಯಾವುದೇ ರೀತಿಯ ಅತಿಕ್ರಮಣಶೀಲತೆಯನ್ನು ತೋರುವುದಿಲ್ಲ. ಆದರೆ, ಕೆಣಕಿದರೆ ಅಥವಾ ಬೆದರಿಸಿದರೆ ತಕ್ಕ ಪ್ರತ್ಯುತ್ತರ ನೀಡಲು ಸದಾ ಸನ್ನದ್ಧವೂ ಆಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಪೂರ್ವ ಲಡಾಖ್‌ನಲ್ಲಿ ಹೇಳಿದ್ದಾರೆ.

ರಾಜನಾಥ್ ಅವರು ಈ ಪ್ರದೇಶದ ಭೇಟಿಯ ಎರಡನೇ ದಿನವಾದ ಸೋಮವಾರ, ಮುಂಚೂಣಿ ನೆಲೆಯ ಸೈನಿಕರನ್ನು ಉದ್ದೇಶಿಸಿ ಮಾತನಾಡಿದರು. ನೆರೆಯ ದೇಶಗಳ ಜತೆಗೆ ಇರುವ ವಿವಾದಗಳನ್ನು ಮಾತುಕತೆ ಮೂಲಕ ಪರಿಹರಿಸಲು ಭಾರತ ಸದಾ ಸಿದ್ಧ. ಆದರೆ, ಅದಕ್ಕಾಗಿ ದೇಶದ ಸುರಕ್ಷತೆಯಲ್ಲಿ ಯಾವುದೇ ರಾಜಿ ಇಲ್ಲ ಎಂದರು.

63 ಸೇತುವೆ ಲೋಕಾರ್ಪಣೆ: ಗಡಿ ರಸ್ತೆ ಸಂಘಟನೆಯು (ಬಿಆರ್‌ಒ) ಆರು ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ₹240 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ 63 ಸೇತುವೆಗಳನ್ನು ರಾಜನಾಥ್ ಅವರು ದೇಶಕ್ಕೆ ಸಮರ್ಪಿಸಿದರು.

ಗಡಿಗೆ 50 ಸಾವಿರ ಯೋಧರು?: ಹೆಚ್ಚುವರಿಯಾಗಿ ಕನಿಷ್ಠ 50 ಸಾವಿರ ಯೋಧರನ್ನು ಚೀನಾ ಗಡಿಗೆ ಭಾರತವು ರವಾನಿಸಿದೆ ಎಂಬ ವರದಿಗಳು ಪ್ರಕಟವಾಗಿವೆ.

ಕಳೆದ ಕೆಲವು ತಿಂಗಳಲ್ಲಿ ಯೋಧರು ಮತ್ತು ಯುದ್ಧ ವಿಮಾನಗಳನ್ನು ಗಡಿಗೆ ಕಳುಹಿಸಲಾಗುತ್ತಿದೆ. ಈಗ ಗಡಿಯಲ್ಲಿ ಭಾರತದ ಸೈನಿಕರ ಸಂಖ್ಯೆಯು ಎರಡು ಲಕ್ಷದಷ್ಟಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಇದು ಶೇ 40ರಷ್ಟು ಹೆಚ್ಚು. ಆದರೆ, ಈ ಬಗ್ಗೆ ಅಧಿಕೃತವಾದ ಯಾವುದೇ ಹೇಳಿಕೆ ಹೊರಬಿದ್ದಿಲ್ಲ.



ವಿದ್ಯಾರ್ಥಿಗಳಿಗೆ ಲಸಿಕೆ

ಮಂಗಳೂರಿನ ರಥಬೀದಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೋಮವಾರ ಕಾಲೇಜು ವಿದ್ಯಾರ್ಥಿಗಳಿಗೆ ಕೋವಿಡ್–19 ತಡೆ ಲಸಿಕೆ ನೀಡಲಾಯಿತು - ಪ್ರಜಾವಾಣಿ ಚಿತ್ರ

ಕನ್ನಡ ಹೆಸರು ಬದಲಿಸದಂತೆ ಕೇರಳ ಸಿ.ಎಂಗೆ ಪತ್ರ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಸರಗೋಡು ಮತ್ತು ಮಂಜೇಶ್ವರದಲ್ಲಿ ಕನ್ನಡ ಹೆಸರು ಹೊಂದಿರುವ ಕೆಲವು ಗ್ರಾಮಗಳ ಹೆಸರುಗಳನ್ನು ಮಲಯಾಳೀಕರಣ-ಗೊಳಿಸದಂತೆ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಪತ್ರ ಬರೆದಿದ್ದಾರೆ.

ಮುಖ್ಯಮಂತ್ರಿ ಅವರನ್ನು ಸೋಮವಾರ ಭೇಟಿ ಮಾಡಿದ ಕರ್ನಾಟಕ ಪ್ರದೇಶ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ, ಕಾಸರಗೋಡು ಮತ್ತು ಮಂಜೇಶ್ವರದಲ್ಲಿ ಕನ್ನಡ ಹೆಸರುಗಳನ್ನು ಹೊಂದಿರುವ ಗ್ರಾಮಗಳ ಹೆಸರನ್ನು ಮಲಯಾಳಿ ಭಾಷೆಯ ಆಧಾರದ ಹೆಸ-ರುಗಳನ್ನಾಗಿ ಬದಲಾಯಿಸುತ್ತಿರುವ ಬಗ್ಗೆ ಗಮನಕ್ಕೆ ತಂದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಕೂಡ ಈ ಬಗ್ಗೆ ಕ್ರಮವಹಿಸುವಂತೆ ಮುಖ್ಯಮಂತ್ರಿಗೆ ಪತ್ರ ಬರೆದು ಮನವಿ ಮಾಡಿದ್ದರು.

ಇದಕ್ಕೆ ಸ್ಪಂದಿಸಿದ ಯಡಿಯೂರಪ್ಪ, ‘ಈಗಾಗಲೇ ಈ ವಿಷಯ ನನ್ನ ಗಮನಕ್ಕೂ ಬಂದಿದೆ. ಕಾಸರಗೋಡು ಮತ್ತು ಮಂಜೇಶ್ವರ ಭಾಗದಲ್ಲಿ ಕನ್ನಡಿಗರು ಮತ್ತು ಮಲಯಾಳ ಭಾಷಿಗರು ಸಹಬಾಳ್ವೆಯಿಂದ ಬದುಕುತ್ತಿದ್ದು, ಕನ್ನಡ ಭಾಷೆಯ ಸಾಂಸ್ಕೃತಿಕ, ಐತಿಹಾಸಿಕ ಮಹತ್ವವಿರುವ ಗ್ರಾಮಗಳ ಹೆಸರುಗಳನ್ನು ಬದಲಾಯಿಸುವುದು ಸೂಕ್ತವಲ್ಲ ಎಂದು ಕೇರಳದ ಮುಖ್ಯಮಂತ್ರಿಯ ಗಮನಕ್ಕೆ ತರಲಾಗುವುದು. ಗ್ರಾಮಗಳ ಹೆಸರುಗಳ ಬದಲಾವಣೆ ಪ್ರಕ್ರಿಯೆಯನ್ನು ಸ್ಥಗಿತ-ಗೊಳಿಸುವಂತೆ ಪತ್ರ ಬರೆದು ಮನವಿ ಮಾಡಲಾಗುವುದು’ ಎಂದಿದ್ದರು.

ಸೋಮವಾರ ಸಂಜೆಯೇ ಪತ್ರ ಬರೆದ ಯಡಿಯೂರಪ್ಪ, ಎರಡೂ ರಾಜ್ಯಗಳ ಜನರು ಸೌಹಾರ್ದದಿಂದ ಬದುಕುತ್ತಿದ್ದಾರೆ. ಗಡಿ ಭಾಗದ ಪ್ರದೇಶ-ದಲ್ಲಿನ ಗ್ರಾಮಗಳ ಹೆಸರು ಕನ್ನಡ ಮತ್ತು ತುಳು ಭಾಷೆಯಿಂದ ಪ್ರಭಾವಿತವಾಗಿ-ವೆ. ಕನ್ನಡ, ತುಳು ಮತ್ತು ಮಲೆಯಾಳಿ ಭಾಷಿಗರು ಸಹೋದರರಂತೆ ಅನ್ಯೋ-ನ್ಯವಾಗಿದ್ದಾರೆ. ಭಾಷಾ ಬಾಂಧವ್ಯ ಇದೇ ರೀತಿ ಮುಂದುವರಿಯಬೇಕು. ಹೆಸರು ಬದಲಿಸುವ ಪ್ರಯತ್ನ ತಮ್ಮ ಸರ್ಕಾರದಿಂದ ಮುಂದುವರಿದಿದ್ದರೆ, ಅದನ್ನು ಸ್ಥಗಿತಗೊಳಿಸುವಂತೆ ಮನವಿ ಮಾಡುವುದಾಗಿ ಪಿಣರಾಯಿ ಅವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

‘ಹೋರಾಟ ಅನಿವಾರ್ಯವಾದೀತು’



‘ಕನ್ನಡದ ಊರುಗಳ ಹೆಸರುಗಳನ್ನು ಮಲಯಾಳಿ ಭಾಷೆಗೆ ರೂಪಾಂತರಿಸುವ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ ಆಗ್ರಹಿಸಿದ್ದಾರೆ.

‘ಮುಖ್ಯಮಂತ್ರಿಯಡಿಯೂರಪ್ಪ ಹಾಗೂ ಗೃಹಸಚಿವ ಬಸವರಾಜ ಬೊಮ್ಮಾಯಿ ಅವರು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು. ನೆರೆಯ ರಾಜ್ಯದ ಜೊತೆ ಮಾತನಾಡಿ ಈ ಪ್ರಯತ್ನ ನಿಲ್ಲಿಸಲು ತಕ್ಷಣವೇ ಮುಂದಾಗಬೇಕು’ ಎಂದು ಒತ್ತಾಯಿಸಿದ್ದಾರೆ.

‘ಕೇರಳ ರಾಜ್ಯದಲ್ಲಿರುವ ಕಾಸರಗೋಡು ಅಪ್ಪಟ ಕನ್ನಡ ಪ್ರದೇಶ. ಇದನ್ನು ಕರ್ನಾಟಕಕ್ಕೆ ಸೇರಿಸಬೇಕು ಎಂದು ನ್ಯಾಯಮೂರ್ತಿ ಮಹಾಜನ್ ಆಯೋಗವೇ ಶಿಫಾರಸು ಮಾಡಿತ್ತು. ಈ ಆಯೋಗದ ವರದಿ ನನೆಗುದಿಗೆ ಬಿದ್ದಿರುವುದ-ರಿಂದ ಕಾಸರಗೋಡು ಕೇರಳದ ಭಾಗವಾಗಿ ಉಳಿದಿದೆ. ಕಾಸರಗೋಡಿನ ಪ್ರತಿ ಕಣವೂ ಕನ್ನಡಮಯವಾಗಿದೆ. ಹೀಗಿರುವಾಗ ಅಲ್ಲಿನ ಊರಿನ ಹೆಸರುಗಳನ್ನು ಮಲಯಾಳಿ ಭಾಷೆಗೆ ರೂಪಾಂತರಿಸುವುದು ಕನ್ನಡ ಭಾಷೆ ಹಾಗೂ ಕನ್ನಡಿಗರಿಗೆ ಮಾಡಿದ ಅಪಮಾನ’ ಎಂದು ತಿಳಿಸಿದ್ದಾರೆ.

‘ಕೇರಳದ ನಡೆಯಿಂದ ವಿವಿಧ ಭಾಷಿಗರ ನಡುವಣ ಸೌಹಾರ್ದ ಹದಗೆಡುತ್ತದೆ. ಕೇರಳ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಬೀದಿಗಿಳಿದು ಹೋರಾಡುತ್ತೇವೆ’ ಎಂದು ಎಚ್ಚರಿಸಿದ್ದಾರೆ.

ಹೆಸರು ಬದಲಾವಣೆ ಕೈಬಿಡಲು ಆಗ್ರಹ



ಕಾಸರಗೋಡು ಜಿಲ್ಲೆಯ ಕೆಲವು ಗ್ರಾಮಗಳ ಕನ್ನಡ ಹೆಸರುಗಳನ್ನು ಬದಲಾವಣೆ ಮಾಡಿ, ಮಲಯಾಳಿ ಹೆಸರುಗಳನ್ನು ಇಡುವ ಪ್ರಯತ್ನ ಕೈಬಿಡುವಂತೆ ಆಗ್ರಹಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ಗೆ ಪತ್ರ ಬರೆದಿದ್ದಾರೆ.

‘ಕಾಸರಗೋಡು ಜಿಲ್ಲೆ ಕೇರಳದಲ್ಲಿದ್ದರೂ ಅಲ್ಲಿನ ಜನರು ಕನ್ನಡ ಮತ್ತು ಕರ್ನಾಟಕದ ಜತೆಗೆ ದಶಕಗಳಿಂದಲೂ ಅವಿನಾಭಾವ ಸಂಬಂಧ ಹೊಂದಿದ್ದಾರೆ. ಕನ್ನಡ ಮತ್ತು ಮಲಯಾಳ ಭಾಷೆಯ ಜನರು ಭಾಷಾ ಸೌಹಾರ್ದ ಮತ್ತು ಸಾಂಸ್ಕೃತಿಕ ಸಹಬಾಳ್ವೆಗೆ ಮಾದರಿಯಾಗಿದ್ದಾರೆ’ ಎಂದು ಪತ್ರದಲ್ಲಿ ಹೇಳಿದ್ದಾರೆ.

ಗ್ರಾಮಗಳ ಹೆಸರು ಬದಲಾವಣೆಯಿಂದ ಯಾವುದೇ ಪರಿಣಾಮ ಆಗುವುದಿಲ್ಲ ಎನ್ನುವ ವಾದವೂ ಇದೆ. ಆದರೆ, ಕಾಸರಗೋಡಿನಲ್ಲಿ ಭಾಷಾ ಸೌಹಾರ್ದದ ಒಂದು ಪರಂಪರೆ ಇದೆ. ಗ್ರಾಮಗಳ ಹೆಸರುಗಳನ್ನು ಕನ್ನಡದಲ್ಲೇ ಉಳಿಸುವುದರಿಂದ ಅತ್ಯುತ್ತಮವಾದ ಪರಂಪರೆಯನ್ನು ಮುಂದುವರಿಸಿದಂತೆ ಆಗುತ್ತದೆ. ಆದ್ದರಿಂದ ಗ್ರಾಮಗಳ ಹೆಸರುಗಳ ಮಲಯಾಳೀಕರಣ ಪ್ರಯತ್ನವನ್ನು ಮುಂದುರಿಸಬಾರದು ಎಂದು ಅವರು ಒತ್ತಾಯಿಸಿದ್ದಾರೆ.

ಕೇರಳ ಸರ್ಕಾರ ತೋರುತ್ತಿರುವ ಕನ್ನಡ ವಿರೋಧಿ ಧೋರಣೆ ವಿರುದ್ಧ ಕನ್ನಡಿಗರು ಸಂಘಟಿತರಾಗಿ ಪ್ರತಿಭಟಿಸಬೇಕು. ರಾಜ್ಯದ ಮುಖ್ಯಮಂತ್ರಿ ಅವರು ಕೇರಳದ ಮುಖ್ಯಮಂತ್ರಿ ಜೊತೆ ಚರ್ಚಿಸಬೇಕು.

ಪ್ರತಾಪಸಿಂಹ, ಸಂಸದ

ಕನ್ನಡ ಹೆಸರಿನ ಬದಲಾವಣೆ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಗಮನಕ್ಕೆ ತರಲಾಗುವುದು. ಅವರೇ ಕೇರಳ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡಲಿದ್ದಾರೆ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಕೇರಳ ಸರ್ಕಾರ ಆ ಗ್ರಾಮಗಳ ಜನರ ಅಭಿಪ್ರಾಯವನ್ನೂ ಕೇಳದೇ ಏಕಪಕ್ಷೀಯ ನಿರ್ಧಾರ ಕೈಗೊಂಡಿದೆ. ಕನ್ನಡದ ಅಸ್ಮಿತೆಗಾಗಿ ಈ ಕ್ರಮವನ್ನು ವಿರೋಧಿಸಬೇಕಾಗಿದೆ

ಅರವಿಂದ ಲಿಂಬಾವಳಿ
ಕನ್ನಡ ಮತ್ತು ಸಂಸ್ಕೃತಿ ಸಚಿವ

ಕಪ್ಪು ಶಿಲೀಂಧ್ರ: ಪರೀಕ್ಷೆಗೆ ದರ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಪ್ಪು ಶಿಲೀಂಧ್ರ ಸೋಂಕಿನ ಪತ್ತೆಗೆ ನಡೆಸುವ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನಿಂಗ್ ಪರೀಕ್ಷೆಗಳ ಗರಿಷ್ಠ ದರ ನಿಗದಿಗೊಳಿಸಿ ಆರೋಗ್ಯ ಇಲಾಖೆ ಇದೇ 24ರಂದು ಆದೇಶ ಹೊರಡಿಸಿದೆ.


ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳ ರೋಗಿಗಳ ಪರೀಕ್ಷೆಗೆ ₹ 18,000 ಮತ್ತು ಬಡತನ ರೇಖೆಗಿಂತ ಮೇಲಿರುವ (ಎಪಿಎಲ್) ಕುಟುಂಬಗಳ ರೋಗಿಗಳ ಪರೀಕ್ಷೆಗೆ ₹ 23,500 ಗರಿಷ್ಠ ನಿಗದಿಪಡಿಸಲಾಗಿದೆ. ಐದು ಬಗೆಯ ಪರೀಕ್ಷೆಗಳಿಗೆ ಒಟ್ಟಾಗಿ ಈ ದರ ನಿಗದಿ ಮಾಡಲಾಗಿದೆ.

ಕೋವಿಡ್ ಸೋಂಕಿತರಲ್ಲಿ ಕಪ್ಪು ಶಿಲೀಂಧ್ರ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿದೆ. ಕಪ್ಪು ಶಿಲೀಂಧ್ರ ಸೋಂಕು ಪತ್ತೆಗೆ ಈಗ ₹ 25,000ದಿಂದ ₹ 28,000ದವರೆಗೂ ಶುಲ್ಕ ವಿಧಿಸಲಾಗುತ್ತಿದೆ. ಈ ದರವನ್ನು ಗರಿಷ್ಠ ₹ 12,000ಕ್ಕೆ ಮಿತಿಗೊಳಿಸುವಂತೆ ರಾಜ್ಯಮಟ್ಟದ ಕೋವಿಡ್ ಕಾರ್ಯಪಡೆಯ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ. ಎನ್. ಅಶ್ವತ್ಥನಾರಾಯಣ ಆರೋಗ್ಯ ಇಲಾಖೆಗೆ ಪತ್ರ ಬರೆದಿದ್ದರು.

ಈ ಕುರಿತು ಟ್ವೀಟ್ ಮಾಡಿರುವ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ‘ಕಪ್ಪು ಶಿಲೀಂಧ್ರ ಸೋಂಕಿನ ಪತ್ತೆಗೆ ಎಂಆರ್‌ಐ ಹಾಗೂ ಸಿ.ಟಿ ಸ್ಕ್ಯಾನ್ ಸಂಯೋಜನೆ ಅಗತ್ಯ ಇರುವುದರಿಂದ ದರ ನಿಗದಿ ಮಾಡಲಾಗಿದೆ’ ಎಂದು ಹೇಳಿದ್ದಾರೆ.

‘ಈವರೆಗೆ ಕರ್ನಾಟಕದಲ್ಲಿ 3,232 ಕಪ್ಪು ಶಿಲೀಂಧ್ರ ಪ್ರಕರಣ ಕಂಡುಬಂದಿದ್ದು, 387 ಮಂದಿ ಗುಣ-ಮುಖರಾಗಿದ್ದಾರೆ. 1,600 ಕ್ಕೂ ಹೆಚ್ಚು ಜನರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. 262 ಮಂದಿ ಮೃತಪಟ್ಟಿದ್ದಾರೆ’ ಎಂದವರು ವಿವರಿಸಿದ್ದಾರೆ.

ಇದುವರೆಗೆ 3 ಸಾವಿರ ಮಂದಿ ಸಾವು



ನವದೆಹಲಿ: ದೇಶದಲ್ಲಿ ಇದುವರೆಗೆ ಒಟ್ಟು 40,845 ಬ್ಲ್ಯಾಕ್ ಫಂಗಸ್ (ಮ್ಯೂಕರ್‌ಮೈಕೋಸಿಸ್) ಪ್ರಕರಣಗಳು ವರದಿಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವ ಹರ್ಷವರ್ಧನ್ ಸೋಮವಾರ ತಿಳಿಸಿದ್ದಾರೆ.

ಕೋವಿಡ್‌ಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ಸಚಿವರ ಸಭೆಯಲ್ಲಿ ಹರ್ಷವರ್ಧನ್ ಅವರು, ಬ್ಲಾಕ್ ಫಂಗಸ್ ಕಾಯಿಲೆಗೆ ಸಂಬಂಧಿಸಿದ ಮಾಹಿತಿ ನೀಡಿದ್ದಾರೆ.

ಕಪ್ಪು ಶಿಲೀಂಧ್ರ (ಬ್ಲ್ಯಾಕ್ ಫಂಗಸ್) ಕಾಯಿಲೆಯಿಂದ 3,129 ಮಂದಿ ಮೃತಪಟ್ಟಿದ್ದಾರೆ. ಸಾವಿಗೀಡಾದವರಲ್ಲಿ ಶೇಕಡ 74ರಷ್ಟು ಮಂದಿ 18ರಿಂದ 60 ವಯೋಮಾನದವರಾಗಿದ್ದಾರೆ. ದುಡಿಯುವ ವಯೋಮಾನದವರು ಸಾವಿಗೀ-ಡಾಗಿರುವುದು ಆತಂಕಕಾರಿ ಎಂದು ಅವರು ಹೇಳಿದ್ದಾರೆ.

ಕೋವಿಡ್–19 ಎರಡನೇ ಅಲೆ ಕಡಿಮೆಯಾಗುತ್ತಿದ್ದರೂ ಬ್ಲ್ಯಾಕ್ ಫಂಗಸ್ ಪ್ರಕರಣಗಳು ಹೆಚ್ಚಾಗುತ್ತಿವೆ. ಕಳೆದ 18 ದಿನಗಳ ಅವಧಿಯಲ್ಲಿ 12,500 ಪ್ರಕರಣಗಳು ವರದಿಯಾಗಿವೆ ಎಂದು ವಿವರಿಸಿದ್ದಾರೆ.

80 ಜಿಲ್ಲೆಗಳಲ್ಲಿ ಅತಿ ಹೆಚ್ಚು ಪಾಸಿಟಿವಿಟಿ ದರ

ಕೋವಿಡ್–19 ಎರಡನೇ ಅಲೆಯು ದೇಶದ 80 ಜಿಲ್ಲೆಗಳಲ್ಲಿ ಕಡಿಮೆಯಾಗಿಲ್ಲ. ಈ ಜಿಲ್ಲೆಗಳಲ್ಲಿ ಪಾಸಿಟಿವಿಟಿ ದರ ಹೆಚ್ಚಾಗಿದೆ ಎಂದು ಐಸಿಎಂಆರ್ ಮಹಾನಿರ್ದೇಶಕ ಡಾ. ಬಲರಾಮ್ ಭಾರ್ಗವ್ ತಿಳಿಸಿದ್ದಾರೆ.

ಹೀಗಾಗಿ, ಯಾವುದೇ ರೀತಿಯ ನಿರ್ಲಕ್ಷ್ಯ ಸಲ್ಲದು. ಕೊರೊನಾ ವೈರಸ್‌ನ ರೂಪಾಂತರ ತಳಿಗಳಾದ ಅಲ್ಫಾ, ಬೀಟಾ, ಗಾಮಾ ಮತ್ತು ಡೆಲ್ಟಾ ವಿರುದ್ಧ ಲಸಿಕೆಗಳು ಪರಿಣಾಮಕಾರಿಯಾಗಿವೆ ಎಂದು ತಿಳಿಸಿದ್ದಾರೆ.

ಮಂಗಳವಾರ, ಜೂನ್ 29, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 180 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಕೋವಿಡ್ ಹಿನ್ನೆಲೆಯಲ್ಲಿ ಉಸಿರಾಟದ ಬಗ್ಗೆ ಹೆಚ್ಚಿನ ಎಚ್ಚರಿಕೆ ಮೂಡಿದೆ. ಉಸಿರಾಟದ ಸರಳ ವ್ಯಾಯಾಮ, ಅದರ ಉಪಯೋಗಗಳ ಮಾಹಿತಿ ಇಲ್ಲಿದೆ.



ಆಳ-ಅಗಲ ಈಕ್ವಿಟಿ: ಭಯ ತೊರೆದರೇ ಸಣ್ಣ ಹೂಡಿಕೆದಾರರು?

‘ಜಾತಿ ಕೇಂದ್ರಿತ ಮಠಗಳು ಜನಹಿತ ಕಾಯುವು’ 4

ಹೊಸ ಐ.ಟಿ. ನಿಯಮಗಳಿಗೆ ತಡೆ ಇಲ್ಲ 9

ಸೆನ್ಸೆಕ್ಸ್	ನಿಫ್ಟಿ	₹/$
52,736 ▼	15,814 ▼	74.19 ▲

ಜುಲೈ 2ನೇ ವಾರ ಪಿಯುಸಿ ಫಲಿತಾಂಶ • ಮಕ್ಕಳಿಗೆ ಶಾಲೆ ಸದ್ಯಕ್ಕಿಲ್ಲ

ಜು.19, 22ಕ್ಕೆ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2020-21ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯನ್ನು ಜುಲೈ 19 ಮತ್ತು 22ರಂದು ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.



ಪರೀಕ್ಷೆ ಸಿದ್ಧತೆ ಕುರಿತು ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳ ಜೊತೆ ಸೋಮವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

‘19ರಂದು ಕೋರ್ (ಗಣಿತ, ಸಮಾಜ ವಿಜ್ಞಾನ, ವಿಜ್ಞಾನ) ವಿಷಯಗಳಿಗೆ ಮತ್ತು 22ರಂದು ಭಾಷಾ ವಿಷಯಗಳ ಪರೀಕ್ಷೆಗಳು ಬೆಳಿಗ್ಗೆ 10.30ರಿಂದ 1.30ರವರೆಗೆ ನಡೆಯಲಿದೆ. ರಾಜ್ಯ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ನೀಡಿರುವ ಮಾರ್ಗಸೂಚಿ (ಎಸ್‌ಒಪಿ) ಅನುಸರಿಸಿ ಸುರಕ್ಷಿತ ವಾತಾವರಣದಲ್ಲಿ ಪರೀಕ್ಷೆ ನಡೆಸಲಾಗುವುದು. ಪರೀಕ್ಷೆಗೆ ನಿಯೋಜಿತರಾಗುವ ಎಲ್ಲ ಸಿಬ್ಬಂದಿಗೆ ತಕ್ಷಣವೇ ಲಸಿಕೆ ಒದಗಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದರು.

‘ಶಿಕ್ಷಣ ಸಚಿವರು ನನ್ನ ಜತೆ ಚರ್ಚಿಸಿಲ್ಲ’



‘ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸುವ ಸಂಬಂಧ ಶಿಕ್ಷಣ ಸಚಿವರು ನನ್ನ ಜತೆ ಚರ್ಚೆ ನಡೆಸಿಲ್ಲ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಈವರೆಗೂ ನನ್ನ ಜತೆ ಚರ್ಚಿಸಿಲ್ಲ. ಆತುರ ಇಲ್ಲ. ನಮ್ಮ ಮಕ್ಕಳ ಬಗ್ಗೆ, ಮಕ್ಕಳ ಶಿಕ್ಷಣ ಮತ್ತು ಅವರ ಭವಿಷ್ಯದ ಬಗ್ಗೆ ಕಾಳಜಿ ಇದೆ. ಅದಕ್ಕಿಂತಲೂ ಮುಖ್ಯವಾಗಿ ಅವರ ಜೀವದ ರಕ್ಷಣೆ ಬಹಳ ಮುಖ್ಯ’ ಎಂದು ಸುಧಾಕರ್ ತಿಳಿಸಿದರು.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಅವರು ಎಸ್‌ಎಸ್‌ಎಲ್‌ಸಿ ಪರೀಕ್ಷೆ ವೇಳಾಪಟ್ಟಿ ಪ್ರಕಟಿಸುವುದಕ್ಕೆ ಮುನ್ನ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಜತೆ ಚರ್ಚಿಸಿ, ಬಳಿಕ ಸುದ್ದಿಗೋಷ್ಠಿ ನಡೆಸಿದರು ಎಂದು ಮೂಲಗಳು ಹೇಳಿವೆ. ಸುರೇಶ್‌ಕುಮಾರ್ ಅವರು ಜಿಲ್ಲಾಡಳಿತದ ಜತೆ ನಡೆಸಿದ ಸಂವಾದದಲ್ಲಿ ಆರೋಗ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಆಯುಕ್ತರು ಭಾಗವಹಿಸಿ ತಮ್ಮ ಇಲಾಖೆಯಿಂದ ಕೈಗೊಳ್ಳಬಹುದಾದ ಕ್ರಮಗಳನ್ನು ವಿವರಿಸಿದರು.

‘ಸುರಕ್ಷಾ ಕೇಂದ್ರ’ಗಳು: ‘ಪರೀಕ್ಷೆ ಆರಂಭ ಮತ್ತು ಪರೀಕ್ಷೆಯ ನಂತರ ಸೋಂಕು ನಿವಾರಕ ದ್ರಾವಣದಿಂದ ಪರೀಕ್ಷಾ ಕೇಂದ್ರ, ಕೊಠಡಿ, ಪೀಠೋಪಕರಣ ಮತ್ತು ಶೌಚಾಲಯಗಳನ್ನು ಸ್ಯಾನಿಟೈಸ್ ಮಾಡಲಾಗುವುದು. ಪ್ರತಿ ಪರೀಕ್ಷಾ ಕೊಠಡಿಯಲ್ಲಿ 12 ಮಕ್ಕಳು, ಒಂದು ಡೆಸ್ಕ್‌ಗೆ ಒಬ್ಬ ಪರೀಕ್ಷಾರ್ಥಿ ಮಾತ್ರ ಇರಲಿದ್ದಾರೆ’ ಎಂದರು.

‘ಕೆಮ್ಮು, ನೆಗಡಿ, ಜ್ವರ ಲಕ್ಷಣಗಳಿರುವ ಅಭ್ಯರ್ಥಿಗಳಿಗೆ ಎರಡು ಕೊಠಡಿ ಕಾಯ್ದಿರಿಸಲಾಗುವುದು. ಮಾಸ್ಕ್ ಧರಿಸದ ವಿದ್ಯಾರ್ಥಿಗಳಿಗೆ ಮಾಸ್ಕ್ ನೀಡಲಾಗುವುದು. ತಾಲ್ಲೂಕಿಗೊಂದು ತುರ್ತು ಚಿಕಿತ್ಸಾ ವಾಹನ ಮೀಸಲಿರಿಸಲಾಗುವುದು. ಗಡಿ ಭಾಗದ ಪರೀಕ್ಷಾ ಕೇಂದ್ರಗಳಿಗೆ, ಹೊರ ರಾಜ್ಯದಿಂದ ಬರುವ ಪರೀಕ್ಷಾರ್ಥಿಗಳಿಗೆ ಅನುಕೂಲವಾಗುವಂತೆ ರಾಜ್ಯದ ಗಡಿ ಪ್ರವೇಶಕ್ಕೆ ಜಿಲ್ಲಾಡಳಿತದ ಸಮನ್ವಯದೊಂದಿಗೆ ಕ್ರಮ ವಹಿಸಲಾಗುವುದು’ ಎಂದರು.

‘ತಾಲ್ಲೂಕಿಗೊಂದು ಕೋವಿಡ್ ಆರೈಕೆ ಕೇಂದ್ರಗಳನ್ನು ಸ್ಥಾಪಿಸಿ ಅಲ್ಲಿ ಕೋವಿಡ್ ದೃಢಪಟ್ಟ ಪರೀಕ್ಷಾರ್ಥಿಗೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದು. ಕುಟುಂಬದಲ್ಲಿ ಯಾರಿಗಾದರೂ ಸೋಂಕು ತಗುಲಿದ್ದು, ಪರೀಕ್ಷಾರ್ಥಿ ಐಸೋಲೇಷನ್‌ನಲ್ಲಿದ್ದರೆ ಅವರಿಗೂ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡಲಾಗುವುದು. ಈ ಕೇಂದ್ರದಲ್ಲಿ ಒಂದು ಆಂಬುಲೆನ್ಸ್ ಕಾಯ್ದಿರಿಸಲಾಗುವುದು’ ಎಂದರು.

8ನೇ ಪುಟ ನೋಡಿ

ಅಂಕಿ ಅಂಶ

8,76,581	ಎಸ್ಸೆಸ್ಸೆಲ್ಸಿ ಒಟ್ಟು ನೋಂದಾಯಿತರು
4,72,643	ವಿದ್ಯಾರ್ಥಿಗಳು
4,03,938	ವಿದ್ಯಾರ್ಥಿನಿಯರು
4,884	ಪರೀಕ್ಷಾ ಕೇಂದ್ರಗಳು
73,066	ಪರೀಕ್ಷಾ ಕೊಠಡಿಗಳು

ರಾಜ್ಯ ಕೋವಿಡ್ ಅಂಕಿ-ಅಂಶ

28,37,206 ▲	ಒಟ್ಟು ಸೋಂಕಿತರು (28,34,630 ನಿನ್ನೆಯ ವಿವರ)
97,592 ▼	ಸಕ್ರಿಯ ಪ್ರಕರಣಗಳು
27,04,755 ▲	ಗುಣಮುಖರಾದವರು
34,836 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	2,576 ▼
ಗುಣಮುಖ	5,933 ▼
ಸಾವು	93 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಶಿಕ್ಷಕರ ವರ್ಗಾವಣೆ ವೇಳಾಪಟ್ಟಿ ನಾಳೆ’ 8

ಚಿನಕುರಳಿ

ಪ್ರಕಾಶ್ ಶೆಟ್ಟಿ



ಜುಲೈನಲ್ಲಿ ರಾಜ್ಯಕ್ಕೆ 60 ಲಕ್ಷ ಡೋಸ್ ಲಸಿಕೆ

ನವದೆಹಲಿ: ಜುಲೈ ತಿಂಗಳಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಒಟ್ಟು 60 ಲಕ್ಷ ಡೋಸ್ ಕೋವಿಡ್–19 ಲಸಿಕೆ ಹಂಚಿಕೆ ಮಾಡಲಿದೆ. ಇದರಿಂದಾಗಿ ನಿತ್ಯ 2 ಲಕ್ಷ ಜನರಿಗೆ ಮಾತ್ರ ಲಸಿಕೆ ನೀಡಲು ಸಾಧ್ಯವಾಗಲಿದ್ದು, ರಾಜ್ಯ ಸರ್ಕಾರ ಆರಂಭಿಸಿರುವ ಅಭಿಯಾನ ವೇಗ ಕಳೆದುಕೊಳ್ಳುವ ಸಾಧ್ಯತೆ ಇದೆ. 8

ಭಾರತದ ಭೂಪಟ ತಿರುಚಿದ ಟ್ವಿಟರ್

ನವದೆಹಲಿ: ಟ್ವಿಟರ್ ತನ್ನ ಜಾಲತಾಣದಲ್ಲಿ ಭಾರತದ ಭೂಪಟವನ್ನು ತಪ್ಪಾಗಿ ತೋರಿಸಿ, ಜಮ್ಮು-ಕಾಶ್ಮೀರ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತ್ಯೇಕ ದೇಶಗಳು ಎಂದು ಕರೆದಿತ್ತು. ಇದಕ್ಕೆ ಜಾಲತಾಣಗಳಲ್ಲಿ ಭಾರಿ ಆಕ್ರೋಶ ವ್ಯಕ್ತವಾಗುತ್ತಿದ್ದಂತೆಯೇ ಆ ಭೂಪಟವನ್ನು ತನ್ನ ಜಾಲತಾಣದಿಂದ ತೆಗೆದುಹಾಕಿದೆ. 9

ಎಸ್‌ಪಿಒ ಹತ್ಯೆ: ಜೆಇಎಂ ಉಗ್ರರ ಕೈವಾಡ

ಶ್ರೀನಗರ: ವಿಶೇಷ ಪೊಲೀಸ್ ಅಧಿಕಾರಿ(ಎಸ್‌ಪಿಒ) ಮತ್ತು ಅವರ ಪತ್ನಿ ಹಾಗೂ ಪುತ್ರಿ ಹತ್ಯೆಯಲ್ಲಿ ಇಬ್ಬರು ಜೈಷ್-ಎ-ಮೊಹಮ್ಮದ್ (ಜೆಇಎಂ) ಉಗ್ರರ ಕೈವಾಡವಿದೆ’ ಎಂದು ಪೊಲೀಸರು ತಿಳಿಸಿದ್ದಾರೆ. 9

ಫೇಸ್‌ಬುಕ್, ಗೂಗಲ್ ಅಧಿಕಾರಿಗಳಿಗೆ ಸಮನ್ಸ್

ನವದೆಹಲಿ: ಮಾಹಿತಿ ತಂತ್ರಜ್ಞಾನ ನಿಯಮಗಳ ಅನುಸರಣೆ ಕುರಿತಂತೆ ಕೇಂದ್ರ ಸರ್ಕಾರ ಮತ್ತು ಟ್ವಿಟರ್ ಸಂಸ್ಥೆ ಮಧ್ಯೆ ನಡೆಯುತ್ತಿರುವ ಘರ್ಷಣೆಯ ನಡುವೆಯೇ, ಮಾಹಿತಿ ತಂತ್ರಜ್ಞಾನ ಇಲಾಖೆಯ ಸಂಸದೀಯ ಸ್ಥಾಯಿ ಸಮಿತಿಯು ಫೇಸ್‌ಬುಕ್ ಮತ್ತು ಗೂಗಲ್ ಅಧಿಕಾರಿಗಳಿಗೆ ಮಂಗಳವಾರ ಹಾಜರಾಗುವಂತೆ ಸೂಚಿಸಿದೆ. 9

‘ಮೆಟ್ರೊ ನಿಲ್ದಾಣಕ್ಕೆ ಬಸವಣ್ಣನವರ ಹೆಸರಿಡಿ’

ಬೆಂಗಳೂರು:‘ನಗರದ ಮೆಟ್ರೊ ನಿಲ್ದಾಣವೊಂದಕ್ಕೆ ಬಸವಣ್ಣನವರ ಹೆಸರಿಡಬೇಕು’ ಎಂದು ಮಹಾಲಕ್ಷ್ಮೀ ಬಡಾವಣೆಯ ವೀರ ಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಅವಿನ್ ಆರಾಧ್ಯ ಮನವಿ ಮಾಡಿದ್ದಾರೆ.

‘ವಿಧಾನಸೌಧದ ಆವರಣದಲ್ಲಿ ಬಸವಣ್ಣನವರ ಪುತ್ಥಳಿ ನಿರ್ಮಿಸಲು ಮುಂದಾಗಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನಿರ್ಧಾರ ಸ್ವಾಗತಾರ್ಹ. ಇದರಿಂದ ಸಮಸ್ತ ವೀರಶೈವ ಲಿಂಗಾಯತ ಸಮುದಾಯಕ್ಕೆ ಸಂತಸವಾಗಿದೆ’ ಎಂದೂ ಹೇಳಿದ್ದಾರೆ.

ಸೆಂಟ್ರಲ್ ಸಿಲ್ಕ್ ಬೋರ್ಡ್–ಕೆ.ಆರ್. ಪುರ ಮಾರ್ಗದಲ್ಲಿ ಮೆಟ್ರೊ ಕಾಮಗಾರಿ ಆರಂಭಕ್ಕೆ ದಿನಗಣನೆ

ರೀಚ್ 2ಎ: ಮಣ್ಣಿನ ಪರೀಕ್ಷೆ ಆರಂಭ

• ಗುರು ಪಿ.ಎಸ್.



ಇಬ್ಬಲೂರು ಮೇಲ್ಸೇತುವೆ ಬಳಿ ಮೆಟ್ರೊ ಕಾಮಗಾರಿಗಾಗಿ ಮಣ್ಣಿನ ಪರೀಕ್ಷೆ ಆರಂಭವಾಗಿದ್ದು, ಬಿಎಂಆರ್‌ಸಿಎಲ್ ಬ್ಯಾರಿಕೇಡ್‌ಗಳನ್ನು ಹಾಕಿದೆ

ಬೆಂಗಳೂರು: ‘ನಮ್ಮ ಮೆಟ್ರೊ’ ಎರಡನೇ ಹಂತದಲ್ಲಿನ ಸೆಂಟ್ರಲ್ ಸಿಲ್ಕ್ ಬೋರ್ಡ್– ಕೆ.ಆರ್. ಪುರ ಮಾರ್ಗದಲ್ಲಿ (ರೀಚ್ 2ಎ) ಬೆಂಗಳೂರು ಮೆಟ್ರೊ ರೈಲು ನಿಗಮವು ಮಣ್ಣಿನ ಪರೀಕ್ಷೆ ಆರಂಭಿಸಿದ್ದು, ಒಂದೆರಡು ವಾರದಲ್ಲಿ ಕಾಮಗಾರಿ ಆರಂಭವಾಗುವ ನಿರೀಕ್ಷೆ ಇದೆ. ಬಹುದಿನದ ನಿರೀಕ್ಷೆ ಈಡೇರುತ್ತಿರುವುದಕ್ಕೆ ಸ್ಥಳೀಯರೂ ಸಂತಸ ವ್ಯಕ್ತಪಡಿಸಿದ್ದಾರೆ.

‘ಈ ಮಾರ್ಗದಲ್ಲಿ ಕಾಮಗಾರಿ ಯಾವಾಗ ಪ್ರಾರಂಭವಾಗುತ್ತದೆಯೋ ಎಂದು ವರ್ಷಗಳಿಂದ ಕಾಯುತ್ತಿದ್ದೆವು. ಈಗ ಮಣ್ಣಿನ ಪರೀಕ್ಷೆ ಆರಂಭಿಸಿರುವುದು ಸಂತಸ ತಂದಿದೆ. ಮುಂದೆ ಸಂಚಾರ ದಟ್ಟಣೆ ಕಡಿಮೆಯಾಗುವುದಲ್ಲದೆ, ವಾಯುಮಾಲಿನ್ಯವೂ ಸಾಕಷ್ಟು ತಗ್ಗಲಿದೆ’ ಎಂದು ಇಬ್ಬಲೂರು ನಿವಾಸಿ ರಮೇಶ್ ಹೇಳಿದರು.

ಪ್ರಜಾವಾಣಿ ವಿಶೇಷ

ಎರಡು ಪ್ಯಾಕೇಜ್‌ನಲ್ಲಿ ಈ 2ಎ ಮಾರ್ಗದ ನಿರ್ಮಾಣ ಕಾರ್ಯವನ್ನು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಕೈಗೆತ್ತಿಕೊಂಡಿದೆ. ಸಿಲ್ಕ್ ಬೋರ್ಡ್‌ನಿಂದ ಕಾಡುಬೀಸನಹಳ್ಳಿಯವರೆಗಿನ (10 ಕಿ.ಮೀ) ಮೊದಲ ಪ್ಯಾಕೇಜ್‌ನ ನಿರ್ಮಾಣ ಗುತ್ತಿಗೆಯನ್ನು ಆಫ್ಕಾನ್ಸ್ ಸಂಸ್ಥೆ ಪಡೆದಿದ್ದರೆ, ಕಾಡುಬೀಸನಹಳ್ಳಿಯಿಂದ ಬೈಯಪ್ಪನಹಳ್ಳಿಯವರೆಗಿನ (9.75 ಕಿ.ಮೀ) ಎರಡನೇ ಪ್ಯಾಕೇಜ್‌ನ ಗುತ್ತಿಗೆಯನ್ನು ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಪಡೆದಿದೆ.

‘ಇಬ್ಬಲೂರು ಮತ್ತು ಮಹದೇವಪುರ ಮೇಲ್ಸೇತುವೆ ಬಳಿ ಶುಕ್ರವಾರದಿಂದ (ಜೂನ್ 25) ಮಣ್ಣಿನ ಪರೀಕ್ಷೆ ಆರಂಭಿಸಲಾಗಿದೆ. ಮಣ್ಣಿನ ಮಾದರಿ ಸಂಗ್ರಹಿಸಿ, ಗುತ್ತಿಗೆ ಪಡೆದಿರುವ ಕಂಪನಿಯ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ’ ಎಂದು ಬಿಎಂಆರ್‌ಸಿಎಲ್‌ನ ಸಹಾಯಕ ಎಂಜಿನಿಯರ್ ಆರ್. ಆದರ್ಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇಳಿಜಾರು ಅಥವಾ ಪ್ರಮುಖ ಸ್ಥಳಗಳಲ್ಲಿ (ಪಿಯರ್ ಲೊಕೇಶನ್) ಮಣ್ಣಿನ ಪರೀಕ್ಷೆ ನಡೆಸಲಾಗುತ್ತಿದೆ. 20ರಿಂದ 30 ಮೀಟರ್‌ಗೆ ಒಂದೊಂದು ಪಿಯರ್ ಲೊಕೇಶನ್ ಗುರುತಿಸಲಾಗಿದೆ. ಈ ರೀಚ್‌ನಲ್ಲಿ ಸುಮಾರು 25ರಿಂದ 30 ಕಡೆಗಳಲ್ಲಿ ಇಂತಹ ಪಿಯರ್ ಲೊಕೇಶನ್‌ಗಳಿವೆ. ಯಾವ ಸ್ಥಳದಲ್ಲಿ ಗಟ್ಟಿ ಅಥವಾ ಹಗುರ ಮಣ್ಣಿದೆ, ಎಲ್ಲಿ ಬಂಡೆಗಳು ಇವೆ ಎಂಬುದು ಇದರಿಂದ ತಿಳಿಯುತ್ತದೆ. ಮಣ್ಣಿನ ಗುಣ, ಎಷ್ಟು ಆಳದವರೆಗೆ ಹೋಗಿ ಅಡಿಪಾಯ ಹಾಕಬೇಕು ಎಂಬುದೆಲ್ಲ ಇದರಿಂದ ತಿಳಿಯುತ್ತದೆ’ ಎಂದು ಅವರು ತಿಳಿಸಿದರು.

‘ಒಂದು ಸ್ಥಳದಲ್ಲಿ ಮಣ್ಣಿನ ಪರೀಕ್ಷೆ ಮಾಡಬೇಕು ಎಂದರೆ, ಸುಮಾರು 30 ಮೀಟರ್ ಅಥವಾ 100 ಅಡಿ ಆಳದವರೆಗೆ ಗುಂಡಿ ತೋಡಿ ಮಾದರಿ ಸಂಗ್ರಹಿಸಬೇಕಾಗುತ್ತದೆ. ಒಂದೆರಡು ವಾರದಲ್ಲಿ ವರದಿ ಬರುವ ನಿರೀಕ್ಷೆ ಇದೆ’ ಎಂದು ಅವರು ಹೇಳಿದರು.

₹14,788 ಕೋಟಿ ವೆಚ್ಚ: ಸೆಂಟ್ರಲ್ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್. ಪುರ 19.75 ಕಿ.ಮೀ. ಮತ್ತು ಕೆ.ಆರ್. ಪುರದಿಂದ ಹೆಬ್ಬಾಳ ಮಾರ್ಗವಾಗಿ ವಿಮಾನ ನಿಲ್ದಾಣದವರೆಗಿನ 38.44 ಕಿ.ಮೀ. ಸೇರಿದಂತೆ ಒಟ್ಟಾರೆ 58.19 ಕಿ.ಮೀ. ಉದ್ದದ ಈ ಮಾರ್ಗವನ್ನು ₹14,788 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. 50:50ರ ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯಸರ್ಕಾರವು ಈ ಮೊತ್ತವನ್ನು ಭರಿಸಲಿವೆ.

ಹೊರವರ್ತುಲ ರಸ್ತೆ ಮಾರ್ಗದ ಭೂಸ್ವಾಧೀನ ಕಾರ್ಯ ಶೇ 100ರಷ್ಟು ಪೂರ್ಣಗೊಂಡಿದ್ದು, ವಿಮಾನ ನಿಲ್ದಾಣ ಮಾರ್ಗದ ಭೂಸ್ವಾಧೀನ ಕಾರ್ಯ ಶೇ 90ರಷ್ಟು ಆಗಿದೆ.



ಈ ಮಾರ್ಗದಲ್ಲಿ ಹೆಚ್ಚು ಐಟಿ ಕಂಪನಿಗಳಿದ್ದು, ಎರಡು ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳಿದ್ದಾರೆ. ಮೆಟ್ರೊ ಬಂದರೆ ಸಂಚಾರ ದಟ್ಟಣೆ ತಪ್ಪಲಿದೆ

ಬಾಲಾಜಿ ರಘೋತ್ತಮ
ಖಾಸಗಿ ಕಂಪನಿ ಉದ್ಯೋಗಿ



ಮೆಟ್ರೊ ಕಾಮಗಾರಿ ಪ್ರಾರಂಭವಾಗಿರುವುದು ಸಂತಸ ತಂದಿದೆ. ಸಂಚಾರ ದಟ್ಟಣೆ ಮಾತ್ರವಲ್ಲದೆ, ವಾಯುಮಾಲಿನ್ಯವೂ ತಗ್ಗಲಿದೆ

ಕ್ಲೆಮೆಂಟ್ ದೊಡ್ಡನೆಕ್ಕುಂದಿ
ಖಾಸಗಿ ಕಂಪನಿ ಉದ್ಯೋಗಿ

30 ನಿಲ್ದಾಣಗಳು ಈ ಮಾರ್ಗದಲ್ಲಿ ಬರಲಿದ್ದು, ಯೋಜನೆ ಪೂರ್ಣಗೊಂಡ ನಂತರ ಅಂದರೆ 2025ಕ್ಕೆ ನಿತ್ಯ 4.33 ಲಕ್ಷ ಜನ ಪ್ರಯಾಣಿಸಲಿದ್ದು, 2041ರ ವೇಳೆಗೆ ಇಲ್ಲಿ ಪ್ರಯಾಣಿಕರ ಸಂಖ್ಯೆ 11.14 ಲಕ್ಷಕ್ಕೆ ಏರಿಕೆ ಆಗಲಿದೆ ಎಂದು ಅಂದಾಜಿಸಲಾಗಿದೆ.

‘ನಮ್ಮ ಮೆಟ್ರೊ ನಮ್ಮತನದ ಪ್ರತೀಕ’

ಬೆಂಗಳೂರು: ನಗರದ ಸಾರಿಗೆ ಸಂಪರ್ಕ ಜಾಲವಾದ ‘ನಮ್ಮ ಮೆಟ್ರೊ’ಗೆ ನಮ್ಮತನ ಇರಲೆಂದೇ ಆ ಹೆಸರು ಇಡಲಾಗಿದೆ. ಪ್ರತಿ ಪ್ರಯಾಣಿಕನ ಮನದಲ್ಲಿಯೂ ಈ ಸಾರಿಗೆ ನನ್ನದು ಎಂಬ ಭಾವ ಬರುತ್ತದೆ. ಇಂತಹ ಸ್ವಂತಿಕೆಯನ್ನು ನಾವೆಲ್ಲರೂ ಉಳಿಸಿಕೊಳ್ಳಬೇಕಾಗಿದೆ ಎಂದು ಅಖಿಲ ಭಾರತ ಬಂಜಾರ ಸಂಘದ ರಾಷ್ಟ್ರೀಯ ಕಾರ್ಯದರ್ಶಿ ಡಿ. ರಾಮಾ ನಾಯ್ಕ್ ಹೇಳಿದ್ದಾರೆ.

ರಾಮ ನಾಯ್ಕ್ ಅವರು ಬೆಂಗಳೂರು ಮೆಟ್ರೊ ನಿಗಮದ ಸಾರ್ವಜನಿಕ ಸಂಪರ್ಕಾಧಿಕಾರಿಯೂ ಆಗಿದ್ದರು.

‘ನಮ್ಮ ಮೆಟ್ರೊ’ಗೆ ಜಗಜ್ಯೋತಿ ಬಸವೇಶ್ವರರ ಹೆಸರಿಡಬೇಕು ಎಂಬ ವೀರಶೈವ ಲಿಂಗಾಯತ ಸಂಘಟನಾ ವೇದಿಕೆಯ ಬೇಡಿಕೆಗೆ ಸಂಬಂಧಿಸಿದಂತೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

‘ನಮ್ಮ ಮೆಟ್ರೊಗೆ ಮಹಾಪುರುಷರ ಹೆಸರನ್ನಿಡಬೇಕು ಎಂದು ಆಗಾಗ ಹಲವರಿಂದ ಒತ್ತಾಯ ಕೇಳಿ ಬರುತ್ತದೆ. ನಾಡು ನುಡಿಗೆ ಸೇವೆ ಸಲ್ಲಿಸಿದವರನ್ನು, ಸಮಾಜ ಸುಧಾರಕರನ್ನು ಸ್ಮರಿಸಬೇಕಾದುದು ನಮ್ಮ ಆದ್ಯ ಕರ್ತವ್ಯ. ಜೊತೆಗೆ ಸಾಮಾನ್ಯ ನಾಗರಿಕರನ್ನು ಗೌರವಿಸುವುದೂ ಮುಖ್ಯವಾಗುತ್ತದೆ. ಇದನ್ನು ಯೋಚಿಸಿಯೇ ಮೆಟ್ರೊ ಸಾರಿಗೆಗೆ ನಮ್ಮ ಮೆಟ್ರೊ ಎಂದು ಹೆಸರಿಡಲಾಗಿದೆ.

‘ಬಿಎಂಆರ್‌ಸಿಎಲ್‌ಗೆ ಈ ನೆಲದ ವೈಶಿಷ್ಟ್ಯ ಬಿಂಬಿಸುವ ರಂಗೋಲಿ ಲಾಂಛನವನ್ನು ಅಳವಡಿಸಲಾಗಿದೆ. ಶೇ 90ರಷ್ಟು ಸಾಮಾನ್ಯ ಜನರೇ ಸಂಚರಿಸುವ ಮೆಟ್ರೊ ರೈಲಿಗೆ ಈ ಹೆಸರೇ ಸೂಕ್ತ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿ 2 ನಿಮಿಷ


ಮಧ್ಯಾಹ್ನದ ಬಿಸಿಯೂಟ ಕೃಷ್ಣ ಸರ್ಕಾರದ ಯೋಜನೆ: ಪ್ರೊ.ಬಿಕೆಸಿ

ಬೆಂಗಳೂರು: ‘ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ನೀಡುವ ಯೋಜನೆ ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರದ (2003) ಹಾಗೂ ನಾನು ಪ್ರಾಥಮಿಕ ಶಿಕ್ಷಣ ಸಚಿವನಾಗಿದ್ದ ಕಾಲದ ಕಾರ್ಯಕ್ರಮ’ ಎಂದು ಕೆಪಿಸಿಸಿ ವಕ್ತಾರ ಪ್ರೊ. ಬಿ.ಕೆ. ಚಂದ್ರಶೇಖರ್ ಹೇಳಿದ್ದಾರೆ.

‘ಈ ಯೋಜನೆಗೆ ಸಂಬಂಧಿಸಿದಂತೆ, ಕಾಕತಾಳೀಯವೆಂಬಂತೆ ನಾನೂ ತಮಿಳುನಾಡಿಗೆ ತೆರಳಿ, ಅಲ್ಲಿ ಎಂಜಿಆರ್ ಸರ್ಕಾರ ಆರಂಭಿಸಿದ್ದ ಈ ಯೋಜನೆಯ ಪ್ರತಿಯೊಂದು ಆಯಾಮವನ್ನು ಚರ್ಚಿಸಿದ್ದೆ. ಈ ಯೋಜನೆಯನ್ನು ಸುತ್ತೂರು ಶ್ರೀಗಳ ಸಹಯೋಗದಲ್ಲಿ ಏರ್ಪಡಿಸಿದ ಕಾರ್ಯಕ್ರಮವೊಂದರಲ್ಲಿ ಸೋನಿಯಾ ಗಾಂಧಿ ಉದ್ಘಾಟಿಸಿದ್ದರು’ ಎಂದಿದ್ದಾರೆ.

‘ಆದರೆ, ಜೂನ್ 27ರ ‘ಪ್ರಜಾವಾಣಿ’ಯಲ್ಲಿ (ಪುಟ 3ಸಿ) ಪ್ರಕಟವಾಗಿದ್ದ ಸಿ.ಎಂ. ಇಬ್ರಾಹಿಂ ಅವರ ಹೇಳಿಕೆ ಬಳಿಕ ಕೆಲವು ಶಾಲಾ ಶಿಕ್ಷಕರು ಕರೆ ಮಾಡಿ ಈ ಬಗ್ಗೆ ಪ್ರಶ್ನಿಸಿದ್ದರಿಂದ ಈ ಸ್ಪಷ್ಟೀಕರಣ ನೀಡುತ್ತಿದ್ದೇನೆ. ಯಾವುದೇ ದೃಷ್ಟಿಯಲ್ಲೂ ಇಬ್ರಾಹಿಂ ಅವರನ್ನು ಪ್ರಶ್ನಿಸುವ ಪ್ರಯತ್ನವಲ್ಲ’ ಎಂದು ಅವರು ಹೇಳಿದ್ದಾರೆ.

‘ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಸಾಧನೆ ಕುರಿತು ಅವರು ಹೇಳಿಕೆ ನೀಡುವ ಸಂದರ್ಭದಲ್ಲಿ, ‘ಒಂದು ರೂಗೆ ಒಂದು ಕಿಲೋ ಅಕ್ಕಿ, ಮಧ್ಯಾಹ್ನದ ಊಟ ತಂದವರು ಯಾರು? ತಮಿಳುನಾಡಿನಲ್ಲಿ ಎರಡು ದಿನ ಕುಳಿತು ಅಧ್ಯಯನ ಮಾಡಿ ನಾನು ಆ ಯೋಜನೆ ತಂದೆ. ಅದು ಯಶಸ್ವಿ ಆಯಿತು. ಯೋಜನಾ ಆಯೋಗದ ಉಪಾಧ್ಯಕ್ಷನಾಗಿ ಯೋಜನೆ ಕೊಟ್ಟೆ’ ಎಂದಿದ್ದರು.



ಬಹುಶಃ ಇಬ್ರಾಹಿಂ ಅವರ ಮನಸ್ಸಿನಲ್ಲಿದ್ದದ್ದು ‘ಅನ್ನಭಾಗ್ಯ’ ಯೋಜನೆ ಇರಬಹುದು. ‘ಮಧ್ಯಾಹ್ನದ ಊಟ’ದ ಬಗ್ಗೆ ಶಿಕ್ಷಕರಲ್ಲಿ ಗೊಂದಲವಾದಂತಿದೆ’ ಎಂದು ಚಂದ್ರಶೇಖರ್ ತಿಳಿಸಿದ್ದಾರೆ.

‘ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಬೇಡಿ’

ಬೆಂಗಳೂರು: ‘ರಾಜ್ಯದಲ್ಲಿ ಕೋವಿಡ್ ಗಂಭೀರವಾದ ಪರಿಸ್ಥಿತಿ ಇನ್ನೂ ಇರುವುದರಿಂದ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಬಾರದು’ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ದ್ವಿತೀಯ ಪಿಯುಸಿ ವಿದ್ಯಾರ್ಥಿಗಳನ್ನು ಪಾಸ್ ಮಾಡಿ ಇದೀಗ ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾಡುವುದು ಸರಿಯಲ್ಲ. ಇದು ವಿದ್ಯಾರ್ಥಿಗಳ ಪ್ರಾಣದ ಮೇಲೆ ಚೆಲ್ಲಾಟ ಆಡಿದಂತೆ. ಶಿಕ್ಷಣ ಸಚಿವ ಸುರೇಶ್ ಕುಮಾರ್ ಹಟಮಾರಿತನ ಬಿಡಬೇಕು’ ಎಂದರು.

‘ಜುಲೈ ಮೂರನೇ ವಾರ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಸಲು ಶಿಕ್ಷಣ ಸಚಿವರು ನಿರ್ಧರಿಸಿದ್ದಾರೆ. ನಾನು ಇದನ್ನು ನೇರವಾಗಿ ವಿರೋಧಿಸುತ್ತೇನೆ. ಯಾವುದೇ ಕಾರಣಕ್ಕೂ ಎಸ್ಸೆಸ್ಸೆಲ್ಸಿ ಪರೀಕ್ಷೆ ಮಾಡಬಾರದು. ಪರೀಕ್ಷೆ ಇಲ್ಲದೆ ಎಲ್ಲ ವಿದ್ಯಾರ್ಥಿಗಳನ್ನು ಪಾಸ್ ಮಾಡಬೇಕು. ಸುಮಾರು ಹತ್ತು ಲಕ್ಷ ವಿದ್ಯಾರ್ಥಿಗಳಿದ್ದಾರೆ. ಕೋವಿಡ್ ರಾಜ್ಯದಲ್ಲಿ ಸಂಪೂರ್ಣವಾಗಿ ಹೋಗಿಲ್ಲ. ಶಾಲೆ ಆರಂಭ ಮಾಡಬೇಕಾದರೆ ಎಲ್ಲರಿಗೂ ಲಸಿಕೆ ಹಾಕಬೇಕು ಎಂದು ತಜ್ಞರ ಸಮಿತಿ ವರದಿ ಕೊಟ್ಟಿದೆ. ಹೀಗಾಗಿ, ಶಾಲೆ ಆರಂಭ ಮಾಡದೆ ಪರೀಕ್ಷೆ ನಡೆಸುವುದು ಸರಿಯಲ್ಲ’ ಎಂದು ಅಭಿಪ್ರಾಯಪಟ್ಟರು.

ಬಿಬಿಎಂಪಿ: 2021–22ನೇ ಸಾಲಿನಲ್ಲಿ ಇದುವರೆಗೆ ₹ 1,563.78 ಕೋಟಿ ಆಸ್ತಿ ತೆರಿಗೆ ಸಂಗ್ರಹ

ಆಸ್ತಿ ತೆರಿಗೆ ವಸೂಲಿಗೆ ‘ಖಾತಾ ಮೇಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ವ್ಯಾಪ್ತಿಯ ಎಲ್ಲ ಎಂಟು ವಲಯಗಳಲ್ಲಿ ‘ಖಾತಾ ಮೇಳ’ ಏರ್ಪಡಿಸುವ ಮೂಲಕ ತೆರಿಗೆ ವ್ಯಾಪ್ತಿಗೆ ಇನ್ನಷ್ಟು ಆಸ್ತಿಗಳನ್ನು ಸೇರ್ಪಡೆ ಮಾಡಬೇಕು. ಆಸ್ತಿ ತೆರಿಗೆ ಸಂಗ್ರಹದ ಗುರಿ ಸಾಧಿಸಲು ಕ್ರಮವಹಿಸಬೇಕು’ ಎಂದು ಪಾಲಿಕೆಯ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಕಂದಾಯ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿಯ ಕಂದಾಯ ವಿಭಾಗದ ಪ್ರಗತಿ ಪರಿಶೀಲನಾ ಸಭೆಯನ್ನು ಸೋಮವಾರ ನಡೆಸಿದ ಮುಖ್ಯ ಆಯುಕ್ತರು, ‘ಬಿಬಿಎಂಪಿಯ ಅಭಿವೃದ್ಧಿಯಲ್ಲಿ ಕಂದಾಯ ವಿಭಾಗದ ಪಾತ್ರ ಬಹುಮುಖ್ಯ. ಕಂದಾಯ ಅಧಿಕಾರಿಗಳು ಆಸ್ತಿ ತೆರಿಗೆ ಬಾಕಿ ವಸೂಲಾತಿಗೆ ಆದ್ಯತೆ ನೀಡಬೇಕು. ತೆರಿಗೆ ಸೋರಿಕೆ ತಡೆಯಲು ಕ್ರಮ ವಹಿಸಬೇಕು. ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಸ್ವತ್ತುಗಳನ್ನು ಪತ್ತೆ ಹಚ್ಚಿ ಅವುಗಳಿಂದಲೂ ತೆರಿಗೆ ಸಂಗ್ರಹಿಸುವತ್ತ ವಿಶೇಷ ಗಮನ ವಹಿಸಬೇಕು’ ಎಂದು ಸಲಹೆ ನೀಡಿದರು.

‘2021-22ನೇ ಆರ್ಥಿಕ ವರ್ಷದಲ್ಲಿ ಬಿಬಿಎಂಪಿಯು ಇದುವರೆಗೆ ₹ 1,563.78 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಿದೆ. ಕಳೆದ ವರ್ಷದ ಸಾಧನೆಗೆ ಹೋಲಿಸಿದರೆ, ಈ ಬಾರಿಯ ಸಾಧನೆ ತೃಪ್ತಿಕರವಾಗಿಲ್ಲ. ಸದ್ಯ ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ. ಎಲ್ಲ ಕಂದಾಯ ಅಧಿಕಾರಿಗಳು ಆಸ್ತಿ ತೆರಿಗೆ ವಸೂಲಾತಿ ಬಗ್ಗೆ ಹೆಚ್ಚು ಗಮನವರಿಸಬೇಕು’ ಎಂದು ಸೂಚನೆ ನೀಡಿದರು.



ಸಭೆಯಲ್ಲಿ ಗೌರವ ಗುಪ್ತ (ಬಲ ಬದಿ) ಅವರು ಎಸ್‌.ಬಸವರಾಜು ಅವರ ಜೊತೆ ಚರ್ಚಿಸಿದರು

‘ಅನೇಕ ಆಸ್ತಿ ಮಾಲೀಕರು ಹಲವು ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಇಂತಹ ಸ್ವತ್ತುಗಳ ತೆರಿಗೆ ವಸೂಲಿ ಮಾಡಲು ಸೂಕ್ತ ಕ್ರಮಕೈಗೊಳ್ಳಬೇಕು. ಈ ಸಂಬಂಧ ಎಲ್ಲ ಸಹಾಯಕ ಕಂದಾಯ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಅಧಿಕ ತೆರಿಗೆ ಬಾಕಿ ಉಳಿಸಿಕೊಂಡ ಸುಸ್ತಿದಾರರ ಪಟ್ಟಿಯನ್ನು ಸಿದ್ಧಪಡಿಸಬೇಕು. ಅದರ ಅನುಸಾರ ನೋಟೀಸ್ ಜಾರಿಗೊಳಿಸಿ ಬಾಕಿ ವಸೂಲಾತಿಗೆ ಕ್ರಮಕೈಗೊಳ್ಳಬೇಕು. ಹೊಸದಾಗಿ ನಿರ್ಮಾಣ ಮಾಡುತ್ತಿರುವ ಕಟ್ಟಡಗಳನ್ನೂ ತೆರಿಗೆ ವ್ಯಾಪ್ತಿಗೆ ತರುವ ಮೂಲಕ ಸಂಪನ್ಮೂಲ ಕ್ರೋಡೀಕರಿಸಬೇಕು’ ಎಂದು ತಿಳಿಸಿದರು.

ವಿಶೇಷ ಆಯುಕ್ತ (ಕಂದಾಯ) ಎಸ್. ಬಸವರಾಜು, ‘ಪಾಲಿಕೆ ವ್ಯಾಪ್ತಿಯಲ್ಲಿ 2021–21ನೇ ಸಾಲಿನ ಆಸ್ತಿ ತೆರಿಗೆ ಪಾವತಿ ಮಾಡದಿರುವವರಿಗೂ ಡಿಮಾಂಡ್ ನೋಟೀಸ್ ನೀಡಿ. ಹಲವು ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ನೋಟೀಸ್ ಜಾರಿಗೊಳಿಸಿ. ಆಗ ಮಾತ್ರ ತ್ವರಿತವಾಗಿ ಆಸ್ತಿ ತೆರಿಗೆ ಸಂಗ್ರಹ ಮಾಡಲು ಸಾಧ್ಯ’ ಎಂದು ಸೂಚನೆ ನೀಡಿದರು.

‘ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಸ್ವತ್ತುಗಳನ್ನು ಪತ್ತೆ ಹಚ್ಚುವ ಕಾರ್ಯ ಸಮರ್ಪಕವಾಗಿ ನಡೆಯುತ್ತಿಲ್ಲ. ಇಂತಹ ಸ್ವತ್ತುಗಳನ್ನು ತೆರಿಗೆ ವ್ಯಾಪ್ತಿಯೊಳಗೆ ತರುವುದಕ್ಕೆ ಆದ್ಯತೆ ನೀಡಬೇಕು. ತೆರಿಗೆ ಕಟ್ಟದವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ಹಿಂದೇಟು ಹಾಕುವ ಅಗತ್ಯವಿಲ್ಲ. ಈ ಆರ್ಥಿಕ ವರ್ಷದಲ್ಲಿ ಆಸ್ತಿ ತೆರಿಗೆ ಸಂಗ್ರಹದ ಗುರಿಯನ್ನು ತಲುಪಲೇಬೇಕು’ ಎಂದು ತಾಕೀತು ಮಾಡಿದರು.

‘ಶೇ 5ರಷ್ಟು ರಿಯಾಯಿತಿ– ನಾಳೆ ಕೊನೆ ದಿನ’

ನಗರದಲ್ಲಿ ವರ್ಷದ ಪೂರ್ತಿ ಆಸ್ತಿ ತೆರಿಗೆಯನ್ನು ಒಂದೇ ಕಂತಿನಲ್ಲಿ ಪಾವತಿಸುವವರಿಗೆ ಶೇ 5 ರಷ್ಟು ರಿಯಾಯಿತಿ ನೀಡುವ ಗಡುವು ಇದೇ 30ಕ್ಕೆ ಕೊನೆಯಾಗಲಿದೆ.

ಪ್ರತಿ ಆರ್ಥಿಕ ವರ್ಷದಲ್ಲೂ ಏಪ್ರಿಲ್ ತಿಂಗಳಿನಲ್ಲಿ ಪೂರ್ಣ ಪ್ರಮಾಣದ ಆಸ್ತಿ ತೆರಿಗೆ ಪಾವತಿ ಮಾಡುವವರಿಗೆ ಮಾತ್ರ ಶೇ 5ರಷ್ಟು ರಿಯಾಯಿತಿ ನೀಡಲಾಗುತ್ತದೆ. ಈ ಬಾರಿ ಏಪ್ರಿಲ್ ಮತ್ತು ಮೇ ತಿಂಗಳುಗಳ ಬಹುತೇಕ ದಿನಗಳಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಲಾಕ್‌ಡೌನ್ ಜಾರಿಯಲ್ಲಿತ್ತು. ಹಾಗಾಗಿ ಆಸ್ತಿ ತೆರಿಗೆ ಪಾವತಿದಾರರಿಗೆ ನೀಡುವ ರಿಯಾಯಿತಿಯನ್ನು ಜೂನ್ 30ರವರೆಗೆ ಬಿಬಿಎಂಪಿ ವಿಸ್ತರಿಸಿತ್ತು.

ನಗರದಲ್ಲಿ ಇಂದು

ಜಿ.ವೆಂಕಟಸುಬ್ಬಯ್ಯ, ಎಚ್.ಎಸ್.ದೊರೆಸ್ವಾಮಿ, ಕವಿ ಸಿದ್ದಲಿಂಗಯ್ಯ, ಬಿ.ಎಸ್.ಸಣ್ಣಯ್ಯ, ಜರಗನಹಳ್ಳಿ ಶಿವಶಂಕರ್, ಕೋ.ವೆಂ. ರಾಮಕೃಷ್ಣೇಗೌಡ ಅವರಿಗೆ ನುಡಿನಮನ: ಅಧ್ಯಕ್ಷತೆ–ಸಾಹಿತಿ ಪಿ.ವಿ. ನಾರಾಯಣ, ಭಾಗವಹಿಸುವವರು–ಎಲ್.ಹನುಮಂತಯ್ಯ, ವಿಜಯಾ ಸುಬ್ಬರಾಜ್, ನಳಿನಿ ವೆಂಕಟೇಶ್, ಪದ್ಮಿನಿ ನಾಗರಾಜು, ಎಚ್.ಎಸ್. ಎಂ.ಪ್ರಕಾಶ್, ಬೈರಮಂಗಲ ರಾಮೇಗೌಡ, ಪ್ರೊ.ಶಾಂತರಾಜು, ಬಿ.ಆರ್.ರವೀಂದ್ರನಾಥ್, ಆಯೋಜನೆ–ಬಿಎಂಶ್ರೀ ಪ್ರತಿಷ್ಠಾನ, ಸ್ಥಳ–ಎಂವಿಸೀ ಸಭಾಂಗಣ, ಬಿಎಂಶ್ರೀ ಕಲಾಭವನ, ಎನ್.ಆರ್.ಕಾಲೊನಿ, ಬೆಳಿಗ್ಗೆ 11

ತೃತೀಯ ಲಿಂಗಿಗಳಿಗೆ ಕೋವಿಡ್ ಲಸಿಕೆ ಅಭಿಯಾನ: ಅತಿಥಿ–ಮಣಿಪಾಲ್ ಸಂಸ್ಥೆಯ ಕಾರ್ತಿಕ್ ರಾಜಗೋಪಾಲ್, ಆಯೋಜನೆ, ಸ್ಥಳ–ಮಣಿಪಾಲ್ ಆಸ್ಪತ್ರೆ, ಹಳೆಯ ವಿಮಾನ ನಿಲ್ದಾಣದ ರಸ್ತೆ, ಬೆಳಿಗ್ಗೆ 11.30

ಹಿರಿಯ ಲೇಖಕಿಯರ ಸಾಹಿತ್ಯ ಮಂಥನ–ಲೇಖಕಿ ಮಂಗಳಾ ಸತ್ಯನ್ ಅವರ ಕೃತಿಗಳ ವಿಚಾರ ಸಂಕಿರಣ: ವಿಚಾರ ಮಂಡನೆ–ಬಿ.ಆರ್. ನಾಗರತ್ನ, ವಾಣಿ ಸುಬ್ಬಯ್ಯ, ಅಧ್ಯಕ್ಷತೆ–ವನಮಾಲಾ ಸಂಪನ್ನಕುಮಾರ್, ಆಯೋಜನೆ–ಕರ್ನಾಟಕ ಲೇಖಕಿಯರ ಸಂಘ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ವಿಚಾರ ಕಲರವ ಉಪನ್ಯಾಸ ಮಾಲಿಕೆ:‘ಮಹಿಳಾ ಮೀಸಲಾತಿ’ ಕುರಿತು ಉಪನ್ಯಾಸ–ಪ್ರೊ.ಆರ್.ಇಂದಿರಾ, ಅತಿಥಿ–ಕೆ.ಆರ್.ವೇಣುಗೋಪಾಲ್, ಆಯೋಜನೆ–ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಕೋಶ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

‘ರೋಟರಿ ಗುರುದಕ್ಷಿಣೆ’–ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಶಿಕ್ಷಕರಿಗೆ ಆರ್ಥಿಕ ನೆರವು ಕಾರ್ಯಕ್ರಮ:ಅತಿಥಿಗಳು–ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್, ರೋಟರಿ–3,190 ಜಿಲ್ಲಾ ಗವರ್ನರ್ ಬಿ.ಎಲ್.ನಾಗೇಂದ್ರ ಪ್ರಸಾದ್, ‘ಪ್ರಜಾವಾಣಿ’ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ರೋಟೇರಿಯನ್ ಪಿ.ವಿ.ರಾವ್, ಆಯೋಜನೆ–ರೋಟರಿ–3,190ನೇ ಜಿಲ್ಲೆ, ಮಾಧ್ಯಮ ಸಹಯೋಗ–‘ಪ್ರಜಾವಾಣಿ’, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)



ಎಸ್‌.ಸುರೇಶ್ ಕುಮಾರ್

ಶಿವರಾಮ ಕಾರಂತ ಬಡಾವಣೆ

ಎರಡು ತಿಂಗಳಲ್ಲಿ ವರದಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವರಾಮ ಕಾರಂತ ಬಡಾವಣೆಯಲ್ಲಿ 2008ರಿಂದ 2018ರ ಅವಧಿಯಲ್ಲಿ ನಿರ್ಮಾಣವಾಗಿರುವ ಕಟ್ಟಡಗಳಿಗೆ ಸಂಬಂಧಿಸಿದಂತೆ ಎರಡು ತಿಂಗಳಲ್ಲಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸಲಾಗುವುದು ಎಂದು ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ತಿಳಿಸಿದರು.

ಶಿವರಾಮ ಕಾರಂತ ಬಡಾವಣೆ ಅಭಿವೃದ್ಧಿಗೆ 17 ಹಳ್ಳಿಗಳ 3,546 ಎಕರೆ ಭೂಮಿ ಸ್ವಾಧೀನಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) 2008ರ ಡಿಸೆಂಬರ್ 30ರಂದು ಮೊದಲ ಅಧಿಸೂಚನೆ ಪ್ರಕಟಿಸಿತ್ತು. ಈ ಅಧಿಸೂಚನೆಯನ್ನು 2014ರ ನ.26ರಂದು ಹೈಕೋರ್ಟ್ ರದ್ದುಪಡಿಸಿತ್ತು. ಸುಪ್ರೀಂ ಕೋರ್ಟ್‌ಗೆ ಬಿಡಿಎ ಮೇಲ್ಮನವಿ ಸಲ್ಲಿಸಿತ್ತು. ಹೈಕೋರ್ಟ್ ಆದೇಶವನ್ನು 2018ರ ಆಗಸ್ಟ್ 3ರಂದು ಸುಪ್ರೀಂ ಕೋರ್ಟ್ ರದ್ದುಪಡಿಸಿತ್ತು.


2008ರಿಂದ 2018ರ ಅವಧಿಯಲ್ಲಿ ಸಾಕಷ್ಟು ಕಟ್ಟಡಗಳು ನಿರ್ಮಾಣವಾಗಿದ್ದು, ಎಷ್ಟು ಕಟ್ಟಡಗಳು ನಿರ್ಮಾಣ ಆಗಿವೆ ಎಂಬುದರ ಕುರಿತು ವರದಿ ಸಲ್ಲಿಸುವಂತೆ ನಿವೃತ್ತ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸುಪ್ರೀಂ ಕೋರ್ಟ್ ನೇಮಿಸಿತ್ತು.

‘10 ವರ್ಷಗಳ ಅವಧಿಯಲ್ಲಿ ಅನೇಕ ಬಡಾವಣೆಗಳ ನಿರ್ಮಾಣಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅನುಮೋದನೆ ನೀಡಿದೆ. ಈ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ. ಎಲ್ಲವನ್ನೂ ಪರಾಮರ್ಶಿಸಿ ಆಗಸ್ಟ್ ಅಂತ್ಯದೊಳಗೆ ವರದಿ ಸಲ್ಲಿಸಲಾಗುವುದು’ ಎಂದು ಎ.ವಿ. ಚಂದ್ರಶೇಖರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಈವರೆಗೆ 3,580 ಅರ್ಜಿಗಳು ಬಂದಿವೆ. ಈ ಬಗ್ಗೆ ಮಧ್ಯಂತರ ವರದಿಯನ್ನೂ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾಗುವುದು. ಇನ್ನೂ 2 ಸಾವಿರಕ್ಕಿಂತ ಹೆಚ್ಚು ಅರ್ಜಿಗಳು ಬರುವ ನಿರೀಕ್ಷೆ ಇದೆ’ ಎಂದು ಹೇಳಿದರು.

‘ಸಮಿತಿಯ ಕಾರ್ಯಕಲಾಪಕ್ಕೆ ಅಡ್ಡಿಪಡಿಸಿದ ಆರೋಪದಲ್ಲಿ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಅವರಿಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಲಾಗಿದೆ. ಮೂರ್ನಾಲ್ಕು ದಿನಗಳಲ್ಲಿ ಅದು ವಿಚಾರಣೆಗೆ ಬರಲಿದೆ. ಅಲ್ಲದೇ, ಪೊಲೀಸ್ ಠಾಣೆಗೂ ದೂರು ಸಲ್ಲಿಕೆಯಾಗಿದೆ’ ಎಂದು ವಿವರಿಸಿದರು.


ಸಹಾಯ ಕೇಂದ್ರ ಮತ್ತೆ ಆರಂಭ



ಎ.ವಿ. ಚಂದ್ರಶೇಖರ್

ದಾಖಲೆ ಸಹಿತ ಅರ್ಜಿ ಸಲ್ಲಿಸಲು ಎರಡು ಕಡೆ ಸಹಾಯ ಕೇಂದ್ರಗಳನ್ನು ಜುಲೈ 1ರಿಂದ ಮತ್ತೆ ಆರಂಭಿಸಲಾಗುವುದು ಎಂದು ಎ.ವಿ. ಚಂದ್ರಶೇಖರ್ ತಿಳಿಸಿದರು.

‘ಕೋವಿಡ್ ಕಾರಣದಿಂದ ನಾಲ್ಕೂ ಸಹಾಯ ಕೇಂದ್ರಗಳನ್ನು ತಾತ್ಕಾಲಿಕವಾಗಿ ಮುಚ್ಚಲಾಗಿತ್ತು. ಸೋಂಕಿನ ಪ್ರಮಾಣ ಕಡಿಮೆ ಆಗಿರುವುದರಿಂದ ಮೇಡಿ ಅಗ್ರಹಾರದ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆ ಮತ್ತು ಸೋಮಶೆಟ್ಟಿಹಳ್ಳಿ ಸಮುದಾಯ ಭವನದಲ್ಲಿ ಸಹಾಯ ಕೇಂದ್ರಗಳನ್ನು ತೆರೆಯಲಾಗುವುದು’ ಎಂದರು. ‘ಬೆಳಿಗ್ಗೆ 10ರಿಂದ ಸಂಜೆ 4.30ರವರೆಗೆ ಈ ಕೇಂದ್ರಗಳು ಕಾರ್ಯ ನಿರ್ವಹಿಸಲಿವೆ. ಕೋವಿಡ್ ನಿಯಮಗಳನ್ನು ಪಾಲಿಸಲು ಸೂಚನೆ ನೀಡಲಾಗಿದೆ. ಜನರ ಸ್ಪಂದನೆ ನೋಡಿಕೊಂಡು ಉಳಿದೆರಡು ಕೇಂದ್ರಗಳನ್ನೂ ತೆರೆಯಲಾಗುವುದು’ ಎಂದು ಹೇಳಿದರು.



ಪ್ಯಾರಿಸ್ ವರ್ಲ್ಡ್ ಕಪ್ ನಲ್ಲಿ ಪ್ಯಾರಿಸ್ ಆರ್ಚರ್ ಮೂರು ಚಿನ್ನ ಗೆದ್ದಿದ್ದಾರೆ!

ತಾಳೆಯಾಗುತ್ತಿಲ್ಲ ಜನವರಿ ತಿಂಗಳ ಹಾಗೂ ಜೂನ್ ತಿಂಗಳ ಸಭೆಯ ಮಾಹಿತಿ

ಬಿಡಿಎ ಅಧಿಕಾರಿಗಳಿಂದ ಸಿ.ಎಂಗೆ ತಪ್ಪು ಮಾಹಿತಿ?

• ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನಡೆಸಿದ ಪ್ರಗತಿ ಪರಿಶೀಲನಾ ಸಭೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳು ತಪ್ಪು ಮಾಹಿತಿ ನೀಡಿ ಪೇಚಿಗೆ ಸಿಲುಕಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರು 2021ರ ಜನವರಿ 18ರಂದು ನಡೆಸಿದ ಬಿಡಿಎ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರಾಧಿಕಾರದ ಅಧಿಕಾರಿಗಳು ನೀಡಿದ ಮಾಹಿತಿ ಹಾಗೂ 2021ರ ಜೂನ್ 8ರಂದು ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ನೀಡಿದ ಮಾಹಿತಿ ನಡುವೆ ಸಾಕಷ್ಟು ವ್ಯತ್ಯಾಸಗಳು ಮತ್ತು ತಪ್ಪುಗಳು ಇವೆ.

ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಬಿಡಿಎ 4500 ಮೂಲೆ ನಿವೇಶನಗಳ ಹರಾಜು ನಡೆಸಲು ಸಿದ್ಧತೆ ನಡೆಸಿದೆ. ಇದುವರೆಗೆ 1,827 ನಿವೇಶನಗಳನ್ನು ಹರಾಜಿನಲ್ಲಿ ಮಾರಾಟ ಮಾಡಿದೆ. ಜನವರಿಯ ಸಭೆಯಲ್ಲಿ ಅಧಿಕಾರಿಗಳು ನೀಡಿರುವ ಮಾಹಿತಿ ಪ್ರಕಾರ 2020ರ ಜೂನ್ 17ರಂದು ಹರಾಜಿಗೆ ಅಧಿಸೂಚನೆ ಹೊರಡಿಸಿದ 162 ನಿವೇಶನಗಳ ವಿಕ್ರಯದಿಂದ ಬಿಡಿಎಗೆ ಸಂದಾಯವಾಗಬೇಕಾದ ಮೊತ್ತ ₹ 210.82 ಕೋಟಿ. ಜೂನ್ ತಿಂಗಳ ಸಭೆಯ ಮಾಹಿತಿ ಪ್ರಕಾರ ಈ 162 ನಿವೇಶನಗಳ ವಿಕ್ರಯದಿಂದ ಬಿಡಿಎಗೆ ಸಂದಾಯವಾಗಬೇಕಾದ ಮೊತ್ತ ₹ 199.31 ಕೋಟಿ. ಹಾಗಾದರೆ ₹ 11.51 ಕೋಟಿ ಎಲ್ಲಿಗೆ ಹೋಯಿತು ಎಂಬ ಪ್ರಶ್ನೆ ಮೂಡಿದೆ. ಸಂದಾಯವಾದ ಮೊತ್ತದ ವಿವರವನ್ನು ಅಧಿಕಾರಿಗಳು ಅಧಿಸೂಚನೆಯ ದಿನಾಂಕಕ್ಕೆ ಅನುಗುಣವಾಗಿ ಒದಗಿಸದೆಯೇ ಮೊತ್ತವನ್ನು ಮಾತ್ರ ಸಭೆಯಲ್ಲಿ ಪ್ರಸ್ತುತಪಡಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಮೂಲೆ ನಿವೇಶನಗಳ ಹರಾಜಿಗೆ 2020ರ ಆ. 14ರಂದು ಪ್ರಕಟಿಸಿದ ಅಧಿಸೂಚನೆ ಪ್ರಕಾರ ಪ್ರಾಧಿಕಾರ 228 ನಿವೇಶನಗಳನ್ನು ವಿಲೇವಾರಿ ಮಾಡಿದೆ. ಅದಕ್ಕೆ ₹ 103. 87 ಕೋಟಿ ಮೂಲದರವನ್ನು ಬಿಡಿಎ ನಿಗದಿಪಡಿಸಿತ್ತು ಎನ್ನುತ್ತದೆ ಜನವರಿ ತಿಂಗಳ ಸಭೆಯ ಮಾಹಿತಿ. ಆದರೆ, ಜೂನ್ ತಿಂಗಳ ಸಭೆಯ ಮಾಹಿತಿ ಪ್ರಕಾರ ಅದಕ್ಕೆ ಬಿಡಿಎ ನಿಗದಿಪಡಿಸಿದ್ದು ₹ 96.45 ಕೋಟಿ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನಿವೇಶನಗಳ ಸಂಖ್ಯೆ ಅಷ್ಟೇ (228) ಇದೆ. ಇಷ್ಟು ನಿವೇಶನಗಳ ಹರಾಜಿನಿಂದ ಬಿಡಿಎಗೆ ₹ 171.99 ಕೋಟಿ ಸಂದಾಯವಾಗಬೇಕು ಎಂದು ಬಿಡಿಎ ಜನವರಿಯಲ್ಲಿ ತಿಳಿಸಿತ್ತು. ಆದರೆ, 228 ನಿವೇಶನಗಳ ಮಾರಾಟದಿಂದ ಸಂದಾಯವಾಗಬೇಕಿರುವುದು ₹ 159.54 ಕೋಟಿ ಎಂದು ಜೂನ್ ತಿಂಗಳ ಸಭೆಯಲ್ಲಿ ತಿಳಿಸಿದೆ. ಇಲ್ಲಿ ದಿಢೀರ್ ₹ 12.45 ಕೋಟಿ ವ್ಯತ್ಯಾಸವಾಗಿದ್ದು ಹೇಗೆ?

ಮೂಲೆ ನಿವೇಶನಗಳ ಮಾರಾಟದ ಕುರಿತ ಅಂಕಿ–ಅಂಶಗಳಲ್ಲೇ ಇಂತಹ ಹತ್ತಾರು ತಪ್ಪುಗಳು ಕಾಣಸಿಗುತ್ತವೆ.

930 ಫ್ಲ್ಯಾಟ್‌ಗಳಿಗೂ, 205 ಫ್ಲ್ಯಾಟ್‌ಗಳಿಗೂ ಒಂದೇ ದರ!

ಮೂರು ವರ್ಷಗಳಲ್ಲಿ ಮಾರಾಟ ಮಾಡಿರುವ ನಿವೇಶನಗಳು/ ಫ್ಲ್ಯಾಟ್‌ಗಳು/ ಮೂಲೆನಿವೇಶನಗಳ ಕುರಿತ ಕೋಷ್ಟಕವನ್ನು ಬಿಡಿಎ ಅಧಿಕಾರಿಗಳು ಮುಖ್ಯಮಂತ್ರಿ ಅವರು ನಡೆಸಿದ ಎರಡೂ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಒದಗಿಸಿದ್ದಾರೆ. ಜನವರಿ ತಿಂಗಳ ಸಭೆಯಲ್ಲಿ ನೀಡಿದ ಕೋಷ್ಟಕದ ಪ್ರಕಾರ 2019–20ನೇ ಸಾಲಿನಲ್ಲಿ 930 ಫ್ಲ್ಯಾಟ್‌ಗಳನ್ನು ಬಿಡಿಎ ಮಾರಾಟ ಮಾಡಿ ₹ 129 ಕೋಟಿ ವರಮಾನ ಗಳಿಸಿದೆ. ಆದರೆ, ಜೂನ್ ತಿಂಗಳ ಸಭೆಯಲ್ಲಿ ಪ್ರಸ್ತುತ ಪಡಿಸಿದ ಮಾಹಿತಿ ಪ್ರಕಾರ, ಬಿಡಿಎ 2019–20ನೇ ಸಾಲಿನಲ್ಲಿ ಕೇವಲ 205 ಫ್ಲ್ಯಾಟ್‌ಗಳನ್ನು ಮಾರಾಟ ಮಾಡಿ ₹ 129 ಕೋಟಿ ವರಮಾನ ಗಳಿಸಿದೆ!

ಮೂಲೆ ನಿವೇಶನ, ನಿವೇಶನ, ಫ್ಲ್ಯಾಟ್ ಮಾರಾಟ 3 ವರ್ಷಗಳ ವಿವರ (ಬಿಡಿಎ ಅಧಿಕಾರಿಗಳು 2021ರ ಜೂನ್ 8ರ ಸಭೆಯಲ್ಲಿ ಪ್ರಸ್ತುತ ಪಡಿಸಿದ್ದು)

ವಿವರ	2018-19		2019-20		2020-21	
	ಸಂಖ್ಯೆ	ಗಳಿಕೆ (₹ ಕೋಟಿ)	ಸಂಖ್ಯೆ	ಗಳಿಕೆ (₹ ಕೋಟಿ)	ಸಂಖ್ಯೆ	ಗಳಿಕೆ (₹ ಕೋಟಿ)
ಮೂಲೆ ನಿವೇಶನಗಳು	330	385	97	130	1566	1408
ನಿವೇಶನಗಳು	4970	689	-	225	-	117
ಫ್ಲ್ಯಾಟ್‌ಗಳು	419	339	205	129	104	56

ಗುತ್ತಿಗೆ ಆಧಾರದಲ್ಲಿ ವೈದ್ಯರ ನೇಮಕ

ಈವರೆಗೆ 4,000ಕ್ಕೂ ಹೆಚ್ಚು ವೈದ್ಯರ ನೇಮಕಾತಿ: ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಬಿಬಿಎಸ್ ಪದವೀಧರರು ಸರ್ಕಾರಿ ಆಸ್ಪತ್ರೆಗಳಲ್ಲಿ ಕಡ್ಡಾಯ ಸೇವೆ ಸಲ್ಲಿಸುವ ವ್ಯವಸ್ಥೆ ಜಾರಿಯಾಗಿದ್ದು, ಈ ಮೂಲಕ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ವಿವಿಧ ಹುದ್ದೆಗಳಿಗೆ ಒಟ್ಟು 2,053 ವೈದ್ಯರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಲಾಗಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಇದೊಂದು ಐತಿಹಾಸಿಕ ನೇಮಕಾತಿ ಪ್ರಕ್ರಿಯೆ. ಇತ್ತೀಚೆಗೆ 1,750 ವೈದ್ಯರ ನೇರ ನೇಮಕಾತಿ ನಡೆದಿದೆ. ಇದಲ್ಲದೆ, ಕೊರೊನಾ ಸಂದರ್ಭದಲ್ಲಿ ಒಟ್ಟು 4 ಸಾವಿರ ವೈದ್ಯರನ್ನು ನೇಮಿಸಿಕೊಳ್ಳಲಾಗಿದೆ ಎಂದರು.

ಎಂಬಿಬಿಎಸ್ ಪದವೀಧರರು ಸರ್ಕಾರಿ ಆಸ್ಪತ್ರೆಯಲ್ಲಿ ಕಡ್ಡಾಯ ಒಂದು ವರ್ಷ ಸೇವೆ ಸಲ್ಲಿಸುವ ನಿಯಮ ಜಾರಿ ಬಂದಿರುವುದರಿಂದ 1,001 ವೈದ್ಯರನ್ನು 18 ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಗುತ್ತಿಗೆ ನೇಮಕ ಮಾಡಲಾಗಿದೆ. ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳ ಐಸಿಯುನಲ್ಲಿ ಕೆಲಸ ಮಾಡಲು 666 ವೈದ್ಯರನ್ನು ನೇಮಕ ಮಾಡಲಾಗಿದೆ. ಜೂನ್ 30ರೊಳಗೆ ಅವರೆಲ್ಲರೂ ಸ್ಥಳಕ್ಕೆ ಹೋಗಿ ಕೆಲಸ ಆರಂಭಿಸಲಿದ್ದಾರೆ ಎಂದು ಹೇಳಿದರು.



2 ಡಿಜಿ ಔಷಧಿ ಖರೀದಿಸಲು ತಜ್ಞರು ಸಲಹೆ ನೀಡಿದ್ದಾರೆ. ಮೂರನೇ ಅಲೆ ಬರುವುದಕ್ಕೆ ಮುನ್ನವೇ ಈ ಔಷಧಿ ಖರೀದಿಸಲಾಗುವುದು

ಡಾ. ಕೆ. ಸುಧಾಕರ್
ಆರೋಗ್ಯ ಸಚಿವ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 348 ವೈದ್ಯರ ಹುದ್ದೆ ತುಂಬಲಾಗಿದೆ. ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 90, ನೆಫ್ರೋ ಯುರಾಲಜಿಯಲ್ಲಿ 3 ವೈದ್ಯರನ್ನು ನೇಮಿಸಲಾಗಿದೆ. ಒಟ್ಟು 2,108 ಖಾಲಿ ಹುದ್ದೆಗಳು ಇದ್ದು, 2,053 ವೈದ್ಯರೂ ನೇಮಕಗೊಂಡಿದ್ದಾರೆ ಎಂದು ಹೇಳಿದರು.

ಶೇ 95 ರಷ್ಟು ಗುಣಮುಖರು: ರಾಜ್ಯದಲ್ಲಿ ಕೋವಿಡ್ ಸೋಂಕಿತರಲ್ಲಿ ಶೇ 95 ರಷ್ಟು ಮಂದಿ ಗುಣಮುಖರಾಗಿದ್ದಾರೆ. ದೃಢಪ್ರಮಾಣ ದರ ಶೇ 2.62 ರಷ್ಟಿದೆ. ಕೊಡಗು, ಮೈಸೂರು, ಹಾಸನ ಹಾಗೂ ದಕ್ಷಿಣ ಕನ್ನಡದಲ್ಲಿ ದೃಢಪ್ರಮಾಣ ದರ ಶೇ 5 ಕ್ಕಿಂತ ಅಧಿಕವಾಗಿದೆ. ನಿತ್ಯ ಸುಮಾರು 1.5 ಲಕ್ಷ ಪರೀಕ್ಷೆ ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ವಿದ್ಯಾರ್ಥಿಗಳಿಗೆ ಲಸಿಕೆ

‘ರಾಜ್ಯದಲ್ಲಿ 24.37 ಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ವ್ಯಾಸಂಗ ಮಾಡುತ್ತಿದ್ದು, ಅವರಿಗೆ ಲಸಿಕೆ ನೀಡುವ ಕಾರ್ಯ ಆರಂಭಿಸಿದ್ದೇವೆ’ ಎಂದು ಡಾ.ಸುಧಾಕರ್ ತಿಳಿಸಿದರು.

‘ಹತ್ತು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡಲು ಚಿಂತನೆ ನಡೆಸಿದ್ದೇವೆ. ಲಸಿಕೆ ಪ್ರಮಾಣ ಬಹಳ ಕಡಿಮೆ ಇದೆ. ಇನ್ನೆರಡು ದಿನಗಳಲ್ಲಿ ದೆಹಲಿಗೆ ಭೇಟಿ ನೀಡಿ, ಲಸಿಕೆ ಪ್ರಮಾಣ ಹೆಚ್ಚಿಸುವಂತೆ ಕೇಂದ್ರ ಸಚಿವರಿಗೆ ಮನವಿ ಮಾಡುತ್ತೇನೆ’ ಎಂದು ಅವರು ಹೇಳಿದರು.

181 ವೈದ್ಯರಿಗೆ ಸನ್ಮಾನ

ಬೆಂಗಳೂರು: ಕೋವಿಡ್ ಸಮಯದಲ್ಲಿ ಜೀವದ ಹಂಗು ತೊರೆದು ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಆಸ್ಪತ್ರೆಯ 181 ವೈದ್ಯರನ್ನು ಅಭಿನಂದಿಸಲು ಇನ್ನರ್‌ವ್ಹೀಲ್ ಕ್ಲಬ್ ಬೆಂಗಳೂರು ಡಿಸ್ಟ್ರಿಕ್ಟ್ 319 ನಿರ್ಧರಿಸಿದೆ.

ಲ್ಯಾವೆಲ್ಲಾ ರಸ್ತೆಯಲ್ಲಿರುವ ರೋಟರಿ ಹೌಸ್ ಆಫ್ ಫ್ರೆಂಡ್‌ಶಿಪ್‌ನಲ್ಲಿ ಜುಲೈ 1ರಂದು ನಡೆಯುವ ಸಮಾರಂಭದಲ್ಲಿ ಬೌರಿಂಗ್ ಆಸ್ಪತ್ರೆಯ 100 ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಬಿಬಿಎಂಪಿ ತುರ್ತು ನಿಗಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 81 ಮಂದಿ ವೈದ್ಯರನ್ನು ಸನ್ಮಾನಿಸಲಾಗುತ್ತದೆ.

ಮಕ್ಕಳಿಗೆ ಪೌಷ್ಟಿಕ ಆಹಾರದ ಕಿಟ್: ಅಶೋಕ

ಬೆಂಗಳೂರು: ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಸಮೀಕ್ಷೆಯನ್ನು ನಡೆಸಿ ಅವರಿಗೆ ಪೌಷ್ಟಿಕ ಆಹಾರದ ಕಿಟ್‌ಗಳನ್ನು ನೀಡಲು ಉದ್ದೇಶಿಸಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಸೋಮವಾರ ಕುಮಾರಸ್ವಾಮಿ ಲೇಔಟ್‌ನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕೊರೊನಾ ಮೂರನೇ ಅಲೆ ಮಕ್ಕಳನ್ನು ಬಾಧಿಸುವುದನ್ನು ತಡೆಯುವ ನಿಟ್ಟಿನಲ್ಲಿ ಪೌಷ್ಟಿಕತೆ ಹೆಚ್ಚಿಸುವ ಅಗತ್ಯತೆ ಇದೆ. ಇದಕ್ಕಾಗಿ ಸರ್ಕಾರ ಮಾರ್ಗಸೂಚಿಯನ್ನೂ ಸಿದ್ಧಪಡಿಸಿದೆ’ ಎಂದು ಹೇಳಿದರು.

ಲಸಿಕೆ: ನಿರೀಕ್ಷೆಗಿಂತಲೂ ಕಡಿಮೆ ಪೂರೈಕೆ

ಪ್ರಜಾವಾಣಿ ವಾರ್ತೆ


ನವದೆಹಲಿ: ಭಾರತದ ಎರಡು ಕಂಪನಿಗಳು ತಮ್ಮ ಉತ್ಪಾದನೆಯ ಸಾಮರ್ಥ್ಯಕ್ಕಿಂತಲೂ ಶೇಕಡ 30ರಷ್ಟು ಕಡಿಮೆ ಲಸಿಕೆಗಳನ್ನು ಈ ವರ್ಷದ ಮೊದಲ ಐದು ತಿಂಗಳಲ್ಲಿ ಪೂರೈಸಿವೆ ಎನ್ನುವುದು ವರದಿಯಾಗಿದೆ.

ಕೇಂದ್ರ ಆರೋಗ್ಯ ಸಚಿವಾಲಯ ಈ ಬಗ್ಗೆ ವಿಶ್ಲೇಷಣೆ ನಡೆಸಿ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ.

ಜತೆಗೆ, ಆಗಸ್ಟ್‌ನಿಂದ ಡಿಸೆಂಬರ್ ತಿಂಗಳಲ್ಲಿ ದೊರೆಯುವ ಲಸಿಕೆಯ ಪ್ರಮಾಣ ನಿರೀಕ್ಷೆಯಷ್ಟು ದೊರೆಯುವುದಿಲ್ಲ ಎಂದು ತಿಳಿಸಿದೆ.

ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಮತ್ತು ಭಾರತ್ ಬಯೋಟೆಕ್‌ನಿಂದ ಡಿಸೆಂಬರ್ ವೇಳೆಗೆ 216 ಕೋಟಿ ಡೋಸ್ ದೊರೆಯುವ ನಿರೀಕ್ಷೆ ಇತ್ತು. ಆದರೀಗ 135 ಕೋಟಿ ಡೋಸ್‌ಗಳು ಲಭ್ಯವಾಗಬಹುದು ಎಂದು ತಿಳಿಸಿದೆ. ಜನವರಿ ಮತ್ತು ಮೇ ತಿಂಗಳಲ್ಲಿ ಈ ಎರಡು ಕಂಪನಿಗಳು 22.07 ಕೋಟಿ ಡೋಸ್‌ಗಳನ್ನು ಕೇಂದ್ರ ಸರ್ಕಾರಕ್ಕೆ ಪೂರೈಸಿವೆ. ಜತೆಗೆ, 4.19 ಕೋಟಿ ಡೋಸ್‌ಗಳನ್ನು ನೇರವಾಗಿ ರಾಜ್ಯಗಳಿಗೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ವಿತರಿಸಲಾಗಿದೆ. ಆದರೆ, ಈ ಪ್ರಮಾಣವು ಉತ್ಪಾದನೆಯ ಬಗ್ಗೆ ಘೋಷಿಸಿಕೊಂಡಿದ್ದಕ್ಕಿಂತಲೂ ಅತಿ ಕಡಿಮೆ ಎಂದು ತಿಳಿಸಿದೆ.

‘ಎಸ್‌ಐಐ ಉತ್ಪಾದನೆಯನ್ನು ಹೆಚ್ಚಿಸಲಿದ್ದು, ಪ್ರತಿ ತಿಂಗಳು 5 ಕೋಟಿ ಡೋಸ್‌ಗಳಿಂದ 6.5 ಕೋಟಿ ಡೋಸ್ ತಯಾರಿಸಲಿದೆ. ಅದೇ ರೀತಿ, ಭಾರತ್ ಬಯೋಟೆಕ್ ಸಹ ಪ್ರತಿ ತಿಂಗಳು 90 ಲಕ್ಷದಿಂದ 2 ಕೋಟಿಗೆ ಹೆಚ್ಚಿಸಲಿದೆ. 2021ರ ಜುಲೈ ವೇಳೆಗೆ 5.5 ಕೋಟಿ ಡೋಸ್ ಉತ್ಪಾದಿಸಲಿದೆ’ ಎಂದು ಕೇರಳ ಹೈಕೋರ್ಟ್‌ಗೆ ಕಳೆದ ತಿಂಗಳು ಆರೋಗ್ಯ ಸಚಿವಾಲಯ ಪ್ರಮಾಣ ಪತ್ರ ಸಲ್ಲಿಸಿತ್ತು.



ಲಸಿಕೆ ಅಭಿಯಾನದಲ್ಲಿ ಭಾರತ ಮುಂದು: ಡಿವಿಎಸ್


ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ 32.66 ಕೋಟಿ ಜನರಿಗೆ ಕೋವಿಡ್ ಲಸಿಕೆಗಳನ್ನು ನೀಡಿದ್ದು, ಲಸಿಕೆ ಆಂದೋಲನದಲ್ಲಿ ಭಾರತವು ಅಮೆರಿಕವನ್ನು ಹಿಂದಿಕ್ಕಿದೆ ಎಂದು ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ ತಿಳಿಸಿದರು.

ವಿಶ್ವದಲ್ಲೇ ಗರಿಷ್ಠ ಪ್ರಮಾಣದಲ್ಲಿ ಲಸಿಕೆ ನೀಡಿದ ದೇಶವಾಗಿ ಭಾರತ ಹೊರಹೊಮ್ಮಿದೆ ಎಂದು ಅವರು ಬಿಜೆಪಿ ಕಚೇರಿಯಲ್ಲಿ ನಡೆದ ಇ–ಚಿಂತನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಹಿಂದೆ ದೇಶದಲ್ಲಿ ಏಳು ರೆಮಿಡಿಸಿವಿರ್ ಉತ್ಪಾದನಾ ಘಟಕಗಳಿದ್ದವು. ನರೇಂದ್ರ ಮೋದಿ ಅವರ ವಿಶೇಷ ಮುತುವರ್ಜಿಯಿಂದ ಮತ್ತು ಔಷಧ ಕಂಪನಿಗಳ ಜತೆ ಮಾತುಕತೆ ನಡೆಸಿದ್ದರಿಂದ ರೆಮಿಡಿಸಿವಿರ್ ಉತ್ಪಾದನಾ ಘಟಕಗಳ ಸಂಖ್ಯೆ 17ಕ್ಕೆ ಏರಿದೆ. ಕೋವಿಡ್‌ನ ಸಮರ್ಥ ನಿರ್ವಹಣೆಗೆ ಇದು ಸಹಕರಿಸಿದೆ ಎಂದು ಹೇಳಿದರು.

ರಾಜ್ಯದಲ್ಲಿ ಆರೋಗ್ಯ ಸಮಸ್ಯೆ ನಿವಾರಣೆಗೆ ನೆರವಾಗುವ ದೃಷ್ಟಿಯಿಂದ ಮುಂಚೂಣಿ ಯೋಧರನ್ನಾಗಿ ಬಿಜೆಪಿ ಕಾರ್ಯಕರ್ತರನ್ನು ತರಬೇತಿಗೊಳಿಸಲಾಗುತ್ತಿದೆ. ಕರ್ನಾಟಕದಿಂದ 1.20 ಲಕ್ಷ ಕಾರ್ಯಕರ್ತರನ್ನು ಸಿದ್ಧಪಡಿಸಲಾಗುವುದು ಎಂದು ಅವರು ತಿಳಿಸಿದರು.



4,500 ಎಕರೆ ಕೆರೆ ಪ್ರದೇಶ ಒತ್ತುವರಿ

837 ಕೆರೆಗಳ ಜಾಗ ಕಬಳಿಕೆ: ಜಿಲ್ಲಾಡಳಿತದ ಸಮೀಕ್ಷೆಯಲ್ಲಿ ಬಹಿರಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ 837 ಕೆರೆಗಳ 4,500 ಎಕರೆ ಪ್ರದೇಶ ಒತ್ತುವರಿಯಾಗಿರುವುದು ಜಿಲ್ಲಾಡಳಿತ ನಡೆಸಿದ ಪ್ರಾಥಮಿಕ ಸಮೀಕ್ಷೆಯಲ್ಲಿ ಬಹಿರಂಗವಾಗಿದೆ.

ಜಿಲ್ಲೆಯಲ್ಲಿ 837 ಕೆರೆಗಳು 22,810 ಎಕರೆ ಪ್ರದೇಶದಲ್ಲಿ ಹರಡಿಕೊಂಡಿದ್ದವು. ಈ ಪೈಕಿ ಶೇ 20ರಷ್ಟು ಪ್ರದೇಶ ಒತ್ತುವರಿಯಾಗಿದೆ. 91 ಕೆರೆಗಳು ಒತ್ತುವರಿಯಾಗಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.


‘ಜಿಲ್ಲೆಯಲ್ಲಿನ ಎಲ್ಲ ಕೆರೆಗಳ ಸಮೀಕ್ಷೆ ನಡೆಸಬೇಕು ಎಂದು ಜೂನ್ 15ರಂದು ಆದೇಶ ಮಾಡಿದ್ದು, ಒತ್ತುವರಿ ಆಗಿರುವ ಪ್ರದೇಶದ ವಿವರ ದಾಖಲಿಸುವಂತೆ ಸೂಚಿಸಲಾಗಿತ್ತು. ಬಿಬಿಎಂಪಿ, ಬಿಡಿಎ ಮತ್ತು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿನ ಕೆರೆಗಳ ಸಮೀಕ್ಷೆಯೂ ನಡೆಯುತ್ತಿದೆ’ ಎಂದು ಜಿಲ್ಲಾಧಿಕಾರಿ ಜೆ. ಮಂಜುನಾಥ್ ತಿಳಿಸಿದರು.

‘ಕೆರೆಗಳ ತೀರದಲ್ಲಿ ಕೆಲವು ರೈತರು ಕೃಷಿ ಚಟುವಟಿಕೆ ಆರಂಭಿಸಿದ್ದರೆ, ಬಡವರು ಮತ್ತು ನಿರ್ವಸಿತರು ಕೆರೆಯ ಪಕ್ಕದಲ್ಲಿ ಶೆಡ್‌ಗಳನ್ನು ಹಾಕಿಕೊಂಡು ಇದ್ದಾರೆ. ಈಗ ತಾತ್ಕಾಲಿಕವಾಗಿ ಈ ಜನ ಅಲ್ಲಿ ನೆಲೆಸಿದ್ದಾರೆ ಎಂದುಕೊಂಡರೂ, ಇವರೆಲ್ಲ ಅಲ್ಲಿಯೇ ಮನೆ ಕಟ್ಟಿದರೆ ಮುಂದೆ ಸಮಸ್ಯೆಯಾಗಲಿದೆ. ಜಲಮೂಲಗಳೂ ಕಲುಷಿತಗೊಳ್ಳಲಿವೆ. ಮಾನವ ಹಕ್ಕುಗಳನ್ನೂ ಗಮನದಲ್ಲಿರಿಸಿಕೊಂಡು ಒತ್ತುವರಿ ತೆರವು ಕಾರ್ಯ ಆರಂಭಿಸಲಾಗುವುದು’ ಎಂದು ಹೇಳಿದರು.

‘ಈ ಕುರಿತು ಇನ್ನೆರಡು ದಿನಗಳಲ್ಲಿ ಸಭೆ ನಡೆಯಲಿದೆ. ಕೆರೆಯ ಬಳಿಯ ಭೂಮಿಯ ಮಾಲೀಕತ್ವ ವಿವರ ಮತ್ತು ಕಟ್ಟಡ ನಿರ್ಮಾಣದ ದಿನಾಂಕ ಮತ್ತಿತರ ಅಂಶಗಳನ್ನು ಪರಿಶೀಲಿಸಿ, ಕ್ರಮ ಕೈಗೊಳ್ಳುವ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ’ ಎಂದೂ ಹೇಳಿದರು.

‘ಸರ್ಕಾರ ಮತ್ತು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ಯೋಜನೆಗಳ ಮೂಲಕ ಕೆರೆಗಳ ಸಂರಕ್ಷಣೆ ಕಾರ್ಯ ಕೈಗೆತ್ತಿಕೊಳ್ಳುವ ಚಿಂತನೆ ಇದೆ. ಕೆರೆಗಳ ಸುತ್ತ ತಂತಿ ಬೇಲಿ ಹಾಕುವುದು ಸೇರಿದಂತೆ ಅವುಗಳ ರಕ್ಷಣೆಗೆ ಎಲ್ಲ ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

125 ಕೆರೆಗಳು ‘ಅನಾಥ’: ಒತ್ತುವರಿಗೆ ಒಳಗಾಗಿರುವ 837 ಕೆರೆಗಳ ಪೈಕಿ 125 ಕೆರೆಗಳಿಗೆ ‘ವಾರಸುದಾರರೇ’ ಇಲ್ಲ. ಅಂದರೆ, ಈ ಕೆರೆಗಳ ನಿರ್ವಹಣೆ ಯಾವ ಸ್ಥಳೀಯ ಸಂಸ್ಥೆ ಅಥವಾ ಪಂಚಾಯಿತಿಗೆ ಸೇರಿದೆ ಎಂಬ ಬಗ್ಗೆ ಸ್ಪಷ್ಟತೆಯೇ ಇಲ್ಲ. ಇಂತಹ ಅಸ್ಪಷ್ಟಗಳ ಕಾರಣದಿಂದಲೇ ಬಹುತೇಕ ಕೆರೆಗಳು ಕಲುಷಿತಗೊಳ್ಳುತ್ತಿವೆಯಲ್ಲದೆ, ಒತ್ತುವರಿಗೂ ಒಳಗಾಗುತ್ತಿವೆ. ಮುಂದಿನ ಸಭೆಯಲ್ಲಿ ಈ ಬಗ್ಗೆಯೂ ನಿರ್ಧಾರ ಕೈಗೊಳ್ಳಲಾಗುತ್ತದೆ ಎಂದು ಅಧಿಕಾರಿಯೊಬ್ಬರು ಹೇಳಿದರು.



ಲಕ್ಷ ಮನೆ ಯೋಜನೆ ಅರ್ಜಿ ರದ್ದು: ವಿರೋಧ

ಬೆಂಗಳೂರು: ಒಂದು ಲಕ್ಷ ಮನೆ ನಿರ್ಮಾಣ ಯೋಜನೆಗೆ ಈ ಹಿಂದೆ ಹಾಕಿರುವ ಎಲ್ಲ ಅರ್ಜಿಗಳನ್ನು ರದ್ದು ಮಾಡಲು ಸರ್ಕಾರ ನಿರ್ಧಾರ ಕೈಗೊಂಡಿದ್ದು, ಇದಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಈ ಸಂಬಂಧ ‘ಪ್ರಜಾವಾಣಿ’ ಸೋಮವಾರದ ಸಂಚಿಕೆಯಲ್ಲಿ ‘ಬಡವರ ವಸತಿ ಕನಸಿಗೆ ಕವಿದಿದೆ ಕಾರ್ಮೋಡ’ ಎಂಬ ವರದಿ ಪ್ರಕಟಿಸಲಾಗಿದ್ದು, ಇದಕ್ಕೆ ವ್ಯಕ್ತವಾದ ಆಯ್ದ ಪ್ರತಿಕ್ರಿಯೆಗಳ ಇಂತಿವೆ.


ಬ್ರ್ಯಾಂಡ್ ಬೆಂಗಳೂರು
ದಾರಿ ಹತ್ತಾರು
ಬಡವರ ವಸತಿ ಕನಸಿಗೆ ಕವಿದಿದೆ ಕಾರ್ಮೋಡ
515
46,998
42,361

‘ಸೋಮಣ್ಣ ರಾಜೀನಾಮೆ ನೀಡಬೇಕು’

ಒಂದು ಲಕ್ಷ ಮನೆ ನಿರ್ಮಾಣ ಯೋಜನೆಯಡಿ ಈಗಾಗಲೇ ಸಲ್ಲಿಕೆಯಾಗಿದ್ದ ಅರ್ಜಿಗಳನ್ನು ರದ್ದುಪಡಿಸುವ ನಿರ್ಧಾರದ ಹಿಂದೆ ತಮ್ಮ ಪಕ್ಷದ ಕಾರ್ಯಕರ್ತರು ಮತ್ತು ಅನುಯಾಯಿಗಳಿಗೆ ಅನುಕೂಲ ಮಾಡಿಕೊಡುವ ಆಲೋಚನೆ ಇದ್ದಂತೆ ಕಾಣುತ್ತಿದೆ. ಇಂತಹ ನಿರ್ಧಾರಗಳನ್ನು ದಿಕ್ಕೆಟ್ಟ ಸರ್ಕಾರಗಳು ಮಾತ್ರ ಕೈಗೊಳ್ಳಲು ಸಾಧ್ಯ. ಈಗಾಗಲೇ 48,614 ಫಲಾನುಭವಿಗಳಿಗೆ ಆಯ್ಕೆ ಪತ್ರವನ್ನು ನೀಡಲಾಗಿದೆ. ಆದಾಯದ ಮಿತಿಯನ್ನು ₹3 ಲಕ್ಷಕ್ಕೆ ಏರಿಕೆ ಮಾಡುವ ಮೂಲಕ ಕಡು ಬಡವರಿಗೆ ಅನ್ಯಾಯ ಮಾಡಲಾಗುತ್ತಿದೆ. ಭೂಸ್ವಾಧೀನ ಸೇರಿ ಯಾವುದೇ ಪ್ರಕ್ರಿಯೆ ನಡೆಸದೆ ಅರ್ಜಿ ಆಹ್ವಾನಿಸಲಾಗಿತ್ತು ಎಂಬ ಕಾರಣವನ್ನು ಸರ್ಕಾರ ನೀಡಿದೆ. ಅದಕ್ಕೆ ಯಾವುದೇ ಅರ್ಥವಿಲ್ಲ. ಅದು ಸರ್ಕಾರದಿಂದ ಆದ ಲೋಪ. ಅರ್ಜಿದಾರರು ಯಾವ ತಪ್ಪು ಮಾಡಿದ್ದಾರೆ. ಜೂನ್ ಅಂತ್ಯದ ವೇಳೆಗೆ 30 ಸಾವಿರ ಮನೆಗಳನ್ನು ಹಂಚಿಕೆ ಮಾಡದಿದ್ದರೆ ರಾಜೀನಾಮೆ ನೀಡುವುದಾಗಿ ಸಚಿವ ವಿ. ಸೋಮಣ್ಣ ಅವರು ಈ ಹಿಂದೆ ಹೇಳಿದ್ದರು. ಆಗಸ್ಟ್‌ನಲ್ಲಿ 5 ಸಾವಿರ ಮನೆಗಳನ್ನು ಹಂಚಿಕೆ ಮಾಡುವುದಾಗಿ ಈಗ ಹೇಳುತ್ತಿದ್ದಾರೆ. ಮಾತಿಗೆ ಬದ್ಧರಾಗಿ ರಾಜೀನಾಮೆ ನೀಡಬೇಕು.

– **ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ**

‘ಬ್ಯಾಂಕ್ ಸಾಲವನ್ನು ದುಡಿದು ತೀರಿಸುತ್ತೇವೆ’



2017ರಲ್ಲೇ ಅರ್ಜಿ ಹಾಕಿ ಕಾಯುತ್ತಿದ್ದೇವೆ. ಆದಾಯ ಪ್ರಮಾಣಪತ್ರ ಪಡೆಯಲು ಕಷ್ಟಪಟ್ಟು ದುಡಿದ ಒಂದು ಸಾವಿರ ಖರ್ಚು ಮಾಡಿದ್ದೇವೆ. ಈಗ ಸರ್ಕಾರ ಬೇರೆ ರೀತಿ ಹೇಳುತ್ತಿದೆ. ₹83 ಸಾವಿರ ಆದಾಯ ಮಿತಿ ಇರುವ ಕಾರಣ ಹಣ ಕಟ್ಟಲು ನಾವು ಅರ್ಹರಲ್ಲ ಎಂದು ಸರ್ಕಾರ ತೀರ್ಮಾನಿಸಿದೆ. ನಮಗೆ ಹಣ ಹೊಂದಿಸಲು ಕಷ್ಟ. ಆದರೆ, ಬ್ಯಾಂಕ್ ಸಾಲ ಕೊಡುವುದರಿಂದ ಸ್ವಂತ ಮನೆಯಲ್ಲಿದ್ದುಕೊಂಡು ದುಡಿದು ಕಂತು ಪಾವತಿಸುತ್ತೇವೆ.

ಗೋವಿಂದರಾಜ್
ಮಲ್ಲೇಶ್ವರದ ವಲ್ಲವರಪುರ ನಿವಾಸಿ

‘ರಾಜಕೀಯ ಮಾಡಲು ನಾವೇ ಸಿಗುವುದೇ’



ಮನೆ ಇಲ್ಲದ ನಮಗೆ ಮನೆ ಕಟ್ಟಿಕೊಡುವ ಆಸೆಯನ್ನು ಸರ್ಕಾರವೇ ಹುಟ್ಟಿಸಿತು. ಆಯ್ಕೆ ಪತ್ರ ನೀಡುವ ಮೂಲಕ ನಮ್ಮಲ್ಲಿ ಸ್ವಂತ ಸೂರಿನ ಕನಸು ಕಾಣುವಂತೆ ಮಾಡಿತು. ಈಗ ಏಕಾಏಕಿ ಎಲ್ಲ ಅರ್ಜಿಗಳನ್ನು ರದ್ದು ಮಾಡಲಾಗಿದೆ ಎಂದರೆ ನಾವೇನು ಮಾಡಬೇಕು? ರಾಜಕೀಯ ಮಾಡಲು ಈ ರಾಜಕಾರಣಿಗಳಿಗೆ ನಾವೇ ಸಿಗುವುದೇ?

ಅಣ್ಣಾಮಲೈ, ಮಲ್ಲೇಶ್ವರದ ವಲ್ಲವರಪುರಂ ನಿವಾಸಿ

‘ತಿನ್ನಲು ಊಟವಿಲ್ಲ, ಅರ್ಜಿ ಹಾಕುವುದೆಲ್ಲಿ’



ಅರ್ಜಿ ಹಾಕುವ ಸಂದರ್ಭದಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮಾಡಿಸುವುದು ಸುಲಭ ಇರಲಿಲ್ಲ. ಸೈಬರ್ ಸೆಂಟರ್‌ಗಳ ಮುಂದೆ ಸರತಿ ಸಾಲಿನಲ್ಲಿ ನಿಂತು ಅರ್ಜಿ ಸಲ್ಲಿಕೆ ಮಾಡಿದ್ದೇವೆ. ಈಗ ಸರ್ಕಾರ ಎಲ್ಲ ಅರ್ಜಿಗಳನ್ನು ರದ್ದುಪಡಿಸುವುದು ನ್ಯಾಯವೇ? ಲಾಕ್‌ಡೌನ್ ಕಾರಣದಿಂದ ತಿನ್ನಲು ಊಟವೇ ಇಲ್ಲದೆ ಪರಾಡುವ ಸ್ಥಿತಿ ಇದೆ. ಮತ್ತೆ ಅರ್ಜಿ ಹಾಕಲು ಎಲ್ಲಿಂದ ಹೊಂದಿಸುವುದು. ಬಡವರಿಗೆ ಅನ್ಯಾಯ ಮಾಡಲು ಸರ್ಕಾರ ಹೊರಟಿದೆ.

ಸಿ. ಸೇತುರಾಜ್
ಸ್ಲಂ ಜನರ ಸಂಘಟನೆ ಕಾರ್ಯದರ್ಶಿ

‘ಬಡವರಿಗೆ ಮಾಡಿದ ಮೋಸ’



ಸರ್ಕಾರ ಹೇಳಿದಂತೆಲ್ಲ ಕೇಳಿ ಅರ್ಜಿ ಸಲ್ಲಿಸಿದ್ದೇವೆ. ಹಣ ಹೊಂದಿಸಿ ಅರ್ಜಿ ಸಲ್ಲಿಸಿ, ಸ್ವಂತ ಮನೆಯಲ್ಲಿ ವಾಸ ಮಾಡುವ ಕನಸು ಕಂಡಿದ್ದೇವೆ. ಬಡವರು ಕೇಳುತ್ತಾರೆ ಎಂಬ ಕಾರಣಕ್ಕೆ ಅವರಿಗೆ ಸರ್ಕಾರ ಮೋಸ ಮಾಡಲು ಹೊರಟಿದೆ.

ಚಂದ್ರು, ಶ್ರೀರಾಂಪುರ

ಕಬ್ಬನ್ ಉದ್ಯಾನದಲ್ಲಿ 'ಸ್ಮಾರ್ಟ್‌ಸಿಟಿ' ಯೋಜನೆಯ ಮೊದಲ ಹಂತದ ಕಾಮಗಾರಿ

ನವೀಕೃತ ಪಾದಚಾರಿ ಮಾರ್ಗಗಳು ಸಜ್ಜು

• ಮನೋಹರ್ ಎಂ.

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯ ಮೊದಲ ಹಂತದಲ್ಲಿ ಕೈಗೆತ್ತಿಕೊಂಡಿದ್ದ ಪಾದಚಾರಿ ಮಾರ್ಗಗಳ ನವೀಕರಣ ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ. ಎರಡು ತಿಂಗಳಲ್ಲಿ 'ಸ್ಮಾರ್ಟ್' ಪಾದಚಾರಿ ಮಾರ್ಗಗಳು ಜನರನ್ನು ಸ್ವಾಗತಿಸಲಿವೆ.

ಮೊದಲ ಹಂತದಲ್ಲಿ ಪಾದಚಾರಿ ಮಾರ್ಗಗಳ ನಿರ್ಮಾಣ ಹಾಗೂ ನವೀಕರಣ ಕಾಮಗಾರಿ ಆರಂಭಿಸಲಾಗಿತ್ತು. ಕಳೆದ ವರ್ಷ ಲಾಕ್‌ಡೌನ್ ಜಾರಿಯಾದ ಕಾರಣ ಕಾಮಗಾರಿಗಳಿಗೆ ಅಡ್ಡಿಯಾಗಿತ್ತು. ಇತ್ತೀಚೆಗೆ ಕಾಮಗಾರಿಯ ವೇಗ ಹೆಚ್ಚಿದ್ದರಿಂದ ಶೀಘ್ರವೇ ನೂತನ ಪಾದಚಾರಿ ಮಾರ್ಗಗಳಲ್ಲಿ ಸಾರ್ವಜನಿಕರು ಸಂಚರಿಸಬಹುದು.

'ಸ್ಮಾರ್ಟ್‌ಸಿಟಿ ಯೋಜನೆಯಡಿ ಕಬ್ಬನ್ ಉದ್ಯಾನವನ್ನು ಅಂದಗೊಳಿಸಲು ಹಲವು ಕಾಮಗಾರಿಗಳನ್ನು ಆರಂಭಿಸಿದ್ದೇವೆ. ಮೊದಲಿಗೆ ಉದ್ಯಾನದ ಪಾದಚಾರಿ ಮಾರ್ಗಗಳ ನವೀಕರಣ ಮಾಡಿದ್ದೇವೆ. ಶೇ 80ರಷ್ಟು ಕಾಮಗಾರಿ ಪೂರ್ಣಗೊಂಡಿದೆ' ಎಂದು ಸ್ಮಾರ್ಟ್‌ಸಿಟಿ ಯೋಜನೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಉದ್ಯಾನದಲ್ಲಿ ಈ ಹಿಂದೆ ನಿರ್ಮಿಸಲಾಗಿದ್ದ ಪಾದಚಾರಿ ಮಾರ್ಗಗಳು ಹಾಳಾಗಿದ್ದವು. ಅದನ್ನು ತೆರವುಗೊಳಿಸಿ ವಿವಿಧ ವಿನ್ಯಾಸಗಳಲ್ಲಿ ಮಾರ್ಗಗಳ ನವೀಕರಣಕ್ಕೆ ಯೋಜನೆ ರೂಪಿಸಲಾಗಿತ್ತು. ಸದ್ಯ ಹಡ್ಸನ್ ವೃತ್ತದಿಂದ ಸೆಂಚುರಿ ಕ್ಲಬ್‌ವರೆಗಿನ ಪಾದಚಾರಿ ಮಾರ್ಗ ಸಿದ್ಧವಾಗಿದೆ. ಉಳಿದ ಭಾಗಗಳಲ್ಲಿ ಅಂತಿಮ ಹಂತದ ಕಾಮಗಾರಿ ಪ್ರಗತಿಯಲ್ಲಿದೆ' ಎಂದು ಮಾಹಿತಿ ನೀಡಿದರು.

ಆಮ್ಲಜನಕ ಸಮಸ್ಯೆಯಿಂದ ವಿಳಂಬ: 'ನಿಗದಿತ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳ್ಳುತ್ತಿತ್ತು. ಆದರೆ, ಕೋವಿಡ್ ಎರಡನೇ ಅಲೆಯ ಪ್ರಭಾವದಿಂದ ಪಾದಚಾರಿ ಮಾರ್ಗಗಳ ನಿರ್ಮಾಣ ಆಮೆಗತಿಯಲ್ಲಿ ಸಾಗಿತು. ಮಾರ್ಗಗಳಿಗೆ ಆಧುನಿಕ ಶೈಲಿಯ ಗ್ರಾನೈಟ್‌ನ ಬಳಸಲಾಗುತ್ತಿದೆ. ಗ್ರಾನೈಟ್ ಅಳವಡಿಸುವಾಗ 'ಫ್ಲೇಮಿಂಗ್' ಪ್ರಕ್ರಿಯೆಗೆ ಆಮ್ಲಜನಕವನ್ನು ಪ್ರಧಾನವಾಗಿ ಬಳಸಲಾಗುತ್ತದೆ. ಎರಡನೇ ಅಲೆ ವೇಳೆ ಆಮ್ಲಜನಕಕ್ಕೆ ಹೆಚ್ಚು ಬೇಡಿಕೆ ಬಂದಿದ್ದರಿಂದ ಕಾಮಗಾರಿಗೆ ಅಗತ್ಯವಾದ ಆಮ್ಲಜನಕ ಲಭ್ಯವಾಗಲಿಲ್ಲ. ಇದರಿಂದ ಕಾಮಗಾರಿ ವಿಳಂಬವಾಯಿತು' ಎಂದೂ ಅವರು ವಿವರಿಸಿದರು.

ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ (ಕಬ್ಬನ್) ಎಚ್.ಟಿ. ಬಾಲಕೃಷ್ಣ, 'ಸ್ಮಾರ್ಟ್‌ಸಿಟಿ ಯೋಜನೆಯಡಿ ಸಿದ್ಧಗೊಳ್ಳುತ್ತಿರುವ ಪಾದಚಾರಿ ಮಾರ್ಗಗಳು ಉದ್ಯಾನದ ಅಂದ ಹೆಚ್ಚಿಸಲಿವೆ' ಎಂದರು.

ಅಂಕಿ-ಅಂಶಗಳು

8 ಕಿ.ಮೀ — ಪಾದಚಾರಿ ಮಾರ್ಗದ ಉದ್ದ

₹8 ಕೋಟಿ — ಪಾದಚಾರಿ ಮಾರ್ಗ ನಿರ್ಮಾಣದ ವೆಚ್ಚ (ಅಂದಾಜು)



ಕಬ್ಬನ್ ಉದ್ಯಾನದಲ್ಲಿ ಸಿದ್ಧಗೊಂಡಿರುವ ಪಾದಚಾರಿ ಮಾರ್ಗ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ವಾಯುವಿಹಾರ ಪಥ ಅಭಿವೃದ್ಧಿ

'ಸ್ಮಾರ್ಟ್‌ಸಿಟಿ' ಯೋಜನೆಯಡಿ ಉದ್ಯಾನದ ಒಳಭಾಗದಲ್ಲಿ ವಾಯುವಿಹಾರ ಪಥ ನಿರ್ಮಿಸಲಾಗುತ್ತಿದೆ. ಈ ಜಾಗದಲ್ಲಿದ್ದ ಪಥಗಳು ಹಾಳಾಗಿದ್ದವು. ಅವುಗಳನ್ನು ನವೀಕರಿಸಲಾಗಿದೆ ಹಾಗೂ ಕೆಲವೆಡೆ ಮಾರ್ಗಗಳನ್ನು ವಿಸ್ತರಿಸಲಾಗಿದೆ. ವಾಯುವಿಹಾರಿಗಳಿಗೆ ಅನುಕೂಲವಾಗುವಂತೆ ಸುಂದರವಾದ ಪಥ ನಿರ್ಮಾಣವಾಗುತ್ತಿದ್ದು, ಉದ್ಯಾನದ ರೂಪವೇ ಬದಲಾಗಲಿದೆ' ಎಂದು ಬಾಲಕೃಷ್ಣ ತಿಳಿಸಿದರು.

'ಸೊಕ್ಕು ಮುರಿಯಲು ಕರಾವಳಿಗೆ ಪ್ರವಾಸ ನಿಲ್ಲಿಸಬೇಕು'

ಮಂಗಳೂರು: 'ಕರಾವಳಿಗೆ ಪ್ರವಾಸ ಹೋಗುವುದನ್ನು ನಿಲ್ಲಿಸುವ ತನಕ ಮಂಗಳೂರಿನ ಜನರ ಸೊಕ್ಕು ಮುರಿಯೋದಿಲ್ಲ' ಎಂಬ ಕ್ಲಬ್ ಹೌಸ್ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಕರುನಾಡು ವರ್ಸಸ್ ತುಳುನಾಡು ಕ್ಲಬ್ ಹೌಸ್‌ನಲ್ಲಿ ನಡೆದಿರುವ ಚರ್ಚೆಯಲ್ಲಿ, 'ಕರಾವಳಿಗೆ ಟ್ರಿಪ್ ಹೋಗೋದನ್ನು ನಿಲ್ಲಿಸಬೇಕು.ನಮ್ಮಲ್ಲಿ ದೇವಸ್ಥಾನಗಳಿಲ್ವ,ಮನೆದೇವರು ಇಲ್ವ?ಇದನ್ನು ಬಿಟ್ಟು ಧರ್ಮಸ್ಥಳ, ಸುಬ್ರಹ್ಮಣ್ಯಕ್ಕೆ ಹೋಗುತ್ತಿದ್ದೇವೆ. ಅದನ್ನು ನಾವು ಕಡಿಮೆ ಮಾಡಬೇಕು' ಎಂದು ಸದಸ್ಯರು ಹೇಳಿದ್ದಾರೆ.

'ಕನ್ನಡ ವಾಹಿನಿಗಳಲ್ಲಿ ಕರಾವಳಿಯ ಕೆಲವರು ಮೆರಿತಾ ಇದ್ದಾರೆ. ಅವರನ್ನು ಪ್ರೊಮೋಟ್ ಮಾಡೋದನ್ನು ಕಡಿಮೆ ಮಾಡಬೇಕು' ಎಂದಿರುವ ಕರುನಾಡು ಕ್ಲಬ್ ಹೌಸ್ ಗ್ರೂಪ್, 'ಅನುಶ್ರೀ ಎಂಟ್ರಿ ಆದ ಬಳಿಕ ತುಳುನಾಡಿನವರನ್ನು ತುಂಬುತ್ತಿದ್ದಾರೆ' ಎಂದಿದ್ದಾರೆ.

ಅಂಗವಿಕಲರಿಗೆ ಬಡ್ತಿಯಲ್ಲಿ ಮೀಸಲಾತಿ ನಿರಾಕರಿಸಲಾಗದು: ಸುಪ್ರೀಂ ಕೋರ್ಟ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕ್ರಿಯಾತ್ಮಕತೆ ಅಥವಾ ಇತರ ಕಾರಣಗಳನ್ನು ನೀಡಿ ಅಂಗವಿಕಲರಿಗೆ ಬಡ್ತಿಯಲ್ಲಿ ಮೀಸಲಾತಿ ನಿರಾಕರಿಸಲಾಗದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

'ಮೀಸಲಾತಿ ನಿರಾಕರಿಸಿದರೆ ಇತರರು ಬಡ್ತಿ ಪಡೆದುಕೊಳ್ಳುವಾಗ ಅಂಗವಿಕಲರಲ್ಲಿ ಹತಾಶೆ ಉಂಟು ಮಾಡಬಹುದು' ಎಂದು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಅವರೊನ್ನೊಳಗೊಂಡ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಈ ಪರಿಸ್ಥಿತಿಯಲ್ಲಿ ಸರ್ಕಾರವು ಸಮಸ್ಯೆ ಪರಿಹರಿಸಲು ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು ಎಂದೂ ಹೇಳಿದೆ.

ಇತರರಂತೆ ಅಂಗವಿಕಲರನ್ನೂ ಬಡ್ತಿಗೆ ಪರಿಗಣಿಸಬೇಕು. ಇಂತಹ ವ್ಯಕ್ತಿಗಳಿಗೆ ಅನುಗುಣವಾದ ಹುದ್ದೆಗಳನ್ನು ಸರ್ಕಾರ ಗುರುತಿಸಬೇಕು ಎಂದೂ ನ್ಯಾಯಪೀಠ ಹೇಳಿದೆ.

ಕಾಸರಗೋಡು ಕನ್ನಡಿಗರ ಆತಂಕ

ಪ್ರಜಾವಾಣಿ ವಾರ್ತೆ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಕನ್ನಡ ಹೆಸರು ಇರುವ ಸ್ಥಳಗಳ ಹೆಸರುಗಳನ್ನು ಮಲಯಾಳಿಗೆ ಬದಲಾಯಿಸುವ ಪ್ರಯತ್ನ ಹಲವು ವರ್ಷಗಳಿಂದಲೇ ನಡೆಯುತ್ತಿದೆ ಎಂದು ಕನ್ನಡಿಗರು ಕಳವಳ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಕೆಲವು ಉದಾಹರಣೆಗಳನ್ನು ಸಹ ನೀಡಿದ್ದಾರೆ. ಕಾಸರಗೋಡಿನ ಎಣ್ಮಕಜೆ ಪಂಚಾಯಿತಿ ವ್ಯಾಪ್ತಿಯಲ್ಲಿನ 'ಮೈರೆ' ಗ್ರಾಮದ ಹೆಸರನ್ನು ಬದಲಾಯಿಸಿ 'ಶೇಣಿ' ಎಂದು ಹಲವು ವರ್ಷಗಳ ಹಿಂದೆ ಬದಲಾಯಿಸಲಾಯಿಸಲಾಗಿತ್ತು.

2013ರಲ್ಲಿ 'ಮೈರೆ' ಹೆಸರು ಬದಲಾಯಿಸುವ ಎಣ್ಮಕಜೆ ಪಂಚಾಯಿತಿ ಪ್ರಸ್ತಾವಕ್ಕೆ ಕೇರಳ ಸರ್ಕಾರ ಒಪ್ಪಿಗೆ ನೀಡಿತು. ಮಲಯಾಳಿಯಲ್ಲಿ 'ಮೈರೆ'ಗೆ ನಿಂದನೆಯ ಅರ್ಥ ಬರುತ್ತದೆ ಎಂದು ವಾದಿಸಲಾಗಿತ್ತು. ಜತೆಗೆ, ಈ ಸ್ಥಳದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಮುಜುಗರವಾಗುತ್ತಿತ್ತು. ಹೀಗಾಗಿ, ಒತ್ತಡ ಹಾಕಿ ಹೆಸರು ಬದಲಾಯಿಸಲಾಯಿತು ಎಂದು ಹೇಳಲಾಗಿದೆ.

ಆದರೆ, ಇದು ಕನ್ನಡದ ಹೆಸರು 'ಮಯೂರು ಪಾರ' ಮೂಲದಿಂದ ಬಂದಿದ್ದು, ನವಿಲುಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಸ್ಥಳವಾಗಿದೆ ಎಂದು ಕನ್ನಡಿಗರು ವಿವರಿಸಿದ್ದಾರೆ.

ಇದೇ ರೀತಿಯಲ್ಲಿ ಸದ್ಯ ಗಡಿ ಪ್ರದೇಶದಲ್ಲಿನ ಗ್ರಾಮಗಳ ಕನ್ನಡದ ಹೆಸರುಗಳನ್ನು ಬದಲಾಯಿಸುವ ಪ್ರಯತ್ನ ನಡೆದಿದೆ ಎನ್ನುವ ಆತಂಕವನ್ನು ಕಾಸರಗೋಡಿನ ಕನ್ನಡಿಗರು ವ್ಯಕ್ತಪಡಿಸಿದ್ದಾರೆ.

ಕೇರಳ ಸರ್ಕಾರದ ಕಂದಾಯ ಇಲಾಖೆಯ ಆನ್‌ಲೈನ್ ಪೋರ್ಟಲ್‌ನಲ್ಲಿ 'ಮಂಜೇಶ್ವರ' ಹೆಸರನ್ನು 'ಮಂಜೇಶ್ವರಂ' ಎಂದು ಮಾಡಲಾಗಿದೆ. ಆದರೆ, ಹೆಸರುಗಳನ್ನು ಬದಲಾಯಿಸುವ ನಿರ್ಧಾರವನ್ನು ಈಗಾಗಲೇ ಕೈಗೊಳ್ಳಲಾಗಿದೆ ಎನ್ನುವ ವರದಿಗಳನ್ನು ಕೇರಳ ಸರ್ಕಾರ ನಿರಾಕರಿಸಿದೆ.

'ಸಿಬ್ಬಂದಿ ತಪ್ಪಿನಿಂದ ಮಂಜೇಶ್ವರ ಹೆಸರಿನಲ್ಲಿ ಬದಲಾವಣೆಯಾಗಿದೆ. ಇದನ್ನು ಸರಿಪಡಿಸಲು ನಿರ್ದೇಶನ ನೀಡಲಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ' ಎಂದು ಕೇರಳ ತುಳು ಅಕಾಡೆಮಿ ಅಧ್ಯಕ್ಷ ಉಮೇಶ್ ಎಂ. ಸಾಲಿಯಾನ್ ತಿಳಿಸಿದ್ದಾರೆ.

ಮಂಜೇಶ್ವರ ಮತ್ತು ಕಾಸರಗೋಡು ತಾಲ್ಲೂಕುಗಳಲ್ಲಿನ 15 ಗ್ರಾಮಗಳು ಇದೇ ರೀತಿಯ ಸಮಸ್ಯೆ ಎದುರಿಸುತ್ತಿವೆ. ಮಲಯಾಳಿ ಉಚ್ಚಾರಣೆಯಿಂದ ಗ್ರಾಮಗಳ ಹೆಸರುಗಳನ್ನು ತಪ್ಪಾಗಿ ಹೇಳಲಾಗುತ್ತದೆ ಎನ್ನುವುದು ಅಧಿಕಾರಿಗಳ ಅಭಿಪ್ರಾಯವಾಗಿದೆ.

'ಹೆಸರು ಬದಲಾಯಿಸುವ ಯಾವುದೇ ನಿರ್ಧಾರ ಕೈಗೊಂಡಿಲ್ಲ' ಎಂದು ಕಾಸರಗೋಡಿನ ಜಿಲ್ಲಾಧಿಕಾರಿ ಸಜೀತ್ ಬಾಬು ಸ್ಪಷ್ಟಪಡಿಸಿದ್ದಾರೆ.

ಕೇರಳದ ಮಾಜಿ ಕಂದಾಯ ಸಚಿವ ಮತ್ತು ಶಾಸಕ ಇ. ಚಂದ್ರಶೇಖರನ್, ಕಾಸರಗೋಡು ಸಂಸದ ರಾಜಮೋಹನ್ ಉನ್ನಿಥನ್ ಅವರು ಸಹ ಹೆಸರು ಬದಲಾಯಿಸುವ ನಿರ್ಧಾರ ಕೈಗೊಂಡಿಲ್ಲ ಎಂದು ತಿಳಿಸಿದ್ದಾರೆ.

'ಎಲ್ಲ ದಾಖಲೆಗಳಲ್ಲಿ ಮೂಲ ಹೆಸರುಗಳನ್ನೇ ಬಳಸಬೇಕು' ಎಂದು ಕೇರಳ ಸರ್ಕಾರದ ಆಡಳಿತ ಇಲಾಖೆಯು ಜಿಲ್ಲಾಧಿಕಾರಿಗಳಿಗೆ 2016ರಲ್ಲಿ ನಿರ್ದೇಶನ ನೀಡಿತ್ತು. ಕನ್ನಡ ಸಮನ್ವಯ ಸಮಿತಿ ಮನವಿ ಸಲ್ಲಿಸಿದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿತ್ತು.

ಆದರೂ, ಅನಧಿಕೃತವಾಗಿ ಮಲಯಾಳಿ ಹೆಸರು ಬಳಸುವ ಮೂಲಕ ಕನ್ನಡದ ಹೆಸರು ನಾಶವಾಗುತ್ತಿವೆ ಎಂದು ಕಾಸರಗೋಡಿನ ಕನ್ನಡಿಗ ಸಮಿತಿಯ ಮರುಳೀಧರ್ ಅಭಿಪ್ರಾಯಪಟ್ಟಿದ್ದಾರೆ.

'ಕನ್ನಡದ ಹೆಸರು ಬದಲಿಸಿದರೆ ಹೋರಾಟ'

ಬೆಂಗಳೂರು: 'ಕಾಸರಗೋಡು ಜಿಲ್ಲೆಯ ಕೆಲವು ಗ್ರಾಮಗಳಿಗೆ ಇಡಲಾಗಿರುವ ಕನ್ನಡದ ಹೆಸರುಗಳನ್ನು ಮಲಯಾಳಂ ಭಾಷೆಗೆ ಬದಲಾಯಿಸಲು ಹೊರಟಿರುವ ಕೇರಳ ಸರ್ಕಾರದ ನಡೆ ಖಂಡನಾರ್ಹವಾದುದು' ಎಂದು ಕರ್ನಾಟಕ ವಿಕಾಸ ರಂಗ ತಿಳಿಸಿದೆ.

'ಕಾಸರಗೋಡು ಕರ್ನಾಟಕದ ಆಸ್ತಿ ಎಂಬುದನ್ನು ಮಹಾಜನ್ ವರದಿಯಲ್ಲಿ ಹೇಳಲಾಗಿದೆ. ಈ ವರದಿಯ ಜಾರಿ ಬಗ್ಗೆ ಮಹಾರಾಷ್ಟ್ರ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ತಕರಾರು ಅರ್ಜಿ ಸಲ್ಲಿಸಿದೆ. ಈ ಸಮಯದಲ್ಲೇ ಕೇರಳ ಸರ್ಕಾರ ಹೆಸರು ಬದಲಾವಣೆಗೆ ಮುಂದಾಗಿರುವುದು ಸಮಂಜಸವಲ್ಲ. ಕಾಸರಗೋಡಿನ ನೂತನ ಶಾಸಕರು ಕೇರಳ ವಿಧಾನಸಭೆಯಲ್ಲಿ ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಕಾಸರಗೋಡು ಕರ್ನಾಟಕದ ಪ್ರದೇಶ ಎಂಬುದಕ್ಕೆ ಇದು ಸಾಕ್ಷಿ. ಇದನ್ನು ಅಲ್ಲಿನ ಸರ್ಕಾರ ಅರ್ಥಮಾಡಿಕೊಳ್ಳಲಿ' ಎಂದು ಅಧ್ಯಕ್ಷ ವ.ಚ.ಚನ್ನೇಗೌಡ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಅನುದಾನ ತಾರತಮ್ಯ: ನಗರಾಭಿವೃದ್ಧಿ ಅಧಿಕಾರಿಗಳಿಗೆ ಕ್ಲೀನ್‌ಚಿಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲಮಂಗಲ, ರಾಮನಗರ, ಮಾಗಡಿ ಹಾಗೂ ದೇವನಹಳ್ಳಿ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಸಂಬಂಧ ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ–3 ಮತ್ತು ಅಧೀನ ಕಾರ್ಯದರ್ಶಿ (ಬಿಬಿಎಂಪಿ) ತಪ್ಪು ಮಾಹಿತಿ ನೀಡಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮಾಡಿದ್ದ ಆರೋಪಗಳನ್ನು ನಗರಾಭಿವೃದ್ಧಿ ಇಲಾಖೆ ತಳ್ಳಿಹಾಕಿದೆ.

'ಕಸ ವಿಲೇವಾರಿಯಿಂದ ಹಾನಿಗೊಳಗಾದ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳಿಗೆ ಈ ಕ್ಷೇತ್ರಗಳಿಗೆ ತಲಾ ₹ 30 ಕೋಟಿ ಅನುದಾನ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿತ್ತು. ಆದರೂ ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ–3 ಮತ್ತು ಅಧೀನ ಕಾರ್ಯದರ್ಶಿ (ಬಿಬಿಎಂಪಿ) ಅವರು ಸರ್ಕಾರಿ ಆದೇಶಗಳನ್ನು ಸರಿಯಾಗಿ ಗಮನಿಸದೇ ಈ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಆರ್ಥಿಕ ಇಲಾಖೆ ಈ ಹಿಂದೆಯೇ ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಕೈಗೆತ್ತಿಕೊಳ್ಳಲು ಸೂಚಿಸಿದ್ದರೂ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ. ಇವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು' ಎಂದು ಕುಮಾರಸ್ವಾಮಿ ಮುಖ್ಯ ಕಾರ್ಯದರ್ಶಿ ಅವರಿಗೆ 2020ರ ಆಗಸ್ಟ್ 20ರಂದು ಪತ್ರ ಬರೆದಿದ್ದರು.

ಈ ಬಗ್ಗೆ ಕ್ರಮಕ್ಕೆ ಸೂಚಿಸಿ ಮುಖ್ಯ ಕಾರ್ಯದರ್ಶಿ ಅವರು ನಗರಾಭಿವೃದ್ಧಿ ಇಲಾಖೆಗೆ ಸೂಚಿಸಿದ್ದರು. ಈ ಕುರಿತು ವಿಚಾರಣೆ ನಡೆಸಿರುವ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರು, ಕುಮಾರಸ್ವಾಮಿಗೆ ಹಾಗೂ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

'2018–19ರ ಬಜೆಟ್‌ನಲ್ಲಿ 'ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆ'ಯ ಕ್ರಿಯಾಯೋಜನೆಯಲ್ಲಿ ಕಸ ನಿರ್ವಹಣೆಗೆ ನಿಗದಿಪಡಿಸಲಾದ ₹ 753 ಕೋಟಿಯಲ್ಲಿ ₹ 150 ಕೋಟಿಯನ್ನು ಈ ನಾಲ್ಕು ಕ್ಷೇತ್ರಗಳ ಅಭಿವೃದ್ಧಿಗೆ ಕಾಯ್ದಿರಿಸಲಾಗಿತ್ತು. ಇದಕ್ಕೆ 2019ರ ಫೆ. 01ರಂದು ಸರ್ಕಾರ ಅನುಮೋದನೆ ನೀಡಿದೆ. ಆದರೆ, ನಂತರ ಸರ್ಕಾರ ಈ ಯೋಜನೆಯನ್ನೇ ರದ್ದುಗೊಳಿಸಿ 'ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆ'ಯ ಕ್ರಿಯಾಯೋಜನೆ ರೂಪಿಸಿ 2012ರ ಸೆ. 20 ರಂದು ಜಾರಿಗೆ ತಂದಿದೆ.'

'ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆಯಲ್ಲಿ ಕಸ ವಿಲೇವಾರಿಯಿಂದ ಹಾನಿಗೊಳಗಾದ ಪ್ರದೇಶಗಳ ಅಭಿವೃದ್ಧಿಗೆ ಮೀಸಲಿಟ್ಟಿದ್ದ ಅನುದಾನವನ್ನು ನಂತರ ₹ 584.34 ಕೋಟಿಗೆ ಕಡಿತಗೊಳಿಸಲಾಗಿದೆ. ನಂತರ ಶಾಸಕರಾದ ಅನಿತಾ ಕುಮಾರಸ್ವಾಮಿ, ಶರವಣ, ಎಂ.ರಮೇಶ್ ಗೌಡ, ನಿಸರ್ಗ ನಾರಾಯಣಸ್ವಾಮಿ ಎ.ಮಂಜುನಾಥ್ ಮತ್ತು ಎಚ್.ಡಿ.ಕುಮಾರಸ್ವಾಮಿ ಅವರ ಮನವಿ ಪತ್ರಗಳನ್ನು ಆಧರಿಸಿ ಮುಖ್ಯಮಂತ್ರಿಗಳ ನವಬೆಂಗಳೂರು ಯೋಜನೆಯಡಿ ಹೆಚ್ಚುವರಿ ಅನುದಾನ ಕೋರಿ ಆರ್ಥಿಕ ಇಲಾಖೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದರಲ್ಲಿ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ಕರ್ತವ್ಯಲೋಪ ಎಸಗಿಲ್ಲ' ಎಂದು ರಾಕೇಶ್ ಸಿಂಗ್ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

ಜೈಲಿನಲ್ಲಿ ಮೊಬೈಲ್ ನಗದು ಪತ್ತೆ

ರಾಮನಗರ: ಇಲ್ಲಿನ ಜಿಲ್ಲಾ ಕಾರಾಗೃಹದ ಮೇಲೆ ಸೋಮವಾರ ಬೆಳಗ್ಗೆ ಡಿವೈಎಸ್ಪಿ ಮೋಹನ್‌ಕುಮಾರ್ ನೇತೃತ್ವದ ತಂಡವು ದಾಳಿ ನಡೆಸಿದ್ದು, ಈ ವೇಳೆ ಮೊ ಬೈಲ್, ನಗದು ಮತ್ತಿತರ ವಸ್ತುಗಳು ಪತ್ತೆಯಾದವು.

ಈ ಕಾರಾಗೃಹದಲ್ಲಿ 130ಕ್ಕೂ ಹೆಚ್ಚು ಕೈದಿಗಳಿದ್ದಾರೆ. ದೂರುಗಳ ಹಿನ್ನೆಲೆಯಲ್ಲಿ ಅಧಿಕಾರಿ ನೇತೃತ್ವದ ತಂಡವು ಬೆಳ್ಳಂಬೆಳಗ್ಗೆ ಜೈಲಿಯಲ್ಲಿ ಶೋಧ ನಡೆಸಿತು. 6,454 ನಗದು, ಎರಡು ಮೊಬೈಲ್, ಸಿಮ್‌ಕಾರ್ಡ್‌ಗಳು, ಮೊಬೈಲ್ ಚಾರ್ಜರ್ , ಬೀಡಿ, ಸಿಗರೇಟ್ ಈ ಸಂದರ್ಭ ಸಿಕ್ಕಿದವು.

ಮಹಿಳೆ ಕೈ–ಕಾಲು ಕಟ್ಟಿ ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರಣ್ಯಪುರ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿದ್ದ ದುಷ್ಕರ್ಮಿಗಳು, ಒಂಟಿಯಾಗಿದ್ದ ಮಹಿಳೆಯ ಕೈ–ಕಾಲು ಕಟ್ಟಿ ಹಾಕಿ ನಗದು ಹಾಗೂ ಚಿನ್ನಾಭರಣ ದೋಚಿದ್ದಾರೆ.

'ತಿಂಡ್ಲು ಮುಖ್ಯರಸ್ತೆಯ ಬಸವ ಸಮಿತಿ ಲೇಔಟ್ ನಿವಾಸಿ ಸುಭಾಷ್ ಎಂಬುವರ ಮನೆಯಲ್ಲಿ ಈ ಘಟನೆ ನಡೆದಿದೆ. ಮನೆಯಲ್ಲಿದ್ದ 170 ಗ್ರಾಂ ಚಿನ್ನಾಭರಣ ಹಾಗೂ ₹ 2 ಲಕ್ಷ ನಗದು ದೋಚಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸುಭಾಷ್ ಅವರು ಪೀಣ್ಯ ಬಳಿಯ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಪತ್ನಿ ಜಯಶ್ರೀ ಜೊತೆ ವಾಸವಿದ್ದಾರೆ. ಪತಿ ಕೆಲಸಕ್ಕೆ ಹೋದಾಗ ಪತ್ನಿ ಮಾತ್ರ ಮನೆಯಲ್ಲಿರುತ್ತಿದ್ದರು. ಇದನ್ನು ತಿಳಿದುಕೊಂಡೇ ಆರೋಪಿಗಳು ಕೃತ್ಯ ಎಸಗಿದ್ದಾರೆ.'

'ಶನಿವಾರ (ಜೂನ್ 26) ಬೆಳಿಗ್ಗೆ ಎಂದಿನಂತೆ ಸುಭಾಷ್ ಕೆಲಸಕ್ಕೆ ಹೋಗಿದ್ದರು. ಬೆಳಿಗ್ಗೆ 10.30ರ ಸುಮಾರಿಗೆ ಮಾರಕಾಸ್ತ್ರ ಹಿಡಿದು ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು, ಜಯಶ್ರೀ ಅವರ ಕೈ–ಕಾಲು ಹಗ್ಗದಿಂದ ಕಟ್ಟಿ ಹಾಕಿದ್ದರು. ನಂತರ, ಮನೆಯಲ್ಲೆಲ್ಲ ಹುಡುಕಾಡಿ ಚಿನ್ನಾಭರಣ ಹಾಗೂ ನಗದು ದೋಚಿಕೊಂಡು ಪರಾರಿಯಾಗಿದ್ದಾರೆ. ಕೆಲ ನಿಮಿಷ ಬಿಟ್ಟು ಹಗ್ಗ ಬಿಚ್ಚಿಕೊಂಡಿದ್ದ ಜಯಶ್ರೀ, ಮನೆಯಿಂದ ಹೊರಗೆ ಬಂದು ಸ್ಥಳೀಯರಿಗೆ ವಿಷಯ ತಿಳಿಸಿದ್ದರು. ನಂತರ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಕಿಟಕಿಯಲ್ಲಿಟ್ಟಿದ್ದ ಆಭರಣ ಕಳವು; ಇಬ್ಬರ ಬಂಧನ

ಬೆಂಗಳೂರು: ಬ್ಯಾಡರಹಳ್ಳಿ ಕಬ್ಬಾಳಮ್ಮ ದೇವಸ್ಥಾನ ಬಳಿಯ ಮನೆಯೊಂದರ ಕಿಟಕಿಯಲ್ಲಿಟ್ಟಿದ್ದ ಚಿನ್ನಾಭರಣ ಕದ್ದಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಅಂದ್ರಹಳ್ಳಿಯ ಭರತ್ (28) ಹಾಗೂ ಅರ್ಜುನ್ (29) ಬಂಧಿತರು. ಅವರಿಂದ ₹ 7.26 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ, ಮನೆಯ ಕಿಟಕಿ ಬಳಿ ಆಭರಣವಿಟ್ಟಿದ್ದರು. ಅದನ್ನು ನೋಡಿದ್ದ ಆರೋಪಿಗಳು, ಕಿಟಕಿ ಮೂಲಕ ಆಭರಣ ಕದ್ದುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಪ್ರಕರಣ ದಾಖಲಾಗಿತ್ತು' ಎಂದೂ ತಿಳಿಸಿದರು.

'ಬಂಧಿತ ಆರೋಪಿಗಳು, ಕಳ್ಳತನ ಮಾಡುವುದನ್ನೇ ವೃತ್ತಿ ಮಾಡಿಕೊಂಡಿದ್ದರು. ಯಾರೂ ಇಲ್ಲದ ಮನೆಗಳನ್ನು ಹಾಗೂ ಕಿಟಕಿ ಬಳಿ ಆಭರಣ ಇರಿಸುತ್ತಿದ್ದವರನ್ನು ಗುರುತಿಸಿ ಕೃತ್ಯ ಎಸಗುತ್ತಿದ್ದರು. ಈ ಆರೋಪಿಗಳು, ಎರಡು ಕಡೆ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಪೊಲೀಸರು ಹೇಳಿದರು.

ರೈಸ್ ಪುಲ್ಲಿಂಗ್ ಹೆಸರಿನಲ್ಲಿ ₹ 25 ಲಕ್ಷ ವಂಚನೆ

ಬೆಂಗಳೂರು: ರೈಸ್ ಪುಲ್ಲಿಂಗ್ ಹೆಸರಿನಲ್ಲಿ ವ್ಯಕ್ತಿಯೊಬ್ಬರಿಂದ ₹ 25 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಕೋಣನಕುಂಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ವಂಚನೆಗೀಡಾಗಿರುವ ಧಾರವಾಡದ ರಾಜಾರಾಮ್ ಬೆಟಸೂರು (64) ಎಂಬುವವರು ದೂರು ನೀಡಿದ್ದಾರೆ. ಅದರನ್ವಯ ನಾಲ್ವರು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬೆಂಗಳೂರಿಗೆ ಕೆಲ ತಿಂಗಳ ಹಿಂದೆ ಬಂದಿದ್ದ ರಾಜಾರಾಮ್, ಆರೋಪಿ ಮಧುಸೂದನ್ ಎಂಬಾತನನ್ನು ಭೇಟಿಯಾಗಿದ್ದರು. ಆತನೇ ರೈಸ್ ಪುಲ್ಲಿಂಗ್ ಚೆಂಬು ಇರುವುದಾಗಿ ಹೇಳಿದ್ದ. ಕೆಲ ದಿನಗಳ ಹಿಂದಷ್ಟೇ ರಾಜಾರಾಮ್‌ಗೆ ಕೆಲ ದಾಖಲೆ ಕಳುಹಿಸಿದ್ದ ಆರೋಪಿ, ರೈಸ್ ಪುಲ್ಲಿಂಗ್ ಹಣ ಗಳಿಕೆ ಬಗ್ಗೆ ವಿವರಿಸಿದ್ದ. ಚೆಂಬು ಖರೀದಿಸಲು ನೆರವಾದರೆ ಪಾಲು ನೀಡುವುದಾಗಿ ತಿಳಿಸಿದ್ದ.'

'ಆರೋಪಿ ಮಾತು ನಂಬಿದ್ದ ರಾಜಾರಾಮ್, ತಮ್ಮೂರಿನಲ್ಲಿದ್ದ ಜಮೀನು ಮಾರಿ ಹಾಗೂ ಸ್ನೇಹಿತರ ಬಳಿ ಹಣ ಸಾಲ ಪಡೆದು ಆರೋಪಿಗಳಿಗೆ ನೀಡಿದ್ದರು. ಇದಾದ ನಂತರ ಆರೋಪಿಗಳು ನಾಪತ್ತೆಯಾಗಿದ್ದಾರೆ. ಈ ಸಂಗತಿ ದೂರಿನಲ್ಲಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಚಿತ್ರಾವಳಿ



ಕನಕಪುರ ರಸ್ತೆಯ ದಯಾನಂದ ಸಾಗರ ಬಿಸಿನೆಸ್ ಅಕಾಡೆಮಿಯು ಆರೋಗ್ಯ ಇಲಾಖೆ ಹಾಗೂ ಕಗ್ಗಲೀಪುರ ಆರೋಗ್ಯ ಕೇಂದ್ರ ಸಹಯೋಗದಲ್ಲಿ ಸಂಸ್ಥೆಯ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ಕೋವಿಡ್ ಲಸಿಕಾ ಅಭಿಯಾನದಲ್ಲಿ ವಿದ್ಯಾರ್ಥಿಗಳಿಗೆ ಲಸಿಕೆ ನೀಡಲಾಯಿತು. ಪ್ರಾದೇಶಿಕ ಸಮುದಾಯ ಆರೋಗ್ಯ ಅಧಿಕಾರಿ ಡಾ.ಸಿರಾಜುದ್ದೀನ್ ಮದನಿ, ಕಗ್ಗಲೀಪುರ ಆರೋಗ್ಯ ಕೇಂದ್ರದ ಡಾ.ರಾಧಾ, ಡಾ.ಶೋಭಾ, ದಯಾನಂದ ಸಾಗರ್ ಬ್ಯುಸಿನೆಸ್ ಅಕಾಡೆಮಿಯ ಪ್ರಾಂಶುಪಾಲ ಸಂದೇಶ್, ಡೀನ್ ಕೆ.ಎನ್.ವೀಣಾ ಹಾಗೂ ಇತರರು ಇದ್ದರು.



ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಕಾರ್ಯಕರ್ತರ ವತಿಯಿಂದ ಕೊಡಿಗೇಹಳ್ಳಿಯ ಸರ್ಕಾರಿ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಬಡವರಿಗೆ ಆಹಾರದ ಕಿಟ್ ವಿತರಿಸಿದರು. ಬೆಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎ.ರವಿ, ಬಿಜೆಪಿ ಮುಖಂಡ ಅಶ್ವತ್ಥನಾರಾಯಣ, ಪಾಲಿಕೆ ಮಾಜಿ ಸದಸ್ಯ ಅಶ್ವತ್ಥನಾರಾಯಣ ಗೌಡ ಇತರರು ಇದ್ದರು.

ಸುದ್ದಿ 2 ನಿಮಿಷ

ವಸಿಷ್ಠ ಸೊಸೈಟಿ ಅಧ್ಯಕ್ಷ, ನಿರ್ದೇಶಕಗೆ ನೋಟಿಸ್

ಬೆಂಗಳೂರು: ಠೇವಣಿದಾರರಿಗೆ ವಂಚಿಸಿರುವ ಆರೋಪದಡಿ ಶ್ರೀವಸಿಷ್ಠ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಹನುಮಂತನಗರ ಠಾಣೆ ಪೊಲೀಸರು, ಸೊಸೈಟಿ ಅಧ್ಯಕ್ಷ ಹಾಗೂ ನಿರ್ದೇಶಕರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

'ಠೇವಣಿದಾರರ ದೂರಿನನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಈ ಬಗ್ಗೆ ವಿಚಾರಣೆಗೆ ಹಾಜರಾಗುವಂತೆ ಅಧ್ಯಕ್ಷ ವೇಂಕಟನಾರಾಯಣ ಹಾಗೂ ಅವರ ಮಗನೇ ಆಗಿರುವ ನಿರ್ದೇಶಕ ಕೃಷ್ಣಪ್ರಸಾದ್ ಅವರಿಗೆ ನೋಟಿಸ್ ನೀಡಲಾಗಿದೆ. ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ನೀಡಿ ತನಿಖೆಗೆ ಸಹಕರಿಸುವಂತೆ ಕೋರಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'₹99 ಲಕ್ಷ ಠೇವಣಿ ಇರಿಸಿದ್ದ ವ್ಯಕ್ತಿ ಸೇರಿದಂತೆ ಹಲವರು, ವಂಚನೆ ಬಗ್ಗೆ ದಾಖಲೆಗಳನ್ನು ನೀಡಿದ್ದಾರೆ. ಅವುಗಳ ಪರಿಶೀಲನೆ ನಡೆದಿದೆ. ಯಾರೆಲ್ಲ ಠೇವಣಿ ಇರಿಸಿದ್ದರು ಹಾಗೂ ಠೇವಣಿ ಮೊತ್ತವೆಷ್ಟು ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದೂ ಮೂಲಗಳು ತಿಳಿಸಿವೆ.

ಎಂ.ಜಿ.ಮೋಟರ್‌ನಿಂದ ಆಂಬುಲೆನ್ಸ್ ಕೊಡುಗೆ



ಬೆಂಗಳೂರು: ಎಂ.ಜಿ.ಮೋಟರ್ ಇಂಡಿಯಾ, ಎಂ.ಜಿ.ಸೇವಾ ಅಭಿಯಾನದ ಅಡಿಯಲ್ಲಿ ಜೀವನ್ ಜ್ಯೋತಿ ಟ್ರಸ್ಟ್‌ಗೆ ಅತ್ಯಾಧುನಿಕ ಆಂಬುಲೆನ್ಸ್ ಕೊಡುಗೆ ನೀಡಿದೆ.

ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಆರೋಗ್ಯ ಕ್ಷೇತ್ರ ಬಲಪಡಿಸುವ ನಿಟ್ಟಿನಲ್ಲಿ ಎಂ.ಜಿ.ಮೋಟರ್ ಇಂಡಿಯಾ ಸಂಸ್ಥೆಯು ಹಲವು ಕೊಡುಗೆಗಳನ್ನು ನೀಡುತ್ತಾ ಬಂದಿದೆ. ಕೆಜಿಎಫ್‌ನ ನಿವಾಸಿಗಳು ಆಂಬುಲೆನ್ಸ್ ಇಲ್ಲದೆ ಪರದಾಡುತ್ತಿದ್ದುದ್ದನ್ನು ಮನಗಂಡಿದ್ದ ಜೀವನ್ ಜ್ಯೋತಿ ಟ್ರಸ್ಟ್, ಆಂಬುಲೆನ್ಸ್‌ಗಾಗಿ ಎಂ.ಜಿ.ಮೋಟರ್ ಬಳಿ ಮನವಿ ಮಾಡಿತ್ತು. ಇದಕ್ಕೆ ಸಂಸ್ಥೆಯು ಸಕಾರಾತ್ಮಕವಾಗಿ ಸ್ಪಂದಿಸಿದೆ.

'ನಮ್ಮ ಕೋರಿಕೆಯನ್ನು ಪರಿಗಣಿಸಿ ಆಂಬುಲೆನ್ಸ್ ಕೊಡುಗೆಯಾಗಿ ನೀಡಿರುವ ಎಂ.ಜಿ.ಮೋಟರ್‌ಗೆ ಆಭಾರಿಯಾಗಿದ್ದೇವೆ. ಈ ಸಂಸ್ಥೆಯ ಕಾರ್ಯ ಎಲ್ಲರಿಗೂ ಮಾದರಿಯಾಗಿದೆ. ಈ ಆಂಬುಲೆನ್ಸ್‌ನಿಂದ ಕೆಜಿಎಫ್‌ನ ಜನರಿಗೆ ತುಂಬಾ ಅನುಕೂಲವಾಗಲಿದೆ' ಎಂದು 'ಹಿಯರ್ ಐ ಆ್ಯಮ್ ಸ್ಕ್ವಾಡ್'ನ ನಿಕೋಲ್ ಚೆರಿಯನ್ ತಿಳಿಸಿದ್ದಾರೆ.

ಸೂಟ್‌ಕೇಸ್ ಆತಂಕ; ಬಾಂಬ್ ನಿಷ್ಕ್ರಿಯ ದಳದಿಂದ ಪರಿಶೀಲನೆ

ಬೆಂಗಳೂರು: ಮಲ್ಲೇಶ್ವರ ಠಾಣೆ ವ್ಯಾಪ್ತಿಯಲ್ಲಿ ಸೋಮವಾರ ಮಧ್ಯಾಹ್ನ ಅನುಮಾನಾಸ್ಪದವಾಗಿ ಪತ್ತೆಯಾಗಿದ್ದ ಸೂಟ್‌ಕೇಸ್ ಸ್ಥಳೀಯರ ಆತಂಕಕ್ಕೆ ಕಾರಣವಾಗಿತ್ತು. ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪರಿಶೀಲನೆ ನಡೆಸಿ, ಅದರಲ್ಲಿ ಬಟ್ಟೆ ಇರುವುದಾಗಿ ತಿಳಿಸಿದ ನಂತರವೇ ಸ್ಥಳೀಯರು ನಿಟ್ಟುಸಿರು ಬಿಟ್ಟರು.

ಅಪರಿಚಿತರು ಪಾದಚಾರಿ ಮಾರ್ಗದಲ್ಲಿ ಕಪ್ಪು ಬಣ್ಣದ ಸೂಟ್‌ಕೇಸ್ ಇರಿಸಿ ಹೋಗಿದ್ದರು. ಗಂಟೆಯವರೆಗೂ ಸೂಟ್‌ಕೇಸ್ ಸ್ಥಳದಲ್ಲೇ ಇತ್ತು. ಯಾರೂ ವಾಪಸು ತೆಗೆದುಕೊಂಡು ಹೋಗಿರಲಿಲ್ಲ. ಅದನ್ನು ನೋಡಿದ್ದ ಸ್ಥಳೀಯರು, 'ಸೂಟ್‌ಕೇಸ್‌ನಲ್ಲಿ ಬಾಂಬ್ ಇರಬಹುದು' ಎಂದು ಅನುಮಾನಪಟ್ಟು ಠಾಣೆಗೆ ಮಾಹಿತಿ ನೀಡಿದ್ದರು.

ಸ್ಥಳಕ್ಕೆ ಬಂದ ಪೊಲೀಸರು, ಸೂಟ್‌ಕೇಸ್ ಇದ್ದ ಜಾಗದಲ್ಲಿ ಸಾರ್ವಜನಿಕರ ಓಡಾಟ ನಿರ್ಬಂಧಿಸಿದರು. ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಸೂಟ್‌ಕೇಸ್ ತೆರೆದರು.

'ಸೂಟ್‌ಕೇಸ್‌ನಲ್ಲಿ ಸ್ಫೋಟಕ ವಸ್ತು ಇರುವ ಆತಂಕ ಸ್ಥಳೀಯರಲ್ಲಿತ್ತು. ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಪರಿಶೀಲನೆ ನಡೆಸಿದರು. ಸೂಟ್‌ಕೇಸ್‌ನಲ್ಲಿ ಯಾವುದೇ ಅನುಮಾನಾಸ್ಪದ ವಸ್ತುಗಳು ಇರಲಿಲ್ಲ. ಬಟ್ಟೆಗಳು ಮಾತ್ರ ಇದ್ದವು' ಎಂದು ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ 'ಪ್ರಜಾವಾಣಿ'ಗೆ ತಿಳಿಸಿದರು.



ಮಲ್ಲೇಶ್ವರ ಪಾದಚಾರಿ ಮಾರ್ಗದಲ್ಲಿದ್ದ ಸೂಟ್‌ಕೇಸ್

'₹1.50 ಕೋಟಿ ಮೌಲ್ಯದ 15 ಸಾವಿರ ಪುಸ್ತಕಗಳ ಕೊಡುಗೆ'

ಬೆಂಗಳೂರು: 'ನಗರದಲ್ಲಿರುವ ನಗರ ಕೇಂದ್ರ ಗ್ರಂಥಾಲಯಕ್ಕೆ ಅಮೆರಿಕದ ಅಟ್ಲಾಂಟಾ ವಿ-ಸರ್ವ್ ಇಂಟರ್ ನ್ಯಾಷನಲ್ ಫೌಂಡೇಷನ್ ಸಂಸ್ಥೆ ₹ 1.50 ಕೋಟಿ ಮೌಲ್ಯದ 15 ಸಾವಿರ ಅತ್ಯುತ್ಕೃಷ್ಟ ಪುಸ್ತಕಗಳನ್ನು ನೀಡಿದೆ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಪುಸ್ತಕಗಳನ್ನು ಸೋಮವಾರ ಸ್ವೀಕರಿಸಿ ಮಾತನಾಡಿದ ಅವರು, 'ವಿ-ಸರ್ವ್ ಇಂಟರ್ ನ್ಯಾಷನಲ್ ಫೌಂಡೇಷನ್ ಸಂಸ್ಥೆ ಅಧ್ಯಕ್ಷ ಡಾ. ವಿಜಯರಾಘವನ್ ಅವರು ತಮ್ಮ ಸಂಸ್ಥೆಯಿಂದ ನೀಡಿದ ಮೌಲ್ಯಯುತ ಪುಸ್ತಕಗಳನ್ನು ಬೆಂಗಳೂರು ನಗರ ಮತ್ತು ಗ್ರಾಮಾಂತರ ರೋಟರಿ ಸಂಸ್ಥೆಯ ಜಿಲ್ಲಾ ಗೌರ್ನರ್ ಡಾ. ನಾಗೇಂದ್ರ ಪ್ರಸಾದ್ ಅವರು ನಗರ ಕೇಂದ್ರ ಗ್ರಂಥಾಲಯಕ್ಕೆ ಹಸ್ತಾಂತರಿಸಿದ್ದಾರೆ' ಎಂದರು.


'ಅಮೆರಿಕದ ಅಟ್ಲಾಂಟದಲ್ಲಿ ಎ.ಕೆ. ಎಜು-ಸ್ಯಾಟ್ ಸಂಸ್ಥೆಯು ಭಾರತದ ಇಸ್ರೋ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಭಾರತದಲ್ಲಿನ ಮೂಲಸೌಕರ್ಯಗಳಿಲ್ಲದ ಕಟ್ಟಕಡೆಯ ಗ್ರಾಮಗಳಲ್ಲಿನ ಶಿಕ್ಷಣ ವಂಚಿತ ಮಕ್ಕಳಿಗೆ ಎ.ಕೆ. ಎಜು-ಸ್ಯಾಟ್ ಮೂಲಕ ಮೂಲಭೂತ ಶಿಕ್ಷಣ ನೀಡುವ ಕೆಲಸ ಮಾಡುತ್ತಿದ್ದು, ಅದರ ಭಾಗವಾಗಿ ಈ ಪುಸ್ತಕಗಳನ್ನು ನೀಡಿದೆ' ಎಂದು ಹೇಳಿದರು.

'ಕ್ರೀಡೆ, ವೈದ್ಯಕೀಯ ಶಿಕ್ಷಣ ಮತ್ತು ವಿಜ್ಞಾನ, ಶಾಸ್ತ್ರೀಯ ಹಾಗೂ ನವನವೀನ ಕಾದಂಬರಿಗಳು, ಪ್ರಸಿದ್ಧ ವ್ಯಕ್ತಿಗಳ ಜೀವನ ಚರಿತ್ರೆಗಳು, ಮಾಹಿತಿ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳು ಮತ್ತು ಮೆಕ್ಯಾನಿಕಲ್ ಎಂಜಿನಿಯರಿಂಗ್ ಸೇರಿದಂತೆ ಹಲವು ಪ್ರಕಾರದ ಪುಸ್ತಕಗಳನ್ನು ಇದರಲ್ಲಿವೆ' ಎಂದು ಅವರು ತಿಳಿಸಿದರು.



ಪುಸ್ತಕ ಹಸ್ತಾಂತರ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತ ಅನ್ಬುಕುಮಾರ್, ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕ ಸತೀಶ್ ಕುಮಾರ ಎಸ್. ಹೊಸಮನಿ, ಸಚಿವ ಎಸ್. ಸುರೇಶ್ ಕುಮಾರ್, ನಾಗೇಂದ್ರ ಪ್ರಸಾದ್, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಉಮಾಶಂಕರ್ ಇದ್ದರು

'ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರು ಸೌಲಭ್ಯ ಕಲ್ಪಿಸಿ'



ಬೆಂಗಳೂರು: 'ರಾಜ್ಯದ ಗ್ರಾಮೀಣ ಭಾಗದಲ್ಲಿನ ಎಲ್ಲ ಸರ್ಕಾರಿ ಶಾಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಬೇಕು' ಎಂದು ರಾಜ್ಯ ಸರ್ಕಾರದ ಶೈಕ್ಷಣಿಕ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ಒತ್ತಾಯಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆದಿರುವ ಅವರು, 'ಕೋವಿಡ್ ಬಿಕ್ಕಟ್ಟಿನಿಂದಾಗಿ ಪೋಷಕರು ಖಾಸಗಿ ಶಾಲೆಗಳಲ್ಲಿ ಶುಲ್ಕ ಪಾವತಿಸಲಾಗುತ್ತಿಲ್ಲ. ಬಹುತೇಕರು ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಲು ಮುಂದಾಗುತ್ತಿದ್ದಾರೆ. ಈ ಕಷ್ಟದ ಸಂದರ್ಭದಲ್ಲಿ ನಾವು ಸರ್ಕಾರಿ ಶಾಲೆಯಲ್ಲಿ ಎಲ್ಲ ಸೌಲಭ್ಯ ಒದಗಿಸಬೇಕು' ಎಂದು ಅವರು ಸಲಹೆ ನೀಡಿದ್ದಾರೆ.

'ಕುಡಿಯುವ ನೀರು ಮಾತ್ರವಲ್ಲದೆ, ಶೌಚಾಲಯ ನಿರ್ಮಾಣ, ಶೌಚಾಲಯಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವುದು, ಶಾಲೆಗೆ ಕಾಂಪೌಂಡ್ ನಿರ್ಮಾಣ ಸೇರಿದಂತೆ ಎಲ್ಲ ಸೌಲಭ್ಯ ಕಲ್ಪಿಸಬೇಕು. ಹೆಚ್ಚು ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವಂತಾದರೆ, ಖಾಸಗಿ ಶಾಲೆಗಳ ಆಡಳಿತ ಮಂಡಳಿ ಮತ್ತು ಪೋಷಕರ ನಡುವೆ ಈಗ ಶುಲ್ಕದ ವಿಚಾರವಾಗಿ ನಡೆಯುತ್ತಿರುವ ಸಂಘರ್ಷವೂ ಕೊನೆಯಾಗುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಡಿಸೆಂಬರ್‌ನಲ್ಲಿ ಮೊದಲ ಪ್ರಾಯೋಗಿಕ ಉಡಾವಣೆ ಸಾಧ್ಯತೆ ಇಲ್ಲ

‘ಗಗನಯಾನ’ಕ್ಕೆ ಹಿನ್ನಡೆ ತಂದ ಕೋವಿಡ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಾನವಸಹಿತ ಯಾನಕ್ಕೆ ಮೊದಲು ಎರಡು ಪ್ರಾಯೋಗಿಕ ಯಾನ
- ಯಾನಕ್ಕೆ ಬೇಕಾದ ದೊರೆಯದ ಅಗತ್ಯ ಪರಿಕರಗಳು
- ರಷ್ಯಾದಲ್ಲಿ ಗಗನಯಾನಿಗಳಿಗೆ ತರಬೇತಿ



ಬೆಂಗಳೂರು: ಮಾನವ ಸಹಿತ ‘ಗಗನಯಾನ’ಕ್ಕೆ ಸಿದ್ಧತೆ ನಡೆಸುತ್ತಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗೆ (ಇಸ್ರೊ) ಕೋವಿಡ್ ಲಾಕ್‌ಡೌನ್‌ನಿಂದ ದೊಡ್ಡ ಹಿನ್ನಡೆಯಾಗಿದೆ. ಇದರ ಪರಿಣಾಮ ಗಗನಯಾತ್ರಿಗಳನ್ನು ಒಯ್ಯುವುದಕ್ಕೂ ಮೊದಲು ಇದೇ ಡಿಸೆಂಬರ್‌ನಲ್ಲಿ ನಡೆಸಬೇಕಿದ್ದ ಮಾನವ ರಹಿತ ಪ್ರಾಯೋಗಿಕ ಯಾನವನ್ನು ಮುಂದೂಡುವ ಸಾಧ್ಯತೆ ಇದೆ.

ಲಾಕ್‌ಡೌನ್‌ನಿಂದಾಗಿ ಉದ್ಯಮಗಳು ಮುಚ್ಚಿದ್ದರಿಂದ ರಾಕೆಟ್ ಅದಕ್ಕೆ ಸಂಬಂಧಿಸಿದ ಇತರ ಸೌಲಭ್ಯಗಳ ನಿರ್ಮಾಣಕ್ಕೆ ಅಗತ್ಯವಿರುವ ಪರಿಕರಗಳು ಸಿಗುತ್ತಿಲ್ಲ. ಲಾಕ್‌ಡೌನ್ ತೆರೆದು ಈಗಷ್ಟೇ ಕೈಗಾರಿಕಾ ಘಟಕಗಳು ಕಾರ್ಯಾರಂಭ ಮಾಡಿರುವುದರಿಂದ ಇನ್ನಷ್ಟೇ ಪೂರೈಕೆ ಆಗಬೇಕಿದೆ.

ಮಾನವನನ್ನು ಬಾಹ್ಯಾಕಾಶಕ್ಕೆ ಕಳಿಸುವುದಕ್ಕೆ ಮುನ್ನ ಎರಡು ಮಾನವ ರಹಿತ ರಾಕೆಟ್‌ಗಳನ್ನು ಪ್ರಾಯೋಗಿಕವಾಗಿ ಉಡಾವಣೆ ಮಾಡಿ ಅದರ ಸಾಮರ್ಥ್ಯವನ್ನು ಪರೀಕ್ಷೆ ಮಾಡಿ, ನೌಕೆಯ ಕ್ಷಮತೆಯನ್ನು ನಿರ್ಧರಿಸಬೇಕಿತ್ತು. ಆದರೆ, ಕೋವಿಡ್ ಮೊದಲ ಮತ್ತು ಎರಡನೇ ಅಲೆಗಳು ಗಗನಯಾನ ಯೋಜನೆಯ ಮೇಲೆ ಗಂಭೀರ ಸ್ವರೂಪದ ಪರಿಣಾಮ ಬೀರಿದೆ ಎಂದು ಇಸ್ರೊ ಅಧಿಕಾರಿಗಳು ಹೇಳಿದ್ದಾರೆ.

ಈ ಯೋಜನೆಗೆ ಅಗತ್ಯವಿರುವ ಹಾರ್ಡ್‌ವೇರ್ ಸಾಧನಗಳನ್ನು ಫ್ಯಾಬ್ರಿಕೇಟ್ ಮಾಡುವ ಉದ್ಯಮಗಳು ಲಾಕ್‌ಡೌನ್ ಪರಿಣಾಮ ಮುಚ್ಚಿ ಹೋಗಿವೆ. ಇದರಿಂದಾಗಿ ವಿವಿಧ ಕಾಲಘಟ್ಟದಲ್ಲಿ ಫ್ಯಾಬ್ರಿಕೇಟ್‌ಗಳನ್ನು ಪೂರೈಕೆ ಮಾಡಲು ಅವುಗಳಿಗೆ ಸಾಧ್ಯವಾಗಲಿಲ್ಲ. ವಿನ್ಯಾಸ, ವಿಶ್ಲೇಷಣೆ ಮತ್ತು ಇತರ ಕಾರ್ಯಗಳನ್ನು ಇಸ್ರೊ ಮಾಡಿಕೊಂಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭೂಮಿಯ ಕೆಳ ಹಂತದ ಕಕ್ಷೆಗೆ ಮಾನವನನ್ನು ಒಯ್ದು ಸುರಕ್ಷಿತವಾಗಿ ಹಿಂದಕ್ಕೆ ಕರೆತರುವ ಯೋಜನೆ ಇದಾಗಿತ್ತು. ಗಗನಯಾನದ ಮೂಲಕ ಭಾರತದ ಬಾಹ್ಯಾಕಾಶ ವಿಜ್ಞಾನದ ಸಾಮರ್ಥ್ಯವನ್ನು ಜಗತ್ತಿಗೆ ಪ್ರದರ್ಶಿಸುವ ಇಚ್ಛೆ ಇಸ್ರೊದಾಗಿತ್ತು.

‘ಮೊದಲ ಮಾನವ ರಹಿತ ರಾಕೆಟ್ ಉಡಾವಣೆ ಡಿಸೆಂಬರ್‌ನಲ್ಲೂ, ಎರಡನೇ ಮಾನವ ರಹಿತ ಉಡಾವಣೆ 2022–23 ರಲ್ಲಿ, ಆ ಬಳಿಕವೇ ಮಾನವ ಸಹಿತ ಉಡಾವಣೆ ನಡೆಯಲಿದೆ’ ಎಂದು ಕೇಂದ್ರ ಬಾಹ್ಯಾಕಾಶ ಖಾತೆ ಸಚಿವ ಜಿತೇಂದ್ರ ಸಿಂಗ್ ಕಳೆದ ಫೆಬ್ರುವರಿಯಲ್ಲಿ ಹೇಳಿದ್ದರು.

ಇದಕ್ಕಾಗಿ ಈಗಾಗಲೇ ಆಯ್ಕೆಯಾಗಿರುವ ಭಾರತೀಯ ಗಗನಯಾನ ಅಭ್ಯರ್ಥಿಗಳು ರಷ್ಯಾದಲ್ಲಿ ಯಾನಕ್ಕೆ ಅಗತ್ಯವಿರುವ ತರಬೇತಿ ಪಡೆಯುತ್ತಿದ್ದಾರೆ. ಇಸ್ರೊದ ಹೆಮ್ಮೆಯ ‘ಜಿಎಸ್‌ಎಲ್‌ವಿ ಎಂಕೆ 3’ಯನ್ನು ಗಗನಯಾತ್ರಿಗಳನ್ನು ಹೊತ್ತೊಯ್ಯುವ ಕಾರ್ಯಕ್ಕೆ ಬಳಸಲಾಗುವುದು. 2022 ರ ಆಗಸ್ಟ್ 15 ಭಾರತ ಸ್ವಾತಂತ್ರ್ಯ ಪಡೆದು 75 ವರ್ಷಗಳು ತುಂಬುವ ಕಾರಣ, ಅದೇ ಸಂದರ್ಭದಲ್ಲಿ ಮಾನವ ಸಹಿತ ಗಗನಯಾನ ಕೈಗೊಳ್ಳಲು ಉದ್ದೇಶಿಸಲಾಗಿತ್ತು.

‘ಇನ್ನೂ ಹೆಚ್ಚು ಸಮಯ ಕಳೆದುಕೊಳ್ಳಲು ಬಯಸುವುದಿಲ್ಲ. ಕೆಲವು ಉದ್ಯಮಗಳು ಮುಚ್ಚಿದ್ದರಿಂದ ಅಗತ್ಯವಿರುವ ಸಾಧನಗಳು ಸಿಗಲಿಲ್ಲ. ಆದರೂ, ಸರ್ಕಾರ ನಿಗದಿ ಮಾಡಿರುವ ಸಮಯಕ್ಕೆ ಸರಿಯಾಗಿ ಯಾನದ ದಿನಾಂಕವನ್ನು ನಿಗದಿ ಮಾಡಲು ಪ್ರಯತ್ನಿಸುತ್ತೇವೆ’ ಎಂದು ಇಸ್ರೊ ಅಧ್ಯಕ್ಷ ಕೆ.ಶಿವನ್ ಇತ್ತೀಚೆಗೆ ಹೇಳಿದ್ದರು.

‘ಪ್ರತಿಯೊಬ್ಬರೂ ಸಂವಿಧಾನ ಅರಿತುಕೊಳ್ಳುವುದು ಅವಶ್ಯ’

ಪ್ರಜಾವಾಣಿ ವಾರ್ತೆ


ಪ್ರೊ.ರವಿವರ್ಮ ಕುಮಾರ್

ಮುಖ್ಯಾಂಶಗಳು

- ಲಿಖಿತ ಸಂವಿಧಾನಗಳಲ್ಲೇ ಅತ್ಯಂತ ಶ್ರೇಷ್ಠ ಸಂವಿಧಾನ
- ಪಂಚಾಯಿತಿ ವ್ಯವಸ್ಥೆಗೂ ಸಂವಿಧಾನದ ರಕ್ಷಣೆ
- ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ

ಬೆಂಗಳೂರು: ‘ದೇಶದ ಪ್ರತಿಯೊಬ್ಬ ನಾಗರಿಕರೂ ಸಂವಿಧಾನ ಅರಿತುಕೊಳ್ಳುವ ಅಗತ್ಯ ಹೆಚ್ಚಿದೆ. ಅದು ಅವರ ಕರ್ತವ್ಯ ಕೂಡ. ನಮ್ಮ ಸಂವಿಧಾನದಲ್ಲಿ ಸುಮಾರು 460 ಪರಿಚ್ಛೇದಗಳಿವೆ. 22 ಭಾಗಗಳಲ್ಲಿ ಇವುಗಳನ್ನು ಹಂಚಲಾಗಿದೆ. ಲಿಖಿತ ಸಂವಿಧಾನಗಳಲ್ಲೇ ಅತ್ಯಂತ ಶ್ರೇಷ್ಠ, ಸಮಗ್ರ ಹಾಗೂ ವ್ಯಾಪಕವಾದ ಸಂವಿಧಾನ ಎಂದು ಇದನ್ನು ಗುರುತಿಸಲಾಗಿದೆ’ ಎಂದು ಮಾಜಿ ಅಡ್ವೊಕೇಟ್ ಜನರಲ್ ಪ್ರೊ.ರವಿವರ್ಮ ಕುಮಾರ್ ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕವು ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿರುವ ‘ವಿಚಾರ ಕಲರವ’ ಉಪನ್ಯಾಸ ಮಾಲಿಕೆಯಲ್ಲಿ ‘ಭಾರತ ಸಂವಿಧಾನದ ಶ್ರೇಷ್ಠತೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್’ ವಿಷಯದ ಕುರಿತು ಅವರು ಮಾತನಾಡಿದರು.

‘ನ್ಯಾಯಾಂಗದಲ್ಲಿ ಒಕ್ಕೂಟ ವ್ಯವಸ್ಥೆ ಇಲ್ಲ. ಅದು ಏಕರೂಪವಾದುದು. ಭಾರತವು ಚತುಸ್ತಂಭ ರಾಷ್ಟ್ರ. 73ನೇ ತಿದ್ದುಪಡಿ ಮೂಲಕ ಪಂಚಾಯಿತಿ ವ್ಯವಸ್ಥೆಗೂ ಸಂವಿಧಾನದ ರಕ್ಷಣೆ ನೀಡಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪಂಚಾಯಿತಿ ಹಾಗೂ ಸ್ಥಳೀಯ ನಗರಾಡಳಿತ ಸಂಸ್ಥೆಗಳಲ್ಲೂ ಮೀಸಲಾತಿ ಕಲ್ಪಿಸಲಾಗಿದೆ. ಇವುಗಳಲ್ಲಿ ಮಹಿಳೆಯರ ಪಾಲು ಶೇ 50ರಷ್ಟಿದೆ’ ಎಂದು ಅವರು ಹೇಳಿದರು.

ವಿಶ್ವವಿದ್ಯಾಲಯದ ಕುಲಪತಿ ಕೆ.ಆರ್. ವೇಣುಗೋಪಾಲ್ ಮತ್ತು ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಎನ್.ಸತೀಶ್ ಗೌಡ ಇದ್ದರು.

ಹಿಮಾಚಲ ಹೈಕೋರ್ಟ್ ಹಂಗಾಮಿ ಸಿ.ಜೆ ಮಳೀಮಠ ನೇಮಕ


ರವಿ ಮಳೀಮಠ

ನವದೆಹಲಿ (ಪಿಟಿಐ): ಕನ್ನಡಿಗರಾದ ನ್ಯಾಯಮೂರ್ತಿ ರವಿ ವಿಜಯ್ ಕುಮಾರ್ ಮಳೀಮಠ ಅವರನ್ನು ಹಿಮಾಚಲ ಪ್ರದೇಶ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಗಿದೆ.

ಅಲ್ಲಿನ ಮುಖ್ಯ ನ್ಯಾಯಮೂರ್ತಿ ಲಿಂಗಪ್ಪ ನಾರಾಯಣ ಸ್ವಾಮಿ ಅವರ ನಿವೃತ್ತಿಯಿಂದ ತೆರವಾಗಲಿರುವ ಸ್ಥಾನದ ಜವಾಬ್ದಾರಿಯನ್ನು ಅದೇ ಹೈಕೋರ್ಟ್‌ನ ಅತ್ಯಂತ ಹಿರಿಯ ನ್ಯಾಯಮೂರ್ತಿ ಎಂಬ ನೆಲೆಯಲ್ಲಿ ರವಿ ಮಳೀಮಠ ಅವರು ಜುಲೈ1ರಿಂದ ನಿರ್ವಹಿಸಲಿದ್ದಾರೆ ಎಂದು ಕಾನೂನು ಸಚಿವಾಲಯ ತಿಳಿಸಿದೆ.

ಒಂಟಿ ಸಲಗ ಸೆರೆ

ಚನ್ನಪಟ್ಟಣ: ತಾಲ್ಲೂಕಿನ ಗುಡ್ಡೆ ಅವ್ವೇರಹಳ್ಳಿ ಗ್ರಾಮದ ಅರಣ್ಯ ಪ್ರದೇಶದಲ್ಲಿ ಸೋಮವಾರ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಒಂಟಿ ಸಲಗವೊಂದನ್ನು ಸೆರೆ ಹಿಡಿದು ದುಬಾರೆ ಆನೆ ಕ್ಯಾಂಪ್‌ಗೆ ರವಾನಿಸಿದರು.

ಗ್ರಾಮಕ್ಕೆ ಹೊಂದಿಕೊಂಡಂತಿರುವ ಅರಣ್ಯಪ್ರದೇಶದಲ್ಲಿ ಒಂಟಿ ಸಲಗ ಇರುವ ಬಗ್ಗೆ ಗ್ರಾಮಸ್ಥರು ನೀಡಿದ ದೂರಿನ ಮೇರೆಗೆ ಸ್ಥಳಕ್ಕೆ ಬಂದ ಅರಣ್ಯ ಇಲಾಖೆ ಸಿಬ್ಬಂದಿ ಪಳಗಿದ ಆನೆಗಳನ್ನು ಸ್ಥಳಕ್ಕೆ ಕರೆಸಿಕೊಂಡ ಸಿಬ್ಬಂದಿ ಸಲಗವನ್ನು ಸೆರೆ ಹಿಡಿಯುವಲ್ಲಿ ಸಫಲರಾದರು.



ಬೆಟ್ಟಹಲಸೂರು ಪಂಚಾಯಿತಿಯ ಗ್ರಾಮಸಭೆಯಲ್ಲಿ ಗ್ರಾಮಪಂಚಾಯ್ತಿ ಅಧ್ಯಕ್ಷೆ ರಜನಿ ಪ್ರಕಾಶ್ ಮಾತನಾಡಿದರು.

ಸಾರ್ವಜನಿಕ ಸೌಲಭ್ಯದ ಮಾಹಿತಿ ಕೊರತೆ ಗ್ರಾ.ಪಂ. ಅಧ್ಯಕ್ಷೆ ರಜನಿ ಅಸಮಾಧಾನ

ಪ್ರಜಾವಾಣಿ ವಾರ್ತೆ

ಯಲಹಂಕ: ‘ವಿವಿಧ ಇಲಾಖೆಗಳ ಅಧಿಕಾರಿಗಳು ಗ್ರಾಮಸಭೆಗಳಿಗೆ ಹಾಜರಾಗದೆ ನಿರ್ಲಕ್ಷ್ಯ ವಹಿಸುತ್ತಿರುವುದರಿಂದ ಸರ್ಕಾರದ ಸೌಲಭ್ಯಗಳ ಬಗ್ಗೆ ಸಾರ್ವಜನಿಕರಿಗೆ ಸರಿಯಾದ ಮಾಹಿತಿ ಸಿಗುತ್ತಿಲ್ಲ. ಈ ದಿಸೆಯಲ್ಲಿ ಅಧಿಕಾರಿಗಳು ಕಡ್ಡಾಯವಾಗಿ ಸಭೆಗಳಿಗೆ ಹಾಜರಾಗಬೇಕು ಎಂದು ಸರ್ಕಾರ ಆದೇಶ ಹೊರಡಿಸಬೇಕು’ ಎಂದು ಬೆಟ್ಟಹಲಸೂರು ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಜಿ.ಎಸ್. ರಜನಿಪ್ರಕಾಶ್ ಆಗ್ರಹಿಸಿದರು.

ಬೆಟ್ಟಹಲಸೂರು ಗ್ರಾಮಪಂಚಾಯ್ತಿಯ ಗ್ರಾಮಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ಅಧಿಕಾರಿಗಳು ಗ್ರಾಮಸಭೆಗಳಲ್ಲಿ ಪಾಲ್ಗೊಂಡು ಸರ್ಕಾರದಿಂದ ಲಭ್ಯವಿರುವ ಸೌಲಭ್ಯಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು. ಆದರೆ ಕೆಲವೇ ಅಧಿಕಾರಿಗಳು ಹಾಜರಾಗಿ, ಇನ್ನುಳಿದವರು ಗೈರಾಗುವುದರಿಂದ ಜನರಿಗೆ ಮಾಹಿತಿ ಕೊರತೆಯಾಗುತ್ತಿದೆ’ ಎಂದರು.

‘ಬೆಟ್ಟಹಲಸೂರು ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಸ್ವಚ್ಛತೆ ಇಲ್ಲ. ಮೂಲಸೌಕರ್ಯಗಳ ಕೊರತೆಯಿದೆ. ವೈದ್ಯರು ಮತ್ತು ಸಿಬ್ಬಂದಿ ನೆಲೆಸಿರುವ ವಸತಿಗೃಹಗಳು ಶಿಥಿಲಗೊಂಡಿದ್ದು, ಕೂಡಲೇ ಈ ಸಮಸ್ಯೆ ಬಗೆಹರಿಸಬೇಕು’ ಎಂದು ಗ್ರಾಮಪಂಚಾಯ್ತಿ ಮಾಜಿ ಅಧ್ಯಕ್ಷ ಬಿ.ಕೆ.ಮಂಜುನಾಥಗೌಡ ಮನವಿ ಮಾಡಿದರು.

ಸರ್ಕಾರಿ ಶಾಲೆಯ ಪ್ರೌಢಶಾಲಾ ವಿಭಾಗದಲ್ಲಿ ಮಕ್ಕಳಸಂಖ್ಯೆ ಹೆಚ್ಚಾಗಿದ್ದು, ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವೂ ಬರುತ್ತಿದೆ. ಆದರೆ ಕೊಠಡಿ ಮತ್ತು ಡೆಸ್ಕ್‌ಗಳ ಕೊರತೆಯಿಂದ ಮಕ್ಕಳು ಶಾಲೆಯ ಹೊರಗೆ ನೆಲದ ಮೇಲೆ ಕುಳಿತು ಪಾಠ ಕೇಳಬೇಕಾದ ಪರಿಸ್ಥಿತಿಯಿದೆ. ಕೂಡಲೇ ಈ ಸಮಸ್ಯೆಯನ್ನು ಪರಿಹರಿಸಬೇಕು ಎಂದು ಅವರು ತಿಳಿಸಿದರು.

ಬೆಟ್ಟಹಲಸೂರಿನಿಂದ ತರಹುಣಿಸೆಗೆ ತೆರಳುವ ಮಾರ್ಗದಲ್ಲಿ ರೈಲು ನಿಲ್ದಾಣದ ಬಳಿ ರೈಲ್ವೆ ಕೆಳಸೇತುವೆ ಕಾಮಗಾರಿ ಆರಂಭವಾಗಿ 8 ವರ್ಷ ಕಳೆದಿದ್ದರೂ ಪೂರ್ಣಗೊಳ್ಳದೆ ನನೆಗುದಿಗೆ ಬಿದ್ದಿರುವುದರಿಂದ ವಾಹನಸವಾರರು ನಾಲ್ಕೈದು ಕಿಲೋಮೀಟರ್ ಸುತ್ತಿಬಳಸಿ ತಮ್ಮ ಗ್ರಾಮಗಳಿಗೆ ತೆರಳಬೇಕಾಗಿದೆ. ಪ್ರಕರಣ ನ್ಯಾಯಾಲಯದಲ್ಲಿದ್ದು, ನ್ಯಾಯಮೂರ್ತಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಈ ಸಮಸ್ಯೆಗೆ ಪರಿಹಾರ ಒದಗಿಸಬೇಕು ಎಂದು ನಿವಾಸಿ ದೇವರಾಜು ಕೋರಿದರು.

ಯಲಹಂಕ ತಾಲ್ಲೂಕು ಪಂಚಾಯ್ತಿ ಕಾರ್ಯ ನಿರ್ವಾಹಕ ಅಧಿಕಾರಿ ಎಂ. ವೆಂಕಟೇಶ್, ಬಿಎಂಟಿಸಿ ನಿರ್ದೇಶಕ ಟಿ.ಪಿ. ಪ್ರಕಾಶ್, ಗ್ರಾಮಪಂಚಾಯ್ತಿ ಉಪಾಧ್ಯಕ್ಷ ಕುದುರೆಗೆರೆ ಕೃಷ್ಣಮೂರ್ತಿ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಸಿ. ರಾಜಕುಮಾರ್, ಕಾರ್ಯದರ್ಶಿ ಎಂ.ಸಿ. ಶಿವಪ್ರಸಾದ್ ಉಪಸ್ಥಿತರಿದ್ದರು.

ಸರ್ವಾಧಿಕಾರ ಧೋರಣೆಯ ಸರ್ಕಾರದ ವಿರುದ್ಧ ಹೋರಾಡಲು ಸಲಹೆ

ಜಾತ್ಯತೀತ ಶಕ್ತಿಗಳು ಒಗ್ಗೂಡಲಿ: ಯೆಚೂರಿ

ಪ್ರಜಾವಾಣಿ ವಾರ್ತೆ


ಸೀತಾರಾಂ ಯೆಚೂರಿ

ಬೆಂಗಳೂರು: ‘ಆರ್‌.ಎಸ್.ಎಸ್ ನೇತೃತ್ವದ ಪ್ರಧಾನಿ ನರೇಂದ್ರ ಮೋದಿಯವರ ಸರ್ವಾಧಿಕಾರ ಸರ್ಕಾರವು ದೇಶವನ್ನು ಕತ್ತಲೆಯೆಡೆಗೆ ಕೊಂಡೊಯ್ಯಲು ನಡೆಸಿರುವ ಪ್ರಯತ್ನವನ್ನು ಸೋಲಿಸಿ ಬೆಳಕಿನ ಭಾರತವನ್ನು ಕಟ್ಟುವ ಕೆಲಸವನ್ನು ಎಲ್ಲ ಜಾತ್ಯತೀತ, ಪ್ರಗತಿಪರ ಶಕ್ತಿಗಳು ಒಗ್ಗೂಡಿ ಮಾಡಬೇಕು’ ಎಂದು ಸಿಪಿಎಂ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಸಲಹೆ ನೀಡಿದರು.

ಸಿಪಿಎಂ (ಎಂ) ಕರ್ನಾಟಕ ರಾಜ್ಯ ಸಮಿತಿ ಆಯೋಜಿಸಿದ್ದ ‘ತುರ್ತು ಪರಿಸ್ಥಿತಿ ಅಂದು ಮತ್ತು ಇಂದು’ ವಿಷಯ ಕುರಿತು ಸೋಮವಾರ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ‘ಅಂದು ತನ್ನ ನಿರಂತರ ಸೋಲು, ನ್ಯಾಯಾಂಗದಿಂದ ಆದ ಹಿನ್ನಡೆ ಮತ್ತು ಭ್ರಷ್ಟಾಚಾರ ವಿರುದ್ಧ ಬೆಳೆದು ಬಂದ ತೀವ್ರ ಹೋರಾಟಗಳಿಗೆ ಹೆದರಿ ಪ್ರಧಾನಿ ಇಂದಿರಾಗಾಂಧಿಯವರು ದೇಶದಲ್ಲಿ ಆಂತರಿಕ ತುರ್ತು-ಪರಿಸ್ಥಿತಿಯನ್ನು ಅಧಿಕೃತವಾಗಿ ಘೋಷಿಸಿದ್ದರು. ಆದರೆ, ಇಂದು ಬಿಜೆಪಿ ನೇತೃತ್ವದ ಮೋದಿ ಸರ್ಕಾರ ಸಂವಿಧಾನಾತ್ಮಕ ಹಕ್ಕುಗಳನ್ನು ನಾಶಪಡಿಸುವ ಮೂಲಕ ಅಘೋಷಿತ ತುರ್ತುಪರಿಸ್ಥಿತಿಯನ್ನು ದೇಶದ ಮೇಲೆ ಹೇರಿದೆ’ ಎಂದು ಆರೋಪಿಸಿದರು.

‘ಬಿಜೆಪಿ ನೇತೃತ್ವದ ಸರ್ಕಾರವು ಸಂವಿಧಾನದ ಆಧಾರ ಸ್ತಂಭಗಳಾದ ಆರ್ಥಿಕ ಸಾರ್ವಭೌಮತ್ವ, ಜಾತ್ಯತೀತ ಪ್ರಭುತ್ವ, ಸಾಮಾಜಿಕ ನ್ಯಾಯ ಹಾಗೂ ಒಕ್ಕೂಟ ವ್ಯವಸ್ಥೆಯನ್ನು, ಅದರೊಂದಿಗೆ ಜನತೆಗೆ ಸಿಕ್ಕಿರುವ ಹಕ್ಕುಗಳನ್ನು ಕೂಡ ಸಂಪೂರ್ಣ ನಾಶಪಡಿಸುತ್ತಿದೆ’ ಎಂದರು.

‘ನಮ್ಮ ಸ್ವಾತಂತ್ರ್ಯ ಚಳವಳಿಯ ಆಶೋತ್ತರಗಳ ಭಾಗವಾಗಿ ನಮ್ಮ ಸಂವಿಧಾನ ಬೆಳೆದು ಬಂದಿದೆ. ಅದರಲ್ಲಿ ಬಸವಣ್ಣನಿಂದ ಹಿಡಿದು ಶಂಕರಾಚಾರ್ಯರ ತತ್ವಗಳಿಗೂ ಅವಕಾಶ ಕಲ್ಪಿಸಿದೆ. ಜನರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಿ ಪ್ರತಿಯೊಂದನ್ನು ಪ್ರಶ್ನಿಸುವ ಅವಕಾಶವನ್ನು ನೀಡಿದೆ. ಆದರೆ ಮೋದಿ ಸರ್ಕಾರ ನೂತನ ಶಿಕ್ಷಣ ನೀತಿಯನ್ನು ರೂಪಿಸಿ ಅವೈಚಾರಿಕ, ಅವೈಜ್ಞಾನಿಕ ಅಂಶಗಳನ್ನು ಅದರಲ್ಲಿ ಸೇರಿಸಿ ಜನತೆಯನ್ನು ಮತ್ತು ದೇಶವನ್ನು ಮನುಸ್ಮೃತಿ ಕಾಲದತ್ತ ತಳ್ಳುವ ಹುನ್ನಾರ ನಡೆಸಿದೆ. ಇದು ಭವಿಷ್ಯದ ಭಾರತವನ್ನೇ ನಾಶಪಡಿಸುವ ಸಂಘಪರಿವಾರದ ಕಾರ್ಯತಂತ್ರವೇ ಆಗಿದೆ’ ಎಂದು ಅವರು ಆರೋಪಿಸಿದರು.

‘34 ತಿಂಗಳುಗಳಿಂದ ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಹಲವಾರು ಜನರನ್ನು ಬಂಧಿಸಲಾಗಿದೆ. ಆ ಪ್ರಕರಣದಲ್ಲಿ ಬಂಧಿತರಾದವರ ಮೇಲೆ ಇದುವರೆಗೆ ಒಂದೂ ಪ್ರಕರಣಗಳು ಸಾಬೀತಾಗಿಲ್ಲ. ಅಲ್ಲದೆ ತುರ್ತು ಪರಿಸ್ಥಿತಿಯನ್ನು ಸಂಘ ಪರಿವಾರವೇ ಬೆಂಬಲಿಸಿದ ಇತಿಹಾಸ ಇರುವಾಗ ನರೇಂದ್ರ ಮೋದಿ ಅವರಿಗೆ ಇಂದಿರಾ ಗಾಂಧಿ ಹೇರಿದ್ದ ತುರ್ತು ಪರಿಸ್ಥಿತಿ ವಿರೋಧಿಸಿ ಭಾಷಣ ಮಾಡುವ ನೈತಿಕತೆ ಇದೆಯೇ’ ಎಂದು ಯೆಚೂರಿ ಪ್ರಶ್ನಿಸಿದರು.

ಸಮಿತಿಯ ರಾಜ್ಯ ಕಾರ್ಯದರ್ಶಿ ಯು.ಬಸವರಾಜ್ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ಉಪ ಸಮಿತಿ ಸಂಚಾಲಕ ಡಾ. ಕೆ.ಪ್ರಕಾಶ ನಿರೂಪಿಸಿದರು.

‘ಪ್ರತಿ ಕುಟುಂಬಕ್ಕೆ ತಲಾ ₹7,500 ನೇರ ನಗದು ವರ್ಗಾವಣೆ ಮಾಡಿ’


ಬೃಂದಾ ಕಾರಟ್

‘ಕೋವಿಡ್‌ನಿಂದಾಗಿ ಜನರ ಜೀವನ ನಿರ್ವಹಣೆ ಕಷ್ಟವಾಗಿದೆ. ಹೀಗಾಗಿ ಆದಾಯ ತೆರಿಗೆ ವ್ಯಾಪ್ತಿಯಿಂದ ಹೊರಗಿರುವ ಪ್ರತಿ ಕುಟುಂಬಕ್ಕೆ ತಲಾ ₹7,500 ನೇರ ನಗದು ವರ್ಗಾವಣೆ ಮಾಡಬೇಕು. ಕೋವಿಡ್‌ನಿಂದ ಮೃತಪಟ್ಟಿರುವ ವ್ಯಕ್ತಿಗಳ ಕುಟುಂಬಗಳಿಗೆ ಕೂಡಲೇ ತಲಾ ₹4 ಲಕ್ಷ ಪರಿಹಾರ ಪ್ರಕಟಿಸಬೇಕು. ಜೊತೆಗೆ ತಲಾ 10 ಕೆಜಿ ಆಹಾರ ಧಾನ್ಯ ಒದಗಿಸಬೇಕು’ ಎಂದು ಸಿಪಿಎಂ ಪಾಲಿಟ್ ಬ್ಯೂರೊ ಮುಖ್ಯಸ್ಥೆ ಬೃಂದಾ ಕಾರಟ್ ಒತ್ತಾಯಿಸಿದರು.

ಬೆಲೆ ಏರಿಕೆ ಖಂಡಿಸುವ ಹಾಗೂ ಕೋವಿಡ್ 3ನೇ ಅಲೆ ಎದುರಿಸಲು ಸನ್ನದ್ಧವಾಗುವಂತೆ ಸರ್ಕಾರವನ್ನು ಒತ್ತಾಯಿಸುವ ಸಲುವಾಗಿ ಸಿಪಿಐ, ಸಿಪಿಎಂ, ಎಸ್‌ಯುಸಿಐ (ಸಿ), ಸಿಪಿಐ (ಎಂಎಲ್), ಎಐಎಫ್‌ಬಿ, ಆರ್‌ಪಿಐ ಹಾಗೂ ಸ್ವರಾಜ್ ಇಂಡಿಯಾ ಹಮ್ಮಿಕೊಂಡಿದ್ದ ಆನ್‌ಲೈನ್ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

‘ಅಂಬಾನಿ, ಅದಾನಿ ಒಂದು ದಿನದಲ್ಲಿ ದುಡಿಯುವ ಹಣವನ್ನು ಸಾಮಾನ್ಯ ಜನ ಗಳಿಸಬೇಕಾದರೆ 10 ಸಾವಿರ ವರ್ಷಗಳೇ ಬೇಕು. ಸರ್ಕಾರದ ನೀತಿಗಳಿಂದಾಗಿ ಸಮಾಜದಲ್ಲಿ ಈ ಬಗೆಯ ಅಸಮಾನತೆ ಸೃಷ್ಟಿಯಾಗಿದೆ. ಜನರ ಲೂಟಿಗೆ ಇಳಿದಿರುವ ಮೋದಿ ಸರ್ಕಾರದ ವಿರುದ್ಧದ ಹೋರಾಟವನ್ನು ತೀವ್ರಗೊಳಿಸಬೇಕು. ಬೆಲೆ ಏರಿಕೆಯಿಂದ ಜನರನ್ನು ರಕ್ಷಿಸಬೇಕು’ ಎಂದರು.

ಸಿಪಿಐನ ಬಿನೊಯ್ ವಿಶ್ವಂ, ಎಸ್‌ಯುಸಿಐ (ಸಿ) ಪಾಲಿಟ್ ಬ್ಯೂರೊ ಸದಸ್ಯ ಕೆ.ರಾಧಾಕೃಷ್ಣ, ಸಿಪಿಐ (ಎಂಎಲ್) ಪಾಲಿಟ್ ಬ್ಯೂರೊ ಸದಸ್ಯೆ ಕವಿತಾ ಕೃಷ್ಣನ್ ಮಾತನಾಡಿದರು.

ಎಐಎಫ್‌ಬಿ ರಾಷ್ಟ್ರೀಯ ಮಂಡಳಿಯ ಕಾರ್ಯದರ್ಶಿ ಜಿ.ದೇವರಾಜನ್ ಇದ್ದರು.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಮತ

‘ಸಾಧನೆ ಮೂಲಕ ಉಳಿದವರು ಸಿಜಿಕೆ, ಸಿದ್ಧಲಿಂಗಯ್ಯ’

ಪ್ರಜಾವಾಣಿ ವಾರ್ತೆ



ರಂಗ ಚಂದಿರ ಮತ್ತು ರಂಗ ವಿಜಯಾ ಸಂಘಟನೆಯ ಸದಸ್ಯರು ಸಿಜಿಕೆ ಹಾಗೂ ಸಿದ್ಧಲಿಂಗಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಬೆಂಗಳೂರು: ‘ಸಿ.ಜಿ. ಕೃಷ್ಣಸ್ವಾಮಿ (ಸಿಜಿಕೆ) ಹಾಗೂ ಸಿದ್ಧಲಿಂಗಯ್ಯ ಅವರು ದೈಹಿಕವಾಗಿ ದೂರವಾದರೂ ತಮ್ಮ ಸಾಧನೆಗಳ ಮೂಲಕ ನಮ್ಮ ನಡುವೆಯೇ ಉಳಿದಿದ್ದಾರೆ’ ಎಂದು ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಮತ ವ್ಯಕ್ತಪಡಿಸಿದರು.

ರಂಗ ಚಂದಿರ ಮತ್ತು ರಂಗ ವಿಜಯಾ ಸಂಘಟನೆಯು ಆನ್‌ಲೈನ್ ವೇದಿಕೆಯಲ್ಲಿ ಆಯೋಜಿಸಿದ ‘ಸಿಜಿಕೆ 70ರ ಸವಿನೆನಪು ಹಾಗೂ ಕವಿ ಸಿದ್ಧಲಿಂಗಯ್ಯ ಅವರಿಗೆ ನುಡಿನಮನ’ ಕಾರ್ಯಕ್ರಮದಲ್ಲಿ ಮಾತನಾಡಿದರು.

ನಾಟಕಕಾರ ಎಲ್.ಎನ್. ಮುಕುಂದರಾಜ್, ‘ಸಿಜಿಕೆ ಅವರು ಕನ್ನಡ ರಂಗಭೂಮಿಗೆ ದೊಡ್ಡ ಶಕ್ತಿ ನೀಡಿದರು. ಸಿದ್ಧಲಿಂಗಯ್ಯ ಅವರು ಕನ್ನಡಕ್ಕೆ ವಿಶೇಷವಾದ ಶಕ್ತಿಯನ್ನು ಒದಗಿಸಿದರು. ಕನ್ನಡದ ಕಾವ್ಯ ಜಗತ್ತು ಆಗಾಗ ಜಡ್ಡುಗಟ್ಟುತ್ತದೆ. ವಚನಕಾರರ ಮಾದರಿಯಲ್ಲಿ ಕನ್ನಡಕ್ಕೆ ಹೊಸ ದಿಕ್ಕನ್ನು ತೋರಿಸಿದವರು ಸಿದ್ಧಲಿಂಗಯ್ಯ’ ಎಂದರು.

ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ‘ಸಿಜಿಕೆ ಅವರು ತೆರೆಮರೆಯಲ್ಲಿದ್ದವರಿಗೆ ಪ್ರೋತ್ಸಾಹ ನೀಡಿ, ಮುನ್ನೆಲೆಗೆ ತರಲು ಶ್ರಮಿಸಿದರು. ತಾವು ಬೆಳೆಯುವ ಜತೆಗೆ ಬೇರೆಯವರನ್ನೂ ಬೆಳೆಸಿದರು’ ಎಂದರು.

ಚಿಂತಕಿ ಎಂ.ಎಸ್. ಆಶಾದೇವಿ, ‘ಸಿಜಿಕೆ ಅವರು ಸಾಮಾಜಿಕ ಪಲ್ಲಟಕ್ಕೆ ರಂಗಭೂಮಿ ಬಳಸುವ ದಾರಿಯನ್ನು ಹಲವು ಪ್ರಯೋಗಗಳ ಮೂಲಕ ಕಂಡುಕೊಂಡಿದ್ದರು. ಸಿದ್ಧಲಿಂಗಯ್ಯ ಅವರು ಅರಿವಿನ ಕವಿಯಾಗಿದ್ದರಿಂದ ಜನತೆಯ ಕವಿಯಾಗಿದ್ದರು. ಕನ್ನಡ ಕಾವ್ಯ ಪರಂಪರೆಯ ಅಂಗವೈಕಲ್ಯತೆಯನ್ನು ರಿಪೇರಿ ಮಾಡಿದರು’ ಎಂದು ಹೇಳಿದರು.

‘ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ’


ಬನ್ನೇರುಘಟ್ಟ ರಸ್ತೆ ದಿಣ್ಣೆಪಾಳ್ಯದಲ್ಲಿ ಎಚ್‌.ಡಿ.ಕುಮಾರಸ್ವಾಮಿ ದಿನಸಿ ಕಿಟ್ ವಿತರಿಸಿದರು. ಜೆಡಿಎಸ್ ಮುಖಂಡ ಗೊಟ್ಟಿಗೆರೆ ಮಂಜಣ್ಣ, ಪ್ರಭಾಕರ ರೆಡ್ಡಿ, ಕಮ್ಮನಹಳ್ಳಿ ಅನಂತುಗೌಡ ಇದ್ದಾರೆ

ಬೊಮ್ಮನಹಳ್ಳಿ: ‘ಪ್ರಜಾಪ್ರಭುತ್ವವನ್ನು ಗಾಳಿಗೆ ತೂರಿ, ದೇಶದಲ್ಲಿ ಭಯದ ವಾತಾವರಣ ಸೃಷ್ಟಿಸಿ, ಅಘೋಷಿತ ತುರ್ತುಪರಿಸ್ಥಿತಿಯನ್ನು ಹೇರಿರುವ ಬಿಜೆಪಿಯು, ಇಂದಿರಾ ಗಾಂಧಿ ಹೇರಿದ್ದ ತುರ್ತು ಪರಿಸ್ಥಿತಿ ಬಗ್ಗೆ ಮಾತನಾಡುತ್ತಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದರು.

ಬನ್ನೇರುಘಟ್ಟ ರಸ್ತೆ ದಿಣ್ಣೆಪಾಳ್ಯ ಗ್ರಾಮದಲ್ಲಿ ಪ್ರಭಾಕರ ರೆಡ್ಡಿ ನೇತೃತ್ವದಲ್ಲಿ ಜೆಡಿಎಸ್ ದಕ್ಷಿಣ ವಿಧಾನಸಭಾ ಕ್ಷೇತ್ರ ಸಮಿತಿಯು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಡವರಿಗೆ ದಿನಸಿ ವಿತರಿಸಿ ಮಾತನಾಡಿದರು.

‘ಶಾಸಕರನ್ನು ಖರೀದಿಸಿದ್ದಾಯಿತು, ಇದೀಗ ನಗರಸಭೆ ಸದಸ್ಯರನ್ನೂ ಖರೀದಿಸುವ ಹೀನ ಕೆಲಸಕ್ಕೆ ಬಿಜೆಪಿ ಕೈ ಹಾಕಿದೆ, ಮುಖ್ಯಮಂತ್ರಿಗಳ ಕಾರ್ಯದರ್ಶಿ ಸಂತೋಷ್ ಎಂಬಾತ ನೇರವಾಗಿ ಹಣದ ಆಮಿಷ ಒಡ್ಡಿದ್ದು, ನಮ್ಮ ಬಳಿ ಸಾಕ್ಷಿ ಇದೆ. ಇದು ಬಿಜೆಪಿಗೆ ಪ್ರಜಾಪ್ರಭುತ್ವದ ಮೇಲೆ ಕಿಂಚಿತ್ತೂ ವಿಶ್ವಾಸವಿಲ್ಲ ಎಂಬುದಕ್ಕೆ ಸಾಕ್ಷಿ’ ಎಂದರು.

‘ರಾಜ್ಯದಲ್ಲಿ ಕೊರೊನಾವನ್ನು ತಹಬದಿಗೆ ತರುವಲ್ಲಿ, ಜನರ ಪ್ರಾಣ ಉಳಿಸುವಲ್ಲಿ ಸೋತಿರುವ ಸರ್ಕಾರ, ಎಲ್ಲೆಡೆ ಲೂಟಿಗೆ ಇಳಿದಿದೆ. ಕಾರ್ಮಿಕ ಇಲಾಖೆ ಮೂಲಕ ಕಾರ್ಮಿಕರಿಗೆ ಕಳಪೆ ದಿನಸಿ ಕಿಟ್ ನೀಡಿರುವುದನ್ನು ಮಾಧ್ಯಮಗಳು ವರದಿ ಮಾಡಿವೆ. ಬಿಜೆಪಿ ಶಾಸಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದಲೇ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ಹಣವನ್ನು ಖರ್ಚು ಮಾಡಿ, ದಿನಸಿ ಕಿಟ್ ನೀಡಲಾಗುತ್ತಿದೆ’ ಎಂದು ಅವರುಆರೋಪಿಸಿದರು.

‘ಜೆಡಿಎಸ್ ವತಿಯಿಂದ ದಕ್ಷಿಣ ವಿಧಾನ ವಿಧಾನಸಭಾ ಕ್ಷೇತ್ರದಲ್ಲಿ 40 ಸಾವಿರ ಕುಟುಂಬಗಳಿಗೆ ದಿನಸಿ ಕಿಟ್ ವಿತರಿಸಲಾಗುತ್ತಿದ್ದು, ಹಂತಹಂತವಾಗಿ ಕ್ಷೇತ್ರದ ಎಲ್ಲ ಕುಟುಂಬಗಳಿಗೂ ದಿನಸಿ ವಿತರಣೆ ಮಾಡುತ್ತೇವೆ’ ಎಂದು ಜೆಡಿಎಸ್ ಮುಖಂಡ ಪ್ರಭಾಕರ ರೆಡ್ಡಿ ಹೇಳಿದರು.

ಜೆಡಿಎಸ್ ಮುಖಂಡರಾದ ಗೊಟ್ಟಿಗೆರೆ ಮಂಜಣ್ಣ, ಕಮ್ಮನಹಳ್ಳಿ ಅನಂತುಗೌಡ ಇದ್ದರು.

ನಾನೂ ಮುಖ್ಯಮಂತ್ರಿ ಹುದ್ದೆಗೆ ಸ್ಪರ್ಧಿ: ಸಚಿವ ಉಮೇಶ ಕತ್ತಿ

ಪ್ರಜಾವಾಣಿ ವಾರ್ತೆ


ಉಮೇಶ ಕತ್ತಿ

ಆಲಮಟ್ಟಿ (ವಿಜಯಪುರ): ‘ಅವಕಾಶ, ದೈವಬಲ, ಜನಬಲವಿದ್ದರೆ ಎರಡೂವರೆ ವರ್ಷಗಳ ಬಳಿಕ ನಾನು ಕೂಡ ಮುಖ್ಯಮಂತ್ರಿಯಾಗಬಹುದು. ಎಂಟು ಬಾರಿ ಶಾಸಕನಾಗಿ, ಸಚಿವನಾಗಿ ಕೆಲಸ ಮಾಡಿದ ಅನುಭವ ಇದೆ, ಆದರೆ ಈಗ ಮುಖ್ಯಮಂತ್ರಿ ಹುದ್ದೆ ಖಾಲಿಯಿಲ್ಲ’ ಎಂದು ಸಚಿವ ಉಮೇಶ ಕತ್ತಿ ಹೇಳಿದರು.

ಆಲಮಟ್ಟಿಯ ಜಲಾಶಯದಲ್ಲಿ ಸೋಮವಾರ ನೀರಿನ ಸಂಗ್ರಹಣೆ, ಪ್ರವಾಹ ನಿಯಂತ್ರಣದ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಜಲಾಶಯ ವೀಕ್ಷಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಮುಂದಿನ ಎರಡೂವರೆ ವರ್ಷ ಮುಖ್ಯಮಂತ್ರಿ ಹುದ್ದೆ ಖಾಲಿಯಿಲ್ಲ. ಖಾಲಿಯಿದ್ದರೆ ನಾನೂ ಮುಖ್ಯಮಂತ್ರಿ ಹುದ್ದೆಯ ಸ್ಪರ್ಧಿಯೇ. ಸದ್ಯಕ್ಕೆ ಯಡಿಯೂರಪ್ಪನವರೇ ನಮ್ಮ ಮುಖ್ಯಮಂತ್ರಿ’ ಎಂದೂ ಅವರು ಸ್ಪಷ್ಟಪಡಿಸಿದರು.

‘ಅಸಮಾನತೆ ನಿವಾರಣೆಗಾಗಿ, ಪ್ರತ್ಯೇಕ ರಾಜ್ಯಕ್ಕಾಗಿ ಧ್ವನಿಯೆತ್ತಿದ್ದೆ. ಉತ್ತರ ಕರ್ನಾಟಕಕ್ಕೆ ಅನ್ಯಾಯವಾದಾಗ ಯಾವುದೇ ಪಕ್ಷ ಅಧಿಕಾರದಲ್ಲಿದ್ದರೂ ನಾನು ಹೋರಾಡುವೆ’ ಎಂದು ಉಮೇಶ್ ಕತ್ತಿ ಹೇಳಿದರು.

ಕಾಂಗ್ರೆಸ್ ಹಗಲುಗನಸು: ‘ಮುಂದಿನ 10 ವರ್ಷಗಳ ಕಾಲ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲ್ಲ, ಕೂಸು ಹುಟ್ಟುವ ಮುನ್ನವೇ ಕುಲಾಯಿ ಎನ್ನುವ ಹಾಗೆ ಜಾತಿವಾರು ಮುಖ್ಯಮಂತ್ರಿಯಾಗಲು ಹಗಲುಗನಸು ಕಾಣುತ್ತಿದ್ದಾರೆ’ ಎಂದು ಅವರು ಟೀಕಿಸಿದರು.

ಪೌರೋಹಿತ್ಯಕ್ಕೂ ಸೈ ಕಶೆಕೋಡಿ ಅನಘಾ

ಬಂಟ್ವಾಳ: ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯ, ಕಲ್ಲಡ್ಕ ಸಮೀಪದ ಕಶೆಕೋಡಿ ಸೂರ್ಯನಾರಾಯಣ ಭಟ್ಟರ ಪುತ್ರಿ ಅನಘಾ ಅವರು ವೇದಾಧ್ಯಯನ ಮಾಡಿ, ತಂದೆಯೊಂದಿಗೆ ಪೌರೋಹಿತ್ಯ ನಡೆಸುವ ಮೂಲಕ ಗಮನ ಸೆಳೆದಿದ್ದಾರೆ.

ಅನಘಾ ಅವರು ಸ್ವಇಚ್ಛೆಯಿಂದ ಪೌರೋಹಿತ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಕಶೆಕೋಡಿ ಮನೆಯಲ್ಲಿ ನಿತ್ಯವೂ ವೇದಾಧ್ಯಯನ ನಡೆಯುತ್ತಿದ್ದು, ಜೊತೆಗೆ ಸಂಗೀತ, ಗೀತಾಧ್ಯಯನಕ್ಕೂ ಹಲವು ಮಂದಿ ಬಾಲಕರು ಬರುತ್ತಾರೆ. ಈ ನಡುವೆ ತಮ್ಮ ಸಹೋದರ ಆದಿತ್ಯ ಕೃಷ್ಣನ ಜೊತೆಗೆ ವೇದಾಧ್ಯಯನ ನಡೆಸಲು ತನಗೂ ಅವಕಾಶ ನೀಡಬೇಕು ಎಂದು ಪುತ್ರಿ ಅನಘಾ ಬೇಡಿಕೆಯಂತೆ ತಂದೆ ಸೂರ್ಯನಾರಾಯಣ ಭಟ್ಟರು ಸಂತೋಷದಿಂದಲೇ ತರಬೇತಿ ಮತ್ತು ಮಾರ್ಗದರ್ಶನ ನೀಡಿದ್ದಾರೆ.

‘ನನಗೆ ಪೌರೋಹಿತ್ಯವನ್ನು ವೃತ್ತಿಯಾಗಿ ಮಾಡುವ ಇಚ್ಛೆ ಇಲ್ಲ. ತಂದೆಯೊಂದಿಗೆ ಮದುವೆ ಮತ್ತಿತರ ಪೌರೋಹಿತ್ಯ ನಡೆಸುವಷ್ಟು ಸಾಮರ್ಥ್ಯ ಹೊಂದಿದ್ದೇನೆ’ ಎಂದು ಅನಘಾ ಪ್ರತಿಕ್ರಿಯಿಸಿದ್ದಾರೆ.

‘ವೇದಾಧ್ಯಯನ ತರಬೇತಿಯಲ್ಲಿ ಅನಘಾ ಸಂಪೂರ್ಣ ತೊಡಗಿಸಿಕೊಂಡಿರುವುದನ್ನು ಕಂಡ ಆರ್‌ಎಸ್‌ಎಸ್ ಮುಖಂಡ ಡಾ.ಕೆ.ಪ್ರಭಾಕರ ಭಟ್ ಅವರು ನೀಡಿದ್ದ ಪ್ರೋತ್ಸಾಹ ಇತರ ಹೆಣ್ಮಕ್ಕಳಿಗೆ ಪ್ರೇರಣೆಯಾಗುವಂತೆ ಮಾಡಿದೆ’ ಎಂದು ಕಶೆಕೋಡಿ ಸೂರ್ಯನಾರಾಯಣ ಭಟ್ ಅವರು ಹೇಳಿದ್ದಾರೆ.

ಸಿನಿಮಾ ಮತ್ತು ರಂಗಭೂಮಿ ಕಲಾವಿದರಿಗೆ ನಿವೇಶನ ಹಂಚಿಕೆ: ಸಚಿವ ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿವೇಶನ ಇಲ್ಲದಿರುವ ಚಲನಚಿತ್ರ ಕಲಾವಿದರು ಮತ್ತು ರಂಗಭೂಮಿ ಕಲಾವಿದರನ್ನು ಪಟ್ಟಿ ಮಾಡಿ ಅರ್ಜಿ ನೀಡಿದರೆ, ಮುಖ್ಯಮಂತ್ರಿಗಳ ಬಳಿ ಚರ್ಚಿಸಿ, ಒಂದೂವರೆ ತಿಂಗಳಲ್ಲಿ ಅವರಿಗೆ ವಸತಿ ಅಥವಾ ನಿವೇಶನ ಹಂಚಿಕೆ ಮಾಡಲಾಗುವುದು’ ಎಂದು ವಸತಿ ಸಚಿವ ವಿ.ಸೋಮಣ್ಣ ಭರವಸೆ ನೀಡಿದರು.

ವಿ.ಸೋಮಣ್ಣ ಪ್ರತಿಷ್ಠಾನವು ಕೆಂಪೇಗೌಡ ಜಯಂತಿ ಅಂಗವಾಗಿ ಗೋವಿಂದರಾಜ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸಿನಿಮಾ ಹಾಗೂ ರಂಗಭೂಮಿ ಕಲಾವಿದರಿಗೆ ದಿನಸಿ ಕಿಟ್ ವಿತರಿಸಿ ಅವರು ಮಾತನಾಡಿದರು.

ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಮಾತನಾಡಿ, ‘ಬೆಂಗಳೂರು ನಗರ ಖ್ಯಾತಿ ಪಡೆಯಲು ಮೂಲ ಕಾರಣ ಪುರುಷರು ನಾಡಪ್ರಭು ಕೆಂಪೇಗೌಡರು. ಅವರ ಅಭಿವೃದ್ಧಿಪರ ಚಿಂತನೆಗಳು ಹಾಗೂ ಯೋಜನೆಗಳನ್ನು ಜಾರಿಯಾದರೆ ಬೆಂಗಳೂರು ಇನ್ನಷ್ಟು ಅಭಿವೃದ್ಧಿಯತ್ತ ಸಾಗಲಿದೆ’ ಎಂದರು.


ಸಚಿವ ವಿ.ಸೋಮಣ್ಣ ಹಾಗೂ ಬಿಡಿಎ ಅಧ್ಯಕ್ಷ ಎಸ್‌.ಆರ್‌.ವಿಶ್ವನಾಥ್ ಕಲಾವಿದರಿಗೆ ದಿನಸಿ ಕಿಟ್ ವಿತರಿಸಿದರು. ಬಿಜೆಪಿ ಯುವ ಮುಖಂಡ ಅರುಣ್ ಸೋಮಣ್ಣ, ಸ್ಥಳೀಯ ಮುಖಂಡರಾದ ಕೆ.ಉಮೇಶ್ ಶೆಟ್ಟಿ, ವಿಶ್ವನಾಥ ಗೌಡ ಹಾಗೂ ಪ್ರತಿಷ್ಠಾನದ ಪದಾಧಿಕಾರಿಗಳು ಇದ್ದರು.

ಚಿತ್ರಾವಳಿ


ಕೇಸರಿ ಫೌಂಡೇಷನ್ ವತಿಯಿಂದ ಯಲಹಂಕ ಬಳಿಯ ಹುಣಸಮಾರನಹಳ್ಳಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಅವರು ಬಡವರಿಗೆ ಆಹಾರದ ಕಿಟ್ ವಿತರಿಸಿದರು. ಫೌಂಡೇಷನ್ ಸಂಸ್ಥಾಪಕ ತಮ್ಮೇಶ್ ಗೌಡ, ಮುಖಂಡರಾದ ಪಿ.ಕೆ.ರಾಜಗೋಪಾಲ, ದೊಡ್ಡ ಬಸವರಾಜು, ಮಂಜುನಾಥ್ ಉಪಸ್ಥಿತರಿದ್ದರು


ನಗರದ ಕೋಣನಕುಂಟೆಯ ಸಿಲಿಕಾನ್ ಸಿಟಿ ಆಕಾಡೆಮಿ ಆಫ್ ಸೆಕೆಂಡರಿ ಎಜುಕೇಷನ್ ಸಂಸ್ಥೆಯಲ್ಲಿ ಆಯೋಜಿಸಿದ್ದ ‘ಜಾಗತಿಕ ನಾಯಕರ ಸೃಷ್ಟಿಯತ್ತ’ ಕಾರ್ಯಕ್ರಮದಲ್ಲಿ ಫಿನ್ಲೆಂಡ್‌ನ ಸಿಸಿಇ ಸಂಸ್ಥೆಯ ನಿರ್ದೇಶಕ ಹೆರಮ್ಬ್ ಕುಲಕರ್ಣಿ ಅವರು ಫಿನ್ಲೆಂಡ್ ಶಿಕ್ಷಣ ವ್ಯವಸ್ಥೆಯ ಕುರಿತ ಭಿತ್ತಿಫಲಕಗಳನ್ನು ಅನಾವರಣಗೊಳಿಸಿದರು. ಸಂಸ್ಥೆಯ ಅಧ್ಯಕ್ಷ ಸಮೀರ ಸಿಂಹ, ಸಿ.ಸಿ.ಇ ಫಿನ್ಲೆಂಡ್‌ನ ಶಿಕ್ಷಣಶಾಸ್ತ್ರ ನಿರ್ದೇಶಕಿ ಸಿಮ್ರಾನ್ ಬಾಲಾನಿ, ಕಾರ್ಯದರ್ಶಿ ಎಲ್‌. ರವಿ, ಪ್ರಾಚಾರ್ಯರಾದ ಸುಮಾಲಿನಿ ಬಿ. ಸ್ವಾಮಿ ಇದ್ದಾರೆ.


ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಡಾ. ಅಕ್ಕಯ್ ಪದ್ಮಶಾಲಿ ಅವರ ಆತ್ಮಕತೆ ‘ಕರುಣೆಗೊಂದು ಸವಾಲು’ ಕೃತಿಯನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನಲ್ಲಿ ಸೋಮವಾರ ಬಿಡುಗಡೆ ಮಾಡಿದರು. ಹಿರಿಯ ರಂಗಕರ್ಮಿ ಪ್ರಸನ್ನ, ಶಾಸಕಿ ಸೌಮ್ಯಾರೆಡ್ಡಿ ಇದ್ದರು


ನೆಲಮಂಗಲ ತಾಲ್ಲೂಕಿನ ಕೂಲಿಪುರದಲ್ಲಿ ಗ್ರಾಮ ಪಂಚಾಯತಿ ಸದಸ್ಯ ವಿ.ಎಸ್‌. ಕೆಂಪರಾಜು ಬಡ ಗ್ರಾಮಸ್ಥರ ಮನೆಗಳಿಗೆ ತೆರಳಿ ದಿನಸಿ ಕಿಟ್‌ಗಳನ್ನು ವಿತರಿಸಿದರು

‘ಜಾತಿ ಕೇಂದ್ರಿತ ಮಠಗಳು ಜನಹಿತ ಕಾಯವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಠಗಳು ತಮ್ಮ ವೈಯಕ್ತಿಕ ಹಾಗೂ ವ್ಯಾಪಾರಿ ಹಿತಾಸಕ್ತಿ ರಕ್ಷಿಸಿಕೊಳ್ಳಲು ರಾಜಕಾರಣಿಗಳೊಂದಿಗೆ ಸಖ್ಯ ಬೆಳೆಸುತ್ತಿವೆ. ಇದು ಸರಿಯಲ್ಲ. ರಾಜಕೀಯದಲ್ಲಿ ಧರ್ಮ ಕೇಂದ್ರಗಳ ಹಸ್ತಕ್ಷೇಪ ಸಲ್ಲದು. ವಿಧಾನಸೌಧವನ್ನು ಅವಲಂಬಿಸಿರುವ ಧಾರ್ಮಿಕ ಸಂಸ್ಥೆಗಳಿಂದ ಸಮಾಜ ಸುಧಾರಣೆ ಸಾಧ್ಯವಿಲ್ಲ. ಜಾತಿ ಕೇಂದ್ರಿತವಾದ ಮಠೀಯ ನಾಯಕತ್ವವು ಸ್ವಹಿತ, ಜಾತಿಯ ಹಿತಾಸಕ್ತಿ ಕಾಯುತ್ತದೆ. ಸಾಮಾನ್ಯರ ಹಿತ ಕಾಯುವಂತಹದ್ದಾಗಿರುವುದಿಲ್ಲ. . .’

‘ರಾಜಕೀಯದಲ್ಲಿ ಧರ್ಮಕೇಂದ್ರಗಳ ಹಸ್ತಕ್ಷೇಪ ಸರಿಯೇ’ ಎಂಬ ವಿಷಯ ಕುರಿತು ‘ಪ್ರಜಾವಾಣಿ’ ಸೋಮವಾರ ಏರ್ಪಡಿಸಿದ್ದ ಸಂವಾದದಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು.

ಪ್ರಜಾವಾಣಿ ಸಂವಾದ

‘ಮಠಾಧಿಪತಿಗಳು– ಉದ್ಯಮಿಗಳ ಮಧ್ಯೆ ವ್ಯತ್ಯಾಸವೇ ಇಲ್ಲ’



‘ಕೇಂದ್ರ ಸರ್ಕಾರದ ಪ್ರಕ್ರಿಯೆಗಳ ಮೇಲೆ ರಾಜ್ಯ ಸರ್ಕಾರಗಳ ಇರುವಿಕೆ ರೂಪುಗೊಳ್ಳುತ್ತಿರುತ್ತದೆ. ಅದಕ್ಕನುಗುಣವಾಗಿ ಸಾಮಾಜಿಕ ಸಂರಚನೆಯಲ್ಲಿ ಬದಲಾವಣೆ ಆಗುತ್ತಾ ಹೋಗುತ್ತದೆ. ರಾಜಕೀಯ ಹಸ್ತಕ್ಷೇಪವು ಕರ್ನಾಟಕಕ್ಕೆ ಹೆಚ್ಚು ಸೂಕ್ತವಾಗುತ್ತದೆ. ಕೇಂದ್ರ ಸರ್ಕಾರದ ವಿಚಾರಕ್ಕೆ ಇದು ಅನ್ವಯವಾಗುವುದಿಲ್ಲ. ಅಲ್ಲಿ ಧಾರ್ಮಿಕ ಸಂಸ್ಥೆಗಳು ಶರೀರ ಸಮೇತವಾಗಿಯೇ ಸರ್ಕಾರದ ಅಸ್ತಿತ್ವದ ಮೇಲೆ ಆಸೀನವಾಗಿವೆ’.

‘ಹಿಂದೂ ರಾಷ್ಟ್ರೀಯವಾದದ ಪರಿಕಲ್ಪನೆ ರಾಷ್ಟ್ರ ಮತ್ತು ರಾಜ್ಯದಲ್ಲಿ ಜಾತಿ, ಧರ್ಮಗಳು ತಲೆ ಎತ್ತುವುದಕ್ಕೆ ಹಾಗೂ ಮಾತನಾಡುವುದಕ್ಕೆ ಪರೋಕ್ಷವಾಗಿ ಕಾರಣವಾಗಿದೆ. ಈಗಿರುವ ಧರ್ಮಸಂಸ್ಥೆಗಳು ವಾಣಿಜ್ಯ ಸಂಸ್ಥೆಗಳಾಗಿ ಪರಿವರ್ತನೆ ಆಗಿವೆ. ಮಠಾಧೀಶರು ಹುಸಿ ಆಲೋಚನಾ ಕ್ರಮದೊಂದಿಗೆ ರಾಜಕೀಯ ಪ್ರವೇಶಿಸಿದಾಗ ಅವರ ಅಸಾಮರ್ಥ್ಯ ಗೋಚರವಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಧರ್ಮ ಸಹಿಷ್ಣುತೆ ಎಂಬ ಪದವೇ ಅಪಾಯಕಾರಿ. ಮಠಾಧಿಪತಿ ಹಾಗೂ ಉದ್ಯಮಿಗಳಿಗೆ ವ್ಯತ್ಯಾಸವೇ ಕಾಣುತ್ತಿಲ್ಲ. ಧಾರ್ಮಿಕ ಕೇಂದ್ರಗಳು ವಿಧಾನಸೌಧದ ಎದುರು ಜೋಳಿಗೆ ಹಾಕಿ ನಿಂತುಬಿಟ್ಟಿವೆ’.

‘ರಾಜಕೀಯ ವ್ಯವಸ್ಥೆಯು ಧಾರ್ಮಿಕ ವ್ಯವಸ್ಥೆಯ ನಾಯಕತ್ವವನ್ನು ಭ್ರಷ್ಟಗೊಳಿಸಿದೆ. ಸ್ಥಳೀಯ ರಾಜಕೀಯದ ಮೇಲೆ ಹಿಡಿತ ಸಾಧಿಸುವುದು ಮಠಗಳಿಗೆ ಮುಖ್ಯವಾಗಿವೆ. ಇದಕ್ಕಾಗಿ ಮೀಸಲಾತಿಯನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಮೀಸಲಾತಿಯು ಮುಳುಗುವ ಹಡಗು ಇದ್ದ ಹಾಗೆ. ಅದಕ್ಕಾಗಿ ಗುದ್ದಾಡುವುದು ವ್ಯರ್ಥ ಪ್ರಯತ್ನ’.

ಅರವಿಂದ ಮಾಲಗತ್ತಿ, ಲೇಖಕ, ಸಂಸ್ಕೃತಿ ಚಿಂತಕ

‘ಪ್ರಭಾವಿ ಜಾತಿಗಳೇ ಮೀಸಲಾತಿ ಕೇಳುತ್ತಿವೆ’




‘12ನೇ ಶತಮಾನದ ಆರಂಭದಲ್ಲಿ ಕಾಳಮುಖರು, ಲಕುಲೀಶ ಪಾಶುಪತರು ಅರಮನೆಯ ರಾಜ ವ್ಯವಹಾರಗಳಲ್ಲೂ ಪ್ರಭಾವ ಬೀರುತ್ತಿದ್ದರು. ಅಂತಹ ಸಮಯದಲ್ಲೇ ಕಾಯಕ ಜೀವಿಗಳ ಚಳವಳಿ ಶುರುವಾಗಿತ್ತು. ಈ ಚಳವಳಿ ಜನ್ಮತಾಳಲು ಧಾರ್ಮಿಕ ಸಂಸ್ಥೆಗಳ ಹಸ್ತಕ್ಷೇಪ ಮುಖ್ಯ ಕಾರಣವಾಗಿತ್ತು’.

‘ಮಠಗಳು ಹಾಗೂ ದೇವಸ್ಥಾನಗಳು ಮಹಿಳೆಯರು ಹಾಗೂ ತಳ ಸಮುದಾಯದವರಿಗೆ ವಿದ್ಯಾಭ್ಯಾಸ ನಿರಾಕರಿಸುತ್ತಲೇ ಇವೆ. ಈಗಲೂ ಪ್ರಭಾವಿ ಧಾರ್ಮಿಕ ಕ್ಷೇತ್ರಗಳು ಶೈಕ್ಷಣಿಕ ಕ್ಷೇತ್ರದ ಮೇಲೆ ಹಿಡಿತ ಹೊಂದಿವೆ. ರಾಜಕೀಯದಲ್ಲಿ ಧಾರ್ಮಿಕ ಕ್ಷೇತ್ರಗಳ ಹಸ್ತಕ್ಷೇಪ ಒಪ್ಪತಕ್ಕದ್ದಲ್ಲ. ಮಾನವ ಕುಲ ಒಂದೇ ಎಂಬುದನ್ನು ನಾವು ಎತ್ತಿಹಿಡಿಯಬೇಕಿತ್ತು. ಆದರೆ ಹಾಗಾಗುತ್ತಿಲ್ಲ. ಈಗ ಪ್ರಭಾವಿ ಜಾತಿಗಳೇ ಮೀಸಲಾತಿ ಕೇಳುತ್ತಿವೆ. ಪ್ರಭಾವಿ ಧಾರ್ಮಿಕ ಕೇಂದ್ರಗಳ ಗುರುಗಳು ಮಾತ್ರ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿಕೊಂಡು ತಮಗೆ ಬೇಕಾದ ಸ್ಥಾನಮಾನ ಗಳಿಸಿಕೊಳ್ಳುತ್ತಿದ್ದಾರೆ’.

‘ಜನಪರ ಚಳವಳಿಗಳು ಈಗಲೂ ಜೀವಂತವಾಗಿವೆ. ಅಧಿಕಾರಿಗಳು ಹಾಗೂ ರಾಜಕಾರಣಿಗಳು ಒಂದಾಗಿ ಕೆಲ ಪ್ರಕರಣಗಳನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಸಿದ್ದಾರೆ. ದಲಿತ ಮಹಿಳೆಯರ ವಿಚಾರದಲ್ಲಿ ಇದು ಹೆಚ್ಚಾಗುತ್ತಿದೆ. ಜನಪರ ಚಳವಳಿಗಳ ಮೂಲಕ ಇವುಗಳನ್ನೆಲ್ಲಾ ಹೊರಗೆಡಹುವ ಕೆಲಸ ಮಾಡಲಾಗುತ್ತಿದೆ. ಕೋವಿಡ್ ಸಮಯದಲ್ಲಿ ಸಾಮಾಜಿಕ ಜಾಲತಾಣಗಳನ್ನೇ ವೇದಿಕೆ ಆಗಿಟ್ಟುಕೊಂಡು ಹೋರಾಟ ನಡೆದಿದೆ. ಸಾಮಾನ್ಯ ಸಂಸ್ಥೆಗಳಿಗಿರುವ ನಿಯಮಗಳನ್ನು ಪ್ರಭಾವಿ ಮಠಗಳಿಗೂ ಅನ್ವಯಿಸಿದರೆ ಅವುಗಳ ಪ್ರಭಾವ, ಪರಸ್ಪರ ಅವಲಂಬನೆ ಕಡಿಮೆಯಾಗುತ್ತವೆ’.

ಎಂ.ಎನ್.ಸುಮನಾ
ಹಿರಿಯ ವಕೀಲೆ, ಸಾಮಾಜಿಕ ಕಾರ್ಯಕರ್ತೆ

‘ರಾಜಕೀಯ ಹಸ್ತಕ್ಷೇಪ ಧರ್ಮಕೇಂದ್ರಕ್ಕೆ ಅವಮಾನ’



‘ಧರ್ಮ ಎಲ್ಲರ ಒಳಿತು ಬಯಸುವಂತಹದ್ದು. ಇಡೀ ಮನುಕುಲವನ್ನೇ ಒಳಗೊಳ್ಳುವುದು. ಅದಕ್ಕೆ ಸೀಮಿತ ಚೌಕಟ್ಟಿಲ್ಲ. ಧರ್ಮ ಮತ್ತು ರಾಜಕೀಯ ಪರಸ್ಪರ ವಿರೋಧಿಗಳಲ್ಲ. ಹಾಗಂತ ಧರ್ಮದ ಮೇಲೆ ರಾಜಕೀಯ ಸವಾರಿ ಮಾಡಬಾರದು. ರಾಜಕೀಯದಲ್ಲಿ ಧರ್ಮದ ಹಸ್ತಕ್ಷೇಪ ಸಲ್ಲದು. ರಾಜಕಾರಣಿಗಳು ದಾರಿ ತಪ್ಪಿದರೆ ಧರ್ಮ ಮಾರ್ಗದರ್ಶನ ನೀಡಬೇಕು’.

‘ಇತ್ತೀಚಿನ ದಿನಗಳಲ್ಲಿ ಧರ್ಮ ಕೇಂದ್ರಗಳು ರಾಜಕೀಯ ಕೇಂದ್ರಗಳಾಗಿ ಪರಿವರ್ತನೆಯಾಗುತ್ತಿರುವುದು ಕಂಡುಬರುತ್ತಿದೆ. ತಮ್ಮ ಜನಾಂಗಕ್ಕೆ ಇಂತಿಷ್ಟು ಮಂತ್ರಿ ಸ್ಥಾನ ಕೊಡಬೇಕೆಂದು ಒತ್ತಡ ಹೇರಲಾಗುತ್ತಿದೆ. ರಾಜಕೀಯದಲ್ಲಿ ಧರ್ಮ ಕೇಂದ್ರಗಳ ನೇರ ಹಸ್ತಕ್ಷೇಪಕ್ಕೆ ಇದೊಂದು ಉದಾಹರಣೆ. ಇದು ಧರ್ಮ ಕೇಂದ್ರಕ್ಕೆ ಅವಮಾನ ಮಾಡಿಕೊಂಡ ಹಾಗೆ’.

‘ಮಠಾಧೀಶರಾದವರು ಎಲ್ಲಾ ಧರ್ಮದವರನ್ನೂ ಸಮಾನವಾಗಿ ಕಾಣಬೇಕು. ಸ್ವಾಮೀಜಿಯ ಸ್ಥಾನವು ರಾಜಕೀಯ ಸ್ಥಾನಮಾನಕ್ಕಿಂತಲೂ ದೊಡ್ಡದು. ಅದನ್ನು ಎಲ್ಲರೂ ಅರಿತುಕೊಳ್ಳಬೇಕು. ಮಠಾಧೀಶರು ಚುನಾವಣೆಯಲ್ಲಿ ಸ್ಪರ್ಧಿಸಬಾರದೆಂಬ ಕಟ್ಟಳೆಗಳೇನಿಲ್ಲ. ಹಾಗೆ ಸ್ಪರ್ಧಿಸುವವರು ಮಠ ಹಾಗೂ ಕಾವಿಯನ್ನು ತ್ಯಜಿಸಬೇಕು. ಅದನ್ನು ಕೇಳುವಂತಹ ಭಕ್ತ ವರ್ಗವೂ ತಯಾರಾಗಬೇಕು. ಧರ್ಮ ಕ್ಷೇತ್ರವನ್ನು ದುರುಪಯೋಗಪಡಿಸಿಕೊಂಡು ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದರೆ ಅದು ಆತ್ಮ ವಂಚನೆಗೆ ಸಮ. ಸ್ವಾಮಿಗಳಾದವರು ರಾಜಕಾರಣ ಮಾಡುವ ಅಗತ್ಯವೇ ಇಲ್ಲ. ನಾವು ಜಾಗೃತಿ ಮೂಡಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಮುನ್ನಡೆಯಬೇಕು’.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ
ಸಾಣೇಹಳ್ಳಿ ಮಠ, ಹೊಸದುರ್ಗ

ಪೂರ್ಣ ಸಂವಾದ ವೀಕ್ಷಿಸಲು: https://www.facebook.com/prajavani.net/videos/196728679042400/

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	93.84	2,734	6,372
ಹಾರಂಗಿ	2,859	2,840.50	579	80
ಕಬಿನಿ	2,284	2,275.65	1,629	700
ಹೇಮಾವತಿ	2,922	2,895.36	1,745	200
ಲಿಂಗನಮಕ್ಕಿ	1,819	1,785.50	3,364	-
ಸೂಪಾ (ಮೀ)	564	539.16	3,276	-
ಮಾಣಿ	594.36	573.72	156	-
ತುಂಗಭದ್ರಾ	1,633	1,608.34	6,124	260
ಮಲಪ್ರಭಾ	2079.5	2,062.50	1,201	194
ಘಟಪ್ರಭಾ	2175	2,132.75	4,024	122
ಭದ್ರಾ	186	154.3	2,547	82
ಆಲಮಟ್ಟಿ (ಮೀ)	519.6	517.43	26,608	20,451
ನಾರಾಯಣಪುರ (ಮೀ)	492.25	489.08	25,000	31,720

*ನೆಲಮಟ್ಟದಿಂದ

ನಾಲ್ವರು ಮಕ್ಕಳೊಂದಿಗೆ ದಂಪತಿ ಆತ್ಮಹತ್ಯೆ

ಯಾದಗಿರಿ: ಶಹಾಪುರ ತಾಲ್ಲೂಕಿನ ದೋರನಹಳ್ಳಿಯಲ್ಲಿ ಸೋಮವಾರ ಪತಿ–ಪತ್ನಿ ತಮ್ಮ ನಾಲ್ವರು ಅಪ್ರಾಪ್ತ ಮಕ್ಕಳನ್ನು ಬೃಹತ್ ಕೃಷಿಹೊಂಡಕ್ಕೆ ತಳ್ಳಿ ತಾವೂ ಅದರಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಭೀಮರಾಯ ಸುರಪುರ (45), ಶಾಂತಮ್ಮ ಸುರಪುರ (36), ಸುಮಿತ್ರಾ (12), ಶ್ರೀದೇವಿ (13), ಶಿವರಾಜ (9), ಲಕ್ಷ್ಮಿ (4) ಮೃತರು.

‘ಭೀಮರಾಯ ಅವರು ತೋಟಗಾರಿಕೆ ಬೆಳೆಗೆ ₹20 ಲಕ್ಷ ಕೈ ಸಾಲ ಪಡೆದಿದ್ದರು’ ಎಂದು ಪೊಲೀಸ್ ವರಿಷ್ಠಾಧಿಕಾರಿ ಡಾ.ಸಿ.ಬಿ.ವೇದಮೂರ್ತಿ ತಿಳಿಸಿದ್ದಾರೆ.

ನಾಲ್ವರು ಸಹೋದರರು ನೀರುಪಾಲು

ಅಥಣಿ (ಬೆಳಗಾವಿ): ನಾಲ್ವರು ಸಹೋದರರು ತಾಲ್ಲೂಕಿನ ಹಲ್ಯಾಳ ಗ್ರಾಮದ ಬಳಿಯ ಕೃಷ್ಣಾ ನದಿಯಲ್ಲಿ ಸೋಮವಾರ ಕೊಚ್ಚಿ ಹೋಗಿದ್ದಾರೆ.

ಹಲ್ಯಾಳದ ಪರಶುರಾಮ ಬನಸೋಡೆ (36), ಸದಾಶಿವ ಬನಸೋಡೆ (24), ಧರೆಪ್ಪ ಬನಸೋಡೆ (22), ಶಂಕರ ಬನಸೋಡೆ (20) ಎಂದು ಗುರುತಿಸಲಾಗಿದೆ. ಗೃಹಬಳಕೆ ವಸ್ತುಗಳನ್ನು ತೊಳೆಯುವುದಕ್ಕೆ ನದಿಗೆ ಹೋಗಿದ್ದಾಗ ಅವಘಡ ಸಂಭವಿಸಿದೆ ಎಂದು ತಿಳಿದುಬಂದಿದೆ.

ಕೈ ಪಾಳಯದಲ್ಲಿ ಮತ್ತೆ ‘ಪರಿಶಿಷ್ಟ’ ಸದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಪಾಳಯದಲ್ಲಿ ‘ಭಾವಿ ಮುಖ್ಯಮಂತ್ರಿ’ ವಿಚಾರದಲ್ಲಿ ಆರಂಭಗೊಂಡ ‘ಬಣ ರಾಜಕೀಯ’, ಇದೀಗ ‘ಪರಿಶಿಷ್ಟ ಸಮುದಾಯಕ್ಕೆ ಮುಖ್ಯಮಂತ್ರಿ ಗಾದಿ’ ವಿಚಾರವನ್ನು ಮುನ್ನೆಲೆಗೆ ತಂದಿದೆ.

ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ ಮನೆಯಲ್ಲಿ ಶಾಸಕ ಜಿ.ಪ-ರಮೇಶ್ವರ ಮತ್ತು ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಚರ್ಚೆ ನಡೆಸುತ್ತಿದ್ದಂತೆ, ಮೂಲ ಕಾಂಗ್ರೆಸ್ ನಾಯಕರು ‘ಪರಿಶಿಷ್ಟ ಸಮುದಾಯಕ್ಕೆ ಸಿ.ಎಂ’ ಟ್ರಂಪ್ ಕಾರ್ಡ್ ಬಳಕೆಗೆ ಮುಂದಾಗಿದ್ದಾರೆ ಎನ್ನಲಾಗಿತ್ತು. ಆ ಬೆನ್ನಲ್ಲೆ, ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಮಾಜಿ ಸಚಿವ ಎಚ್.ಸಿ.ಮಹದೇವಪ್ಪ ಅವರ ಮನೆಗೆ ತೆರಳಿ ಚರ್ಚಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

‘ಸಿದ್ದರಾಮಯ್ಯ ಭಾನುವಾರ ಊಟಕ್ಕೆ ಬಂದಿದ್ದರು. ಕೋವಿಡ್ ಸೇರಿ ಕೆಲವು ವಿಚಾರಗಳ ಬಗ್ಗೆ ಚರ್ಚಿಸಿದ್ದೇವೆ. ಈ ಭೇಟಿಗೆ ಬೇರೆ ಅರ್ಥ ಕಲ್ಪಿಸುವ ಅಗತ್ಯ ಇಲ್ಲ’ ಎಂದು ಮಹದೇವಪ್ಪ ಹೇಳಿದ್ದಾರೆ. ಆದರೆ ಈ ನಾಯಕರು, ರಾಜ್ಯದ ವಿವಿಧೆಡೆ ಪರಿಶಿಷ್ಟರ ಸಮಾವೇಶ ಆಯೋಜಿಸುವ ಬಗ್ಗೆ ಚರ್ಚಿಸಿದ್ದಾರೆ ಎನ್ನಲಾಗಿದೆ.

ಆದರೆ, ಇದನ್ನು ಅಲ್ಲಗಳೆದಿರುವ ಮಹದೇವಪ್ಪ, ‘ಅಹಿಂದ, ಪರಿಶಿಷ್ಟರ ಸಮಾವೇಶ ಮಾಡಬೇಕು ಎಂದು ಚರ್ಚೆ ಆಗಿಲ್ಲ. ಪಕ್ಷದಲ್ಲಿ ಈಗ ಸಿ.ಎಂ ಸ್ಥಾನದ ಚರ್ಚೆ ಹೇಗೆ ಹುಟ್ಟಿಕೊಂಡಿತು ಎನ್ನುವುದೇ ಆಶ್ಚರ್ಯ ಸಂಗತಿ’ ಎಂದರು.

‘ಯಾರಿಗಾದರೂ ಹೇಳಿ, ಕೇಳಿ ಮುಖ್ಯಮಂತ್ರಿ ಆಗಬೇಕು ಅನ್ನುವ ನಾಯಕ ಸಿದ್ದರಾಮಯ್ಯ ಅಲ್ಲ. ಸಿ.ಎಂ ಯಾರಾಗಬೇಕು ಎನ್ನುವುದನ್ನು ಹೈಕಮಾಂಡ್ ನಿರ್ಧರಿಸಲಿದೆ’ ಎಂದೂ ಪ್ರತಿಕ್ರಿಯಿಸಿದ್ದಾರೆ.

ಚರ್ಚೆ ಅಪ್ರಸ್ತುತ: ‘ದಲಿತರನ್ನು ಸಿ.ಎಂ ಮಾಡಲು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ. ಅಷ್ಟಕ್ಕೂ ಈಗ ಆ ಚರ್ಚೆ ಅಪ್ರಸ್ತುತ’ ಎಂದು ರಾಜ್ಯಸಭೆ ಕಾಂಗ್ರೆಸ್ ಸದಸ್ಯ ಎಲ್.ಹನುಮಂತಯ್ಯ ಹೇಳಿದರು.

‘ಕಾಂಗ್ರೆಸ್ ಪಕ್ಷ ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಲಿದೆ. ಪ್ರಸ್ತುತ ದಲಿತ ಮುಖ್ಯಮಂತ್ರಿ ವಿಚಾರ ಪ್ರಸ್ತಾಪಕ್ಕೆ ಯಾವುದೇ ವಿಶೇಷತೆ ಇಲ್ಲ’ ಎಂದು ಹೇಳಿದರು.

‘ಹೈಕಮಾಂಡ್ ನೋಡಿಕೊಳ್ಳಲಿದೆ’



‘ಪಕ್ಷದಲ್ಲಿನ ಮುಂದಿನ ಮುಖ್ಯಮಂತ್ರಿ ಚರ್ಚೆಗೆ ಶೀಘ್ರ ತೆರೆ ಬೀಳಲಿದೆ. ಹೈಕಮಾಂಡ್ ಎಲ್ಲವನ್ನು ನೋಡಿಕೊಳ್ಳಲಿದೆ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದ್ದಾರೆ.

‘ಈ ಚರ್ಚೆಗೆ ಅಂತ್ಯ ಹಾಡಲೇಬೇಕಿದೆ. ಚುನಾವಣೆ ಯಾವಾಗ ಎಂದೇ ಗೊತ್ತಿಲ್ಲ. ದಲಿತ, ಲಿಂಗಾಯತ, ಒಕ್ಕಲಿಗ, ಒಬಿಸಿ ಎಂಬುದು ಚುನಾವಣೆ ನಂತರ ಚರ್ಚೆಗೆ ಬರಬೇಕು’ ಎಂದರು. ‘ಈ ಬೆಳವಣಿಗೆಯಿಂದ ಪಕ್ಷಕ್ಕೆ ಯಾವುದೇ ರೀತಿಯ ಹಾನಿ ಆಗಲ್ಲ. ಅಂಥ ಬೆಳವಣಿಗೆಗಳು ಪಕ್ಷದಲ್ಲಿ ನಡೆಯಲು ಸಾಧ್ಯವೂ ಇಲ್ಲ. ಆದರೆ, ಎಲ್ಲದಕ್ಕೂ ಪೂರ್ಣ ವಿರಾಮ ಹಾಕಲೇಬೇಕು’ ಎಂದರು.

ನೀತಿ ಆಯೋಗದ ಅಧಿಕಾರಿಗಳ ಜತೆ ಸಮಾಲೋಚನೆ

ಬೆಂಗಳೂರು: ಬಡತನ, ಹಸಿವು, ಅಪೌಷ್ಟಿಕತೆ, ರಕ್ತಹೀನತೆ ಸೇರಿದಂತೆ ವಿವಿಧ ಅಂಶಗಳ ಆಧಾರದಲ್ಲಿ ಸಿದ್ಧಪಡಿಸಿರುವ ಸುಸ್ಥಿರ ಅಭಿವೃದ್ಧಿ ಗುರಿ ದರದ ಸೂಚ್ಯಂಕ ವರದಿ ಕುರಿತು ನೀತಿ ಆಯೋಗದ ಪ್ರತಿನಿಧಿಗಳು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳೊಂದಿಗೆ ಸೋಮವಾರದಿಂದ ಸಮಾಲೋಚನೆ ಆರಂಭಿಸಿದ್ದಾರೆ.

ಇತ್ತೀಚೆಗೆ ನೀತಿ ಆಯೋಗವು ಸಲ್ಲಿಸಿರುವ ವರದಿಯ ಕುರಿತು ಎರಡು ದಿನಗಳು ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳ ಮುಖ್ಯಸ್ಥರ ಜತೆ ಸಮಾಲೋಚನೆ ನಡೆಯಲಿದೆ. ನೀತಿ ಆಯೋಗದ ಸಮಾಲೋಚಕಿ ಸಂಯುಕ್ತಾ ಸಮದ್ದಾರ್ ನೇತೃತ್ವದಲ್ಲಿ ಆಯೋಗದ ಅಧಿಕಾರಿಗಳು, ರಾಜ್ಯ ಸರ್ಕಾರದ ಅಧಿಕಾರಿಗಳ ಜತೆ ಮಾಹಿತಿ ಹಂಚಿಕೊಳ್ಳಲಿದ್ದಾರೆ.

ಸೋಮವಾರದ ಚರ್ಚೆಯಲ್ಲಿ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ವಂದಿತಾ ಶರ್ಮ ಮತ್ತು ಶಾಲಿನಿ ರಜನೀಶ್ ಸೇರಿ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ವಿವಿಧ ಕ್ಷೇತ್ರಗಳಲ್ಲಿ ರಾಜ್ಯದ ಸ್ಥಾನ, ಸುಧಾರಣೆಗೆ ಇರುವ ಅವಕಾಶಗಳು, ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ನೀತಿ ಆಯೋಗದ ಅಧಿಕಾರಿಗಳು ಮಾಹಿತಿ ನೀಡುವರು.


‘ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಕ್ರಮ’

ಉಡುಪಿ: ಕೋವಿಡ್ ಮೂರನೇ ಅಲೆಯಿಂದ ಮಕ್ಕಳಿಗೆ ತೊಂದರೆಯಾಗಬಹುದು ಎಂಬ ಹಿನ್ನೆಲೆಯಲ್ಲಿ ಮಕ್ಕಳ ಅಪೌಷ್ಟಿಕತೆ ನೀಗಿಸಿ, ಅವರಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಆರೋಗ್ಯ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಾರ್ಕಳದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡುತ್ತಾ, ‘ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಒಳಪಡುವ ಎಲ್ಲ ಹಳ್ಳಿಗಳಿಗೆ ವೈದ್ಯರು ಹಾಗೂ ಅಧಿಕಾರಿಗಳ ತಂಡ ಭೇಟಿ ನೀಡಿ, ಆರೋಗ್ಯ ತಪಾಸಣಾ ಶಿಬಿರ ನಡೆಸಲಿದೆ’ ಎಂದರು.

ಸರಳ ಸಹಜ ಸಮರ್ಥ ಸುರಕ್ಷಿತ ಉಸಿರಾಟ

ಎಸ್. ಎನ್. ಓಂಕಾರ್



ಪ್ರತಿಯೊಬ್ಬರೂ ಸುಲಭವಾಗಿ ಅಭ್ಯಾಸ ಮಾಡಬಹುದಾದಂತಹ ಸುರಕ್ಷಿತ ಹಾಗೂ ಸಮರ್ಥ ಉಸಿರಾಟದ ಕ್ರಮವೇ ವಪೆ ಮತ್ತು ಉದರ ಆಧಾರಿತ ಉಸಿರಾಟ. ವಿಶೇಷವಾಗಿ ಪ್ರಚಲಿತ ಸನ್ನಿವೇಶದಲ್ಲಿ ಈ ಕ್ರಮವು ಅತ್ಯಂತ ಅನುಕರಣೀಯ.

ಉದರ ಮತ್ತು ಎದೆಯ ಹಂದರಗಳನ್ನು ಬೇರ್ಪಡಿಸುವ ವಿಶಾಲವಾದ ಸ್ನಾಯುವೇ ವಪೆ. ವಪೆಯು ತನ್ನ ವಿಶ್ರಾಂತ ಸ್ಥಿತಿಯಲ್ಲಿ ಎದೆಯ ಗೂಡಿನೊಳಗೆ ಗೋಳಾಕಾರವಾಗಿ ಇರುತ್ತದೆ. ಮೆದುಳಿನಿಂದ ಬರುವ ಸಂಜ್ಞೆಯನ್ನು ಅನುಸರಿಸಿ ಸಂಕುಚನಗೊಳ್ಳುತ್ತಾ ಉದರದೆಡೆಗೆ ಚಲಿಸುತ್ತದೆ. ಇದರಿಂದ ಶ್ವಾಸಕೋಶದೊಳಗಣ ವಾಯುವಿನ ಒತ್ತಡವು ಹೊರಗಿನ ಒತ್ತಡಕ್ಕಿಂತ ತುಸು ಕಡಿಮೆಯಾಗಿ, ವಾಯುವು ಶ್ವಾಸಕೋಶದೊಳಕ್ಕೆ ಹೋಗಿ ಹಿಗ್ಗಲ್ಪಡುತ್ತದೆ. ಇದರೊಂದಿಗೆ, ವಪೆಯ ಕೆಳಮುಖ ಚಲನೆಯಿಂದಾಗಿ ಉದರದ ಅಂಗಾಂಗಗಳು ಒತ್ತಲ್ಪಟ್ಟು ಉದರದ ಹಂದರವು ಸುತ್ತಲೂ ಹಿಗ್ಗುತ್ತದೆ. ಇದೇ ಪೂರಕ (inhalation) ಪ್ರಕ್ರಿಯೆ. ನಂತರ ವಪೆಯು ವಿರಮಿಸುತ್ತಾ ಎದೆಯ ಗೂಡಿನೊಳಗೆ ಚಲಿಸುತ್ತಾ ಶ್ವಾಸಕೋಶಗಳನ್ನು ಒತ್ತುತ್ತದೆ. ಆಗ ವಾಯುವು ಹೊರಕ್ಕೆ ಬರುತ್ತದೆ. ಉದರದ ಭಾಗವು ಸಂಕುಚನಗೊಳ್ಳುತ್ತದೆ. ಇದೇ ರೇಚಕ (exhalation) ಪ್ರಕ್ರಿಯೆ.

> ಕೋವಿಡ್ ಹಿನ್ನೆಲೆಯಲ್ಲಿ ಉಸಿರಾಟದ ಬಗ್ಗೆ ಹೆಚ್ಚಿನ ಎಚ್ಚರಿಕೆ ಮೂಡುತ್ತಿದೆ. ಉಸಿರಾಟದ ಸರಳ ವ್ಯಾಯಾಮ ಹಾಗೂ ಅದರ ಉಪಯೋಗಗಳ ಬಗ್ಗೆ ಮಾಹಿತಿ ಇಲ್ಲಿದೆ.

ಅಭ್ಯಾಸಕ್ರಮ



1. ದಿಂಬು ಅಥವಾ ಕುರ್ಚಿಯ ಮೇಲೆ ನೇರವಾಗಿ ಕುಳಿತುಕೊಳ್ಳಿ; ಹೆಬ್ಬೆರಳು ಹಾಗೂ ತೋರ್ಬೆರಳು ಪರಸ್ಪರ ಸ್ಪರ್ಶದಲ್ಲಿದ್ದು ಹಸ್ತಗಳನ್ನು ಮೇಲ್ಮುಖವಾಗಿ ಹಿಡಿದುಕೊಳ್ಳಿ.
2. ಕಣ್ಣುಗಳನ್ನು ಮೃದುವಾಗಿ ಮುಚ್ಚಿ. ನಾಸಿಕದ್ವಾರ ಹಾಗೂ ನಾಸಿಕ ಒಳಾಂಗಣಗಳನ್ನು ಗಮನಿಸಿ.
3. ನಿಮ್ಮ ಅಸ್ಥಿಸ್ನಾಯು ವ್ಯವಸ್ಥೆಗಳ ಅರಿವು ನಿಮಗಿರಲಿ.
4. ನಿಧಾನವಾಗಿ ಉಸಿರನ್ನು ಒಳಕ್ಕೆ ತೆಗೆದುಕೊಳ್ಳಿ ಹಾಗೂ ನಿಧಾನವಾಗಿ ಉಸಿರನ್ನು ಹೊರಕ್ಕೆ ಬಿಡಿ.
5. ಉಸಿರನ್ನು ಒಳಕ್ಕೆ ತೆಗೆದುಕೊಳ್ಳುವಾಗ ಉದರದ ತಳ ಭಾಗ, ಮಧ್ಯ ಭಾಗ ಹಾಗೂ ಮೇಲ್ಭಾಗವು ಸಂಪೂರ್ಣವಾಗಿ ಹಿಗ್ಗಬೇಕು.
6. ಉಸಿರನ್ನು ಬಿಡುವಾಗ ಉದರದ ಮೇಲ್ಭಾಗ, ಮಧ್ಯ ಭಾಗ ಹಾಗೂ ತಳ ಭಾಗ ಸಂಪೂರ್ಣವಾಗಿ ಸಂಕುಚನಗೊಳ್ಳಬೇಕು.
7. ಉಸಿರನ್ನು ತೆಗೆದುಕೊಳ್ಳುವ ಅವಧಿ 4 ಸೆಕೆಂಡುಗಳಷ್ಟಿದ್ದು, ಉಸಿರನ್ನು ಬಿಡುವ ಅವಧಿ 6 ಸೆಕೆಂಡುಗಳ ಕಾಲ ಇರಬೇಕು.
8. ಎದೆಯ ಭಾಗವು ಸಾಧ್ಯವಾದಷ್ಟೂ ನಿಶ್ಚಲವಾಗಿರಬೇಕು.
9. ಈ ಕ್ರಮವನ್ನು ನಿಮಿಷಕ್ಕೆ 6 ಆವರ್ತಗಳಂತೆ, 8 ನಿಮಿಷಗಳಷ್ಟು ಕಾಲ ಮಾಡತಕ್ಕದ್ದು.
10. ಉಸಿರಿನ ಹರಿವು, ವಪೆಯ ಚಲನೆ ಹಾಗೂ ಉದರದ ಹಂದರದ ಚಲನೆಗಳನ್ನು ತಾದಾತ್ಮ್ಯದಿಂದ ಗಮನಿಸಬೇಕು. ಮನಸ್ಸಿನಲ್ಲಿ ಅನ್ಯ ಆಲೋಚನೆಗಳಿಗೆ ಆಸ್ಪದ ಕೊಡಬಾರದು.

ವಪೆ ಮತ್ತು ಉದರ ಆಧಾರಿತ ಉಸಿರಾಟದ ಪ್ರಮುಖ ವಿಶೇಷತೆಗಳೆಂದರೆ:

1. **ಅತ್ಯಂತ ಸ್ವಾಭಾವಿಕ ಉಸಿರಾಟ:** ಈ ಉಸಿರಾಟವನ್ನು ನಾವು ಎಳೆಯ ಮಕ್ಕಳಲ್ಲಿ ಕಾಣಬಹುದು. ಒತ್ತಡಕ್ಕೆ ಒಳಗಾದವರಲ್ಲಿ ಉದರದ ಭಾಗ ಬಿಗಿಯಾಗಿ, ಸ್ವಾಭಾವಿಕ ಉಸಿರಾಟ ಸಾಧ್ಯವಾಗುವುದಿಲ್ಲ. ಇದರ ಪರಿಣಾಮವಾಗಿ ಅನೇಕ ಮನೋದೈಹಿಕ ಸಮಸ್ಯೆಗಳು ಉಂಟಾಗಬಹುದು.
2. **ಕನಿಷ್ಠ ಶಕ್ತಿಯ ಉಸಿರಾಟ:** ಈ ರೀತಿಯ ಉಸಿರಾಟದಲ್ಲಿ ಅತ್ಯಂತ ಕನಿಷ್ಠ ಪ್ರಮಾಣದ ಶಕ್ತಿ ಸಾಕಾಗುತ್ತದೆ. ಹಾಗಾಗಿ ಇದು ಅತ್ಯಂತ ಸಮರ್ಥ ಉಸಿರಾಟವಾಗಿದೆ. ಇದರಲ್ಲಿ ಶಕ್ತಿಯ ಅಪವ್ಯಯವಾಗದೆ, ದೈಹಿಕ ಸಾಮರ್ಥ್ಯವು ಹಿಗ್ಗುತ್ತದೆ.
3. **ಯಥೇಚ್ಛ ಆಮ್ಲಜನಕ ಸರಬರಾಜು:** ಅಭ್ಯಾಸ ಮುಖೇನ ಈ ಉಸಿರಾಟ ಕ್ರಮವು ನಮ್ಮ ಸಹಜ ಕ್ರಮವಾದಾಗ ಮಾಮೂಲಿಗಿಂತ ಹೆಚ್ಚು ಆಮ್ಲಜನಕವು ಶ್ವಾಸಕೋಶಗಳ ಮೂಲಕ ರಕ್ತವನ್ನು ಸೇರುತ್ತದೆ. ತನ್ಮೂಲಕ ನಂಜಿನ ಅಂಶ ಅಳಿದು ಅಂಗಾಂಗಗಳ ಆರೋಗ್ಯ ವೃದ್ಧಿಸುತ್ತದೆ.
4. **ಆಂತರಿಕ ಅಂಗಮರ್ದನ:**
   I. ವಪೆಯ ಚಲನೆಯಿಂದಾಗಿ ಉದರದ ಮತ್ತು ವಸ್ಥಿಕುಹರದ ಅಂಗಾಂಗಗಳು (ಲಿವರ್, ಸ್ಪ್ಲೀನ್, ಪ್ಯಾಂಕ್ರಿಯಾಸ್, ಕಿಡ್ನಿ, ಮೂತ್ರಾಂಗ, ಜನನೇಂದ್ರಿಯಗಳು ಇತ್ಯಾದಿ) ಲಯಬದ್ಧ ಆಂತರಿಕ ಅಂಗಮರ್ದನಕ್ಕೆ ಒಳಗಾಗುತ್ತವೆ. ದ್ರವಯುಕ್ತವಾದ ಈ ಅಂಗಾಂಗಗಳಲ್ಲಿ ಉತ್ತಮ ರಕ್ತಪರಿಚಲನೆ ಉಂಟಾಗಿ ಅವುಗಳ ಕಾರ್ಯಕ್ಷಮತೆ ಹೆಚ್ಚುತ್ತದೆ.
   II. ಹೃದಯ ಮತ್ತು ಶ್ವಾಸಕೋಶಗಳೂ ಆರೋಗ್ಯಕರ ಅಂಗಮರ್ದನದ ಆವರ್ತಗಳನ್ನು ಪಡೆದು ಉತ್ತಮವಾಗುತ್ತವೆ.
   III. ಬೆನ್ನುಗಂಬದ ಬದಿಯ ಸ್ನಾಯುಗಳ ಕಾರ್ಯಕ್ಷಮತೆಯೂ ಹೆಚ್ಚುತ್ತದೆ.
   IV. ಬೆನ್ನುಗಂಬದ ಆಸುಪಾಸಿನಲ್ಲಿರುವ ಚಕ್ರಸ್ಥಾನಗಳು (ನರಜಾಲಗಳ ತಾಣ nerve plexes) ಅಂಗಮರ್ದನ ಪ್ರಕ್ರಿಯೆಯಿಂದಾಗಿ ಸಚೇತನಗೊಳ್ಳುತ್ತವೆ. ಈ ಚಕ್ರಸ್ಥಾನಗಳು ಒಳಸುರಿಕೆ ಗ್ರಂಥಿಗಳ ಮೇಲೆ ಉತ್ತಮ ಪ್ರಭಾವವನ್ನು ಬೀರಿ ಮನೋದೈಹಿಕ ಕಾರ್ಯಕ್ಷಮತೆಯನ್ನು ವೃದ್ಧಿಸುತ್ತದೆ.
5. ಈ ಉಸಿರಾಟ ಕ್ರಮದಲ್ಲಿ ಅನುದ್ವೇಗಕರ ನರಮಂಡಲ ವ್ಯವಸ್ಥೆಯು ಉದ್ವೇಗಕರ ನರಮಂಡಲ ವ್ಯವಸ್ಥೆಗಿಂತ ಹೆಚ್ಚಾಗಿ ಉತ್ತೇಜಿತಗೊಳ್ಳುತ್ತದೆ. ಈ ಕಾರಣದಿಂದಾಗಿ ಭಾವನಾತ್ಮಕ ಸ್ಥಿರತೆ, ಸಂಯಮ ಹಾಗೂ ಸಮಾಧಾನ ಲಭ್ಯವಾಗುತ್ತದೆ. ತನ್ಮೂಲಕ ಖಿನ್ನತೆ, ಆತಂಕ ಹಾಗೂ ಅನೇಕ ಮನೋದೈಹಿಕ ಸಮಸ್ಯೆಗಳು ದೂರವಾಗುತ್ತವೆ.
6. ಉದರದ ಕುಹರದ ಹಿಂಬದಿ ಸೊಂಟದ ದಡುಗಟ್ಟಿನಿಂದ (Lumbar Fascia) ಅವೃತವಾಗಿ ರಕ್ಷಿಸಲ್ಪಟ್ಟಿದೆ. ಈ ಸೊಂಟದ ದಡುಗಟ್ಟು ಬೆನ್ನುಗಂಬಕ್ಕೆ ರಕ್ಷಣೆ ನೀಡುವುದರಿಂದ ಇದನ್ನು ಪ್ರಕೃತಿಯ ಸೊಂಟದ ರಕ್ಷಾಕವಚ (Nature's Back Belt) ಎಂದೇ ಕರೆಯುತ್ತಾರೆ. ವಪೆ ಮತ್ತು ಉದರ ಆಧಾರಿತ ಉಸಿರಾಟದಲ್ಲಿ ಈ ದಡುಗಟ್ಟು ಸಚೇತನಗೊಂಡು ಬೆನ್ನುಗಂಬಕ್ಕೂ ಉಪಯುಕ್ತ ಸ್ಥಿರತೆ ದೊರೆಯುತ್ತದೆ.
7. ಕೆಳ ಅವಯವಗಳಿಂದ ಹೃದಯಕ್ಕೆ ಅಶುದ್ಧ ರಕ್ತವನ್ನು ಕೊಂಡೊಯ್ಯುವ ಕೆಳಗಣ ಮಹಾಸಿರೆಯ (Interior Vena Cava) ಸಂಕುಚನ ಪ್ರಕ್ರಿಯೆಯು ಉತ್ತಮಗೊಳ್ಳುತ್ತದೆ.
8. ಹೃದಯ ಬಡಿತದ ಆವರ್ತದ ಅವಧಿಯು ಬಡಿತದಿಂದ ಬಡಿತಕ್ಕೆ ಸ್ವಲ್ಪ ವ್ಯತ್ಯಾಸವಿರುವುದು ಹೃದಯದ ಉತ್ತಮ ಆರೋಗ್ಯದ ಲಕ್ಷಣವಾಗಿರುತ್ತದೆ. ಇದಕ್ಕೆ ಹೃದಯದ ಸಮನ್ವಯ-ಬಡಿತ (Heart Rate Variability – HRV) ಎನ್ನುತ್ತಾರೆ. ನಿಮಿಷಕ್ಕೆ 6 ಬಾರಿ ಉಸಿರಾಟದ ಅಭ್ಯಾಸವು ಹೃದಯ ಸಮನ್ವಯ-ಬಡಿತವನ್ನು ಹೆಚ್ಚಿಸಿ ಹೃದಯದ ಆರೋಗ್ಯಕ್ಕೆ ಪೂರಕವಾಗಿರುತ್ತದೆ.

ತಜ್ಞರ ಮಾರ್ಗದರ್ಶನದಲ್ಲಿ ಅಭ್ಯಾಸಕ್ರಮವನ್ನು ರೂಢಿಸಿಕೊಳ್ಳುವುದು ಒಳಿತು.

(ಲೇಖಕರು ಯೋಗಗುರು)

ರೋಗನಿರೋಧಕ ಶಕ್ತಿ ಎಂದರೆ...



ಡಾ. ವಿನಯ ಶ್ರೀನಿವಾಸ್

ಇತ್ತೀಚಿನ ದಿನಗಳಲ್ಲಿ ಕೊರೊನಾ ಜೊತೆಯಲ್ಲಿಯೇ ಹೆಚ್ಚು ಬಳಕೆಯಾದ ಮತ್ತೊಂದು ಪದ 'ರೋಗನಿರೋಧಕ ಶಕ್ತಿ' ಅಥವಾ 'ಇಮ್ಯುನಿಟಿ'. ಈ ಶಕ್ತಿಯ ವರ್ಧನೆಗೆ ಜನರು ಇನ್ನಿಲ್ಲದ ವಿಧಾನಗಳಿಗೆ ಮೊರೆಹೋದರು.

ಏನಿದು ರೋಗ ನಿರೋಧಕ ಶಕ್ತಿ?

ಪ್ರತಿಯೊಂದು ಜೀವಿಯೂ ತನ್ನನ್ನು ಮುತ್ತಿಗೆ ಹಾಕಲು ಬರುವ ರೋಗಾಣುಗಳ ವಿರುದ್ಧ ನಿರ್ದಿಷ್ಟ ಪ್ರತಿರೋಧತೆಯನ್ನು ತೋರಲು ಒಂದು ವ್ಯವಸ್ಥೆಯನ್ನು ಹೊಂದಿರುತ್ತದೆ. ಜೀವಿಯೊಂದರ ರೋಗನಿರೋಧಕ ವ್ಯವಸ್ಥೆಯು ಮುಖ್ಯವಾಗಿ ಎರಡು ಬಗೆಯದ್ದಾಗಿರುತ್ತದೆ. ಮೊದಲನೆಯದು ದೇಹ ಪ್ರಕೃತಿಯಿಂದ ಬಂದ ಸ್ವಾಭಾವಿಕ ರೋಗನಿರೋಧಕ ಶಕ್ತಿಯಾದರೆ ಮತ್ತೊಂದು ಹೊರಗಿನ ಅಂಶಗಳಿಂದ ಪ್ರಚೋದಿತವಾದ ಕೃತಕ ರೋಗನಿರೋಧಕ ಶಕ್ತಿ. ಸ್ವಾಭಾವಿಕ ರೋಗಪ್ರತಿರೋಧಕ ಶಕ್ತಿಯನ್ನು ನಿರ್ಧರಿಸುವ ಮುಖ್ಯ ಅಂಶಗಳು:



- **ಅನುವಂಶಿಕ ಧಾತುಗಳು (ಜೆನೆಟಿಕ್):** ಅನುವಂಶಿಕ ಧಾತುಗಳು ವ್ಯವಸ್ಥೆಯ ಸದೃಢತೆಯಲ್ಲಿ ಮುಖ್ಯಪಾತ್ರ ವಹಿಸುವುದರಿಂದಲೇ ಪ್ರತಿರೋಧಕಶಕ್ತಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ.
- **ವಯಸ್ಸು:** ಹತ್ತು ವರ್ಷದೊಳಗಿನ ಮಕ್ಕಳಲ್ಲಿ ರೋಗನಿರೋಧಕ ವ್ಯವಸ್ಥೆಯು ಇನ್ನೂ ಪೂರ್ಣ ಪ್ರಮಾಣದಲ್ಲಿ ಪಕ್ವವಾಗಿರುವುದಿಲ್ಲ. ಅಂತೆಯೇ ಅರವತ್ತು ವಯಸ್ಸು ದಾಟಿದವರಲ್ಲಿ ರೋಗನಿರೋಧಕ ಶಕ್ತಿ ಕ್ಷೀಣಿಸುತ್ತಾ ಹೋಗುವುದು ಸಹಜ. ಹಾಗಾಗಿ ಮಕ್ಕಳು ಮತ್ತು ವಯೋವೃದ್ಧರೆಡೆಗೆ ಹೆಚ್ಚಿನ ಕಾಳಜಿ ಅಗತ್ಯ.
- **ಶರೀರದಲ್ಲಿ ಸ್ರವಿಸುವ ರಸದೂತಗಳು:** ಶರೀರದ ರಸದೂತಗಳು ಏರುಪೇರಾದಾಗ ವ್ಯಕ್ತಿಯ ಪ್ರತಿರೋಧಕ ಶಕ್ತಿಯೂ ವ್ಯತ್ಯಯವಾಗುತ್ತದೆ. ಉದಾಹರಣೆಗೆ ಇನ್‌ಸುಲಿನ್ ವ್ಯತ್ಯಾಸದಿಂದ ಉಂಟಾಗುವ ಮಧುಮೇಹದಿಂದ ಬಳಲುವವರು ಬಹಳ ಬೇಗನೇ ಸೋಂಕಿಗೆ ತುತ್ತಾಗುತ್ತಾರೆ. ಅವರ ರಕ್ತದಲ್ಲಿನ ಹೆಚ್ಚಾದ ಸಕ್ಕರೆ ಅಂಶವು ರೋಗಾಣುಗಳ ಬೆಳವಣಿಗೆಗೆ ಪೂರಕವಾಗಿರುವುದರಿಂದ ಸೋಂಕು ನಿಯಂತ್ರಣವೂ ಕ್ಲಿಷ್ಟಕರವೆನಿಸುತ್ತದೆ.
- **ಆಹಾರಸೇವನೆ:** ಪ್ರತಿರೋಧಕ ವ್ಯವಸ್ಥೆಯು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಉತ್ತಮವಾದ ಆಹಾರ ಬಹಳ ಮುಖ್ಯ. ಆಹಾರದಲ್ಲಿನ ಪ್ರೊಟೀನ್ ಪ್ರತಿಕಾಯಗಳ ತಯಾರಿಕೆಗೆ ಮತ್ತು ಅಂಗಾಂಶ ದುರಸ್ಥಿಗೆ ಅತ್ಯಗತ್ಯ. ಅಂತೆಯೇ ಆಹಾರದಲ್ಲಿನ ಜೀವಸತ್ವಗಳು (ಎ, ಸಿ, ಬಿ-6 ಮತ್ತು ಇ) ಖನಿಜಾಂಶಗಳೂ (ಜಿಂಕ್, ಮೆಗ್ನೀಸಿಯಂ, ಕಬ್ಬಿಣಾಂಶ ಮೊದಲಾದವು) ದೇಹದ ವಿವಿಧ ಅಂಗಾಂಶಗಳನ್ನು ಸದೃಢಗೊಳಿಸುವುದರ ಮೂಲಕ ಪ್ರತಿರೋಧ ವ್ಯವಸ್ಥೆಯ ಉತ್ತಮ ಕಾರ್ಯಕ್ಷಮತೆಗೆ ಕಾರಣವಾಗುತ್ತದೆ. ಹಾಗಾಗಿಯೇ ಅಪೌಷ್ಟಿಕತೆಯಿಂದ ಬಳಲುವವರಲ್ಲಿ ಸೋಂಕು ತೀವ್ರ ಸ್ವರೂಪ ತಾಳಬಲ್ಲದು.

ಕೃತಕ ಪ್ರತಿರೋಧತೆ

ಇದು ಲಸಿಕೆಗಳು ಹಾಗೂ ಸಿದ್ಧಪಡಿಸಿದ ಪ್ರತಿಕಾಯಗಳು ಶರೀರದಲ್ಲಿ ಕೃತಕವಾಗಿ ಉತ್ಪತ್ತಿ ಮಾಡುವ ಪ್ರತಿರೋಧತೆ. ಲಸಿಕೆಗಳಲ್ಲಿ ರೋಗಾಣುವಿನ ಹಾನಿಕಾರಕವಲ್ಲದ ಅಂಶಗಳಿದ್ದು ಅವು ರೋಗನಿರೋಧಕ ವ್ಯವಸ್ಥೆಯನ್ನು ನಿರ್ದಿಷ್ಟ ರೋಗಾಣುವಿನ ವಿರುದ್ಧ ಪ್ರಚೋದಿಸುತ್ತವೆ.

ರೋಗಾಣುವಿನ ಸಂಪರ್ಕಕ್ಕೆ ಬಂದಾಗ ಆಗುವುದೇನು?

ವ್ಯಕ್ತಿಯು ರೋಗಾಣುಗಳ ಸೋಂಕಿಗೆ ತುತ್ತಾದಾಗ ಆತನಲ್ಲಿ ಸ್ವಾಭಾವಿಕವಾಗಿ ಆ ರೋಗಾಣುವಿನ ವಿರುದ್ಧ ಪ್ರತಿರೋಧಕ ಪ್ರಕ್ರಿಯೆ ಆರಂಭವಾಗುತ್ತದೆ. ಈ ಪ್ರಕ್ರಿಯೆಯು ಕ್ರಿಯಾಶೀಲಗೊಂಡ ಜೀವಕೋಶಗಳ (ಬಿಳಿ ರಕ್ತಕಣಗಳು) ಅಥವಾ ಪ್ರತಿಕಾಯಗಳ ಮೂಲಕ ರೋಗಾಣುವನ್ನು ಹೊಡೆದೋಡಿಸುತ್ತದೆ. ಇವುಗಳಲ್ಲಿ ಕೆಲವು ಸ್ವಲ್ಪ ಕಾಲದವರೆಗೆ ಇನ್ನು ಕೆಲವು ಆತನ ಜೀವಿತಾವಧಿಯವರೆಗೂ ಆ ನಿರ್ದಿಷ್ಟ ರೋಗಾಣುವಿನ ವಿರುದ್ಧ ಪ್ರತಿರೋಧತೆಯನ್ನು ಒದಗಿಸಬಲ್ಲವು. ಉದಾಹರಣೆಗೆ, ಮಕ್ಕಳು ಸಣ್ಣ ದಡಾರದಿಂದ (ಚಿಕನ್ ಪಾಕ್ಸ್) ಬಳಲಿದಾಗ ಉಂಟಾದ ಪ್ರತಿರೋಧತೆಯು ಜೀವನಪರ್ಯಂತ ಅವರನ್ನು ಆ ಸೋಂಕಿನ ವಿರುದ್ಧ ರಕ್ಷಿಸಬಲ್ಲದು. ಬಾಲ್ಯದಲ್ಲಿ ಹೊರಾಂಗಣದ ಗಿಡಮರ, ಮಣ್ಣಿನೊಡನೆ ಆಟವಾಡುವ ಮಕ್ಕಳು ಅಲ್ಪ ಪ್ರಮಾಣದ ರೋಗಾಣುವಿನೊಂದಿಗೆ ಸಂಪರ್ಕ ಬಂದು ಒಂದಿಷ್ಟು ಪ್ರತಿರೋಧತೆಯನ್ನು ಬೆಳೆಸಿಕೊಂಡಿರುತ್ತಾರೆ. ಹಾಗಾಗಿ ಮುಂದೆ ಎಂದೋ ಬರುವ ಈ ಬಗೆಯ ರೋಗಾಣುಗಳ ಸಂಪರ್ಕ ಅವರನ್ನು ಹೆಚ್ಚು ಬಾಧಿಸಲಾರದು. ಈ ಕಾರಣಕ್ಕಾಗಿಯೇ ಹೊರದೇಶಗಳ ಸ್ವಚ್ಛ ವಾತಾವರಣದಲ್ಲಿ ಬೆಳೆದು ನಮ್ಮಲ್ಲಿಗೆ ಬರುವ ಮಕ್ಕಳು ಬಹುಬೇಗ ಸೋಂಕಿಗೆ ತುತ್ತಾಗುತ್ತಾರೆ.

ಉತ್ತಮ ರೋಗನಿರೋಧಕ ಶಕ್ತಿಗಾಗಿ ಹೀಗೆ ಮಾಡಿ:

- ಮಕ್ಕಳಿಗೆ ಮೊದಲ ಆರು ತಿಂಗಳು ತಪ್ಪದೇ ಎದೆ ಹಾಲುಣಿಸಿ. ಎಳವೆಯಲ್ಲಿ ಪೌಷ್ಟಿಕ ಆಹಾರಸೇವನೆಗೆ ಮಹತ್ವ ಕೊಡಿ. ಹೊರಾಂಗಣದಲ್ಲಿ ಆಟವಾಡಲು ಪ್ರೋತ್ಸಾಹಿಸಿ.
- ಸಮತೋಲಿತ ಆಹಾರಸೇವನೆಯನ್ನು ರೂಢಿಸಿಕೊಳ್ಳಿ.
- ದಿನದಲ್ಲಿ ಕನಿಷ್ಠ ಮೂರು ಲೀಟರ್ ನೀರನ್ನು ಕುಡಿಯಿರಿ.
- ನಿಯಮಿತವಾಗಿ ದೈಹಿಕ ವ್ಯಾಯಾಮ ಮಾಡಿ.
- ನಿಯಮಿತವಾಗಿ ಸೂರ್ಯನ ಬಿಸಿಲಿಗೆ ಮೈಯೊಡ್ಡಿ.
- ದುಶ್ಚಟಗಳನ್ನು ವರ್ಜಿಸಿ.
- ಸಮರ್ಪಕವಾದ ನಿದ್ದೆಯನ್ನು ರೂಢಿಸಿಕೊಳ್ಳಿ.
- ಅತಿಯಾದ ಒತ್ತಡ ಸೋಂಕು ವರ್ಧಿಸಲು ಪೂರಕವಾಗುತ್ತದೆ. ಒತ್ತಡ ಕಡಿಮೆ ಮಾಡಿಕೊಳ್ಳಿ.
- ನಿಯಮಿತ ಚಿಕಿತ್ಸೆಯಿಂದ ಮಧುಮೇಹ ರಕ್ತದೊತ್ತಡದಂತಹ ಕಾಯಿಲೆಗಳನ್ನು ನಿಯಂತ್ರಣದಲ್ಲಿರಿಸಿ.
- ಆರೋಗ್ಯ ಇಲಾಖೆ ಸೂಚಿಸಿದ ಲಸಿಕೆಗಳನ್ನು ತಪ್ಪದೇ ಹಾಕಿಸಿಕೊಳ್ಳಿ. ನೆನಪಿಡಿ, ರೋಗನಿರೋಧಕ ಶಕ್ತಿಯನ್ನು ಏಕಾಏಕಿ ಹೆಚ್ಚಿಸಲು ಯಾವ ವಿಧಾನವೂ ಇಲ್ಲ. ಉತ್ತಮವಾದ ಜೀವನಶೈಲಿಯಿಂದ ಮಾತ್ರವೇ ಅದು ಸಾಧ್ಯ.

(ಲೇಖಕಿ ವೈದ್ಯೆ)

ಸಿಇಟಿ ದಿಕ್ಸೂಚಿ

Chemistry – Chemical Bonding & Molecular Structure-1

1. The intermolecular hydrogen bond is present in
(1) Phenol (2) o-Nitrophenol
(3) p-Nitrophenol (4) p-Cresol

2. The state of hybrid orbitals of carbon in CO_2, CH_4 and CO_3^{2-} and respectively is
(1) sp^3, sp^2 and sp (2) sp^3, sp and sp^2
(3) sp, sp^3 and sp^2 (4) sp^2, sp^3 and sp

3. The formal charge on central oxygen atom in ozone is
(1) +2 (2) -1 (3) +1 (4) 0

4. When the same quantity of heat is absorbed by a system at two different temperatures T_1 and T_2, such that $T_1 > T_2$, change in ntropies are ΔS_1 and ΔS_2 respectively. Then:
(1) $S_2 > S_1$ (2) $\Delta S_1 > \Delta S_2$
(3) $\Delta S_2 < \Delta S_1$ (4) $\Delta S_1 = \Delta S_2$

5. Bond angle in PH_4^+ is more than that of PH3. This is because
(1) PH_3 has planar trigonal structure
(2) lonepair – bond pair repulsion exists in PH_3
(3) hybridisation of O changes when PH_3 is converted to PH_4^+
(4) PH_4^+ has square planar structure

6. Incorrectly matched pair is:
(1) XeF_6 – distorted octahedral
(2) XeO_3 – Pyramidal
(3) $XeOF_4$ – square pyramidal
(4) XeF_4 – tetrahedral

7. When O_2 is converted into O_2^+
(1) both paramagnetic character and bond order increase
(2) bond order decreases
(3) paramagnetic character increases
(4) paramagnetic character decreases and the bond order increases

8. Increasing order of carbon-carbon bond length for the following is

C_2H_4	C_2H_2	C_6H_6	C_2H_6
(A)	(B)	(C)	(D)

(1) C < B < A < D
(2) B < C < A < D
(3) D < C < A < B
(4) B < A < C < D

9. Intramolecular Hydrogen bonding is formed in
(1) H_2O (2) Salicylaldehyde
(3) NH_3 (4) Benzophenone

10. d^2sp^3 hybridization of the atomic orbitals gives
(1) Square planar structure
(2) Triangular structure
(3) Tetrahedral structure
(4) Octahedral structure

11. Which of the following is diamagnetic?
(1) H_2^+ (2) He_2^+
(3) O_2 (4) N_2

12. the number of antibonding electrons present in O_2^- molecular ion is
(1) 8 (2) 6 (3) 5 (4) 7


13. The increasing order of bond order of O_2, O_2^+, O_2^- and O_2^{--} is
(1) O_2^+, O_2, O_2^- and O_2^-
(2) $O_2^-. O_2^-, O_2^+$, and O_2
(3) O_2, O_2^+, O_2^- and O_2^-
(4) O_2^{2-}, O_2^-, O_2 and O_2^+

Answers

1. Answer (2)
Solution: The intramolecular hydrogen bond is present in o-Nitrophenol


2. Answer (3)
Solution: CO_2 - sp hybridisation
CH_4 - sp^3 hybridisation
CO_3^{-2} - sp^2 - hybridisation

3. Answer (3)
Solution :



4. Answer (2)
Solution : $\Delta s = \frac{q}{T} \Rightarrow \Delta s \propto \frac{1}{T}$

5. Answer (2)
Solution :In pH_3, lone pair – bond pair repulsion which decreases
In pH_3, lone pair – bond pair repulsion which decreases




6. Answer (4)

7. Answer (4)
Solution : $(i) O_2 - (\sigma 1s)^2 (\sigma^* 1s)^2 (\sigma 2s)^2 (\sigma^* 2s)^2$
$(\sigma 2p_z)^2 (\pi 2p_x)^2 (\pi 2p_y)^2 (\pi^* 2p_x)^1 (\pi^* 2p_y)^1$
Bond Order $= \frac{8-4}{2} = 2$
O_2 has two unpaired electrons
$(ii) O_2^+ - (\sigma 1s)^2 (\sigma^* 1s)^2 (\sigma 2s)^2 (\sigma^* 2s)^2$
$(\sigma 2p_z)^2 (\pi 2p_x)^2 (\pi 2p_y)^2$
$(\pi^* 2p_x)^1 (\pi^* 2p_y)^0 = 2.5$
O_2^+ has one unpaired electron.

8. Answer (4)
Solution : In C_2H_6, carbon-carbon bond is single (1.54A⁰)
In C_6H_6, carbon- carbon bond is partially double (1.39A⁰)
In C_2H_4, carbon- carbon bond is doubled (1.34A⁰)
In C_2H_2, carbon- carbon bond is triple (1.20A⁰)

9. Answer (2)
Solution :



10. Answer (4)
Solution :Conceptual

11. Answer (4)
Solution : N_2, there is no unpaired electron in molecular orbital

12. Answer (4)
Solution :Conceptual

13. Answer (4)
Solution : Bond order formula Bond order = (1 / 2) × [number of an electron in anti-bonding molecular orbitals – [number of electrons in bonding molecular orbitals]
(i) B.O of O_2 = (1 / 2) × [10 – 6] = 2
(ii) B.O of O_2^+ = (1 / 2) × [10 – 5] = 2.5
(iii) B.O of O_2^- = (1 / 2) × [10 – 7] = 1.5
(iv) B.O of O_2^{-2} = (1 / 2) × [10 – 8] = 1

Increasing bond order is: O_2^{2-}, O_2^-, O_2 and O_2^+

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -14

186. ಕೆಂಪಂಗಿ ಚಳವಳಿ ಪ್ರಾರಂಭಿಸಿದವರು ಯಾರು?
ಎ) ಮಹಮ್ಮದ್ ಅಲಿ ಜಿನ್ನಾ
ಬಿ) ಖಾನ್ ಅಬ್ದುಲ್ ಗಫಾರ್ ಖಾನ್
ಸಿ) ಸರ್ ಮಹಮ್ಮದ್ ಇಕ್ಬಾಲ್
ಡಿ) ಸರ್ ಮನ್ಸೂರ್ ಅಹಮ್ಮದ್

187. ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರ ಆಯೋಗ ಭಾರತಕ್ಕೆ ಬಂದ ವರ್ಷ ಯಾವುದು?
ಎ) 1940 ಬಿ) 1941
ಸಿ) 1942 ಡಿ) 1943

188. 1937 ರಲ್ಲಿ ನಡೆದ ಚುನಾವಣೆಯಲ್ಲಿ ಈ ಕೆಳಗಿನ ಯಾವ ಎರಡು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಸರ್ಕಾರ ಇರಲಿಲ್ಲ?
ಎ) ಬಂಗಾಳ ಮತ್ತು ಪಂಜಾಬ್
ಬಿ) ಮಹಾರಾಷ್ಟ್ರ ಮತ್ತು ಕರ್ನಾಟಕ
ಸಿ) ಕೇರಳ ಮತ್ತು ಆಂಧ್ರಪ್ರದೇಶ
ಡಿ) ಪಂಜಾಬ್ ಮತ್ತು ಹರಿಯಾಣ

189. ನೀವು ಒಂದರಿಂದ ನೂರರವರೆಗೆ ಎಲ್ಲಾ ಸಂಖ್ಯೆಗಳನ್ನು ಬರೆದರೆ, 4 ನ್ನು ಎಷ್ಟು ಸಲ ಬಳಸುತ್ತೀರಿ?
ಎ) 19 ಬಿ) 18
ಸಿ) 11 ಡಿ) 1

190. 'ಎ' ಯು 'ಬಿ' ನ ಸಹೋದರಿ, 'ಸಿ' ಯು 'ಬಿ' ನ ತಾಯಿ, 'ಡಿ' ಯು 'ಸಿ' ನ ತಂದೆ, 'ಇ' ಯು 'ಡಿ' ಯ ತಾಯಿ, ಹಾಗಿದ್ದಲ್ಲಿ 'ಎ' ಯು 'ಡಿ' ಗೆ ಏನಾಗಬೇಕು?
ಎ) ಅಜ್ಜ ಬಿ) ಅಜ್ಜಿ
ಸಿ) ಮಗಳು ಡಿ) ಮೊಮ್ಮಗಳು

191. 'ಈ ಹುಡುಗಿಯು, ನನ್ನ ತಾಯಿಯ ಮೊಮ್ಮಗನ ಪತ್ನಿಯಾಗಬೇಕು' ಎಂದು ನಾಗರಾಜ ಹೇಳಿದರೆ, ಗುರು ಹುಡುಗಿಗೆ ಏನಾಗಬೇಕು?
ಎ) ತಂದೆ ಬಿ) ಅಜ್ಜ ಸಿ) ಪತಿ
ಡಿ) ಇವುಗಳಲ್ಲಿ ಯಾವುದೂ ಅಲ್ಲ

192. ಒಂದು ತರಗತಿಯ ಎಲ್ಲಾ ಹುಡುಗರನ್ನು ಒಂದೇ ಸಾಲಿನಲ್ಲಿ ನಿಲ್ಲಿಸಿದಾಗ, ಒಬ್ಬ ಹುಡುಗನು, ಆ ಸಾಲಿನ ಎರಡೂ ಬದಿಯಿಂದ 19ನೆಯವನಾದರೆ, ಒಟ್ಟು ಆ ತರಗತಿಯಲ್ಲಿ ಎಷ್ಟು ಹುಡುಗರಿದ್ದಾರೆ?
ಎ) 37 ಬಿ) 38
ಸಿ) 39 ಡಿ) 27

193. 2003ನೇ ಇಸವಿಯ ಜನವರಿ 30ನೇ ದಿನವು ಗುರುವಾರವಾದರೆ, 2003ನೇ ಇಸವಿಯ ಮಾರ್ಚ್ 2ನೇ ದಿನವು ಯಾವ ವಾರವಾಗಿರುತ್ತದೆ?
ಎ) ಭಾನುವಾರ ಬಿ) ಗುರುವಾರ
ಸಿ) ಮಂಗಳವಾರ ಡಿ) ಶನಿವಾರ

194. ಜೋಗ ಜಲಪಾತ ಯಾವ ನದಿಯಿಂದ ಉಂಟಾಗಿದೆ?
ಎ) ನೇತ್ರಾವತಿ ಬಿ) ಕಾವೇರಿ
ಸಿ) ಶರಾವತಿ ಡಿ) ಶಿಂಷಾ

195. ಭಾರತದ ರಾಷ್ಟ್ರೀಯ ಜಲಚರ ಪ್ರಾಣಿ ಯಾವುದು?
ಎ) ಡಾಲ್ಫಿನ್ ಬಿ) ಮೊಸಳೆ
ಸಿ) ಕತಾ ಮೀನು ಡಿ) ಆಮೆ

196. ದ್ವಾರಸಮುದ್ರವೆಂದು ಯಾವ ಸ್ಥಳವನ್ನು ಕರೆಯುತ್ತಾರೆ?
ಎ) ಹಳೇಬೀಡು ಬಿ) ಕೊಡಗು
ಸಿ) ಬೇಲೂರು ಡಿ) ಕಡೂರು

197. 'ಡೆಮೊಗ್ರಫಿ' ಎಂದರೆ
ಎ) ಪ್ರಾಣಿಗಳ ಜನಸಂಖ್ಯೆಯನ್ನು ಅಧ್ಯಯನ ಮಾಡುವುದು
ಬಿ) ಮಾನವ ಜನಸಂಖ್ಯೆಯನ್ನು ಅಧ್ಯಯನ ಮಾಡುವುದು
ಸಿ) ಆನೆಗಳ ಜನಸಂಖ್ಯೆಯನ್ನು ಅಧ್ಯಯನ ಮಾಡುವುದು
ಡಿ) ಇವುಗಳಲ್ಲಿ ಯಾವುವೂ ಅಲ್ಲ

198. ಈ ಕೆಳಗಿನವುಗಳಲ್ಲಿ ಯಾವುದು ಭಾರತದ ಚುನಾವಣಾ ಆಯೋಗದ ಕರ್ತವ್ಯ ಅಲ್ಲ?
ಎ) ರಾಜಕೀಯ ಪಕ್ಷಗಳಿಗೆ ಮಾನ್ಯತೆ ನೀಡುವುದು
ಬಿ) ಅಭ್ಯರ್ಥಿಗಳಿಗೆ ಪ್ರಚಾರ ಮಾಡಲು ಹಣ ನೀಡುವುದು
ಸಿ) ಚುನಾವಣೆ ನಿಯಮಗಳನ್ನು ರೂಪಿಸುವುದು
ಡಿ) ಚುನಾವಣಾ ಕ್ಷೇತ್ರ, ದಿನ ನಿಗದಿಪಡಿಸುವುದು

199. ಜಲಿಯನ್ ವಾಲಾಭಾಗ್ ಸಭೆಯಲ್ಲಿ, ಜನರ ಮೇಲೆ ಗುಂಡು ಹಾರಿಸಲು ಆಜ್ಞೆ ನೀಡಿದ ವ್ಯಕ್ತಿ ಯಾರು?
ಎ) ಫೀಯರ್ ಬಿ) ಟಯರ್
ಸಿ) ಡಯರ್ ಡಿ) ಫಯರ್

200. ಬಂಗಾಳದ ವಿಭಜನೆಯು ಯಾವ ವರ್ಷದಲ್ಲಿ ನಡೆಯಿತು?
ಎ) 1905 ಬಿ) 1904
ಸಿ) 1906 ಡಿ) 1907

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 13ರ ಉತ್ತರ: 171. ಸಿ, 172. ಡಿ, 173. ಎ, 174. ಡಿ, 175. ಸಿ, 176. ಸಿ, 177. ಬಿ, 178. ಸಿ, 179. ಎ, 180. ಎ, 181. ಸಿ, 182. ಬಿ, 183. ಡಿ, 184. ಸಿ, 185. ಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳುವುದರಲ್ಲಿ ನನಗೆ ನಂಬಿಕೆಯಿಲ್ಲ. ನಾನು ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇನೆ ಮತ್ತು ನಂತರ ಅವು ಸರಿಯಾದ ದಾರಿಯಲ್ಲಿ ಸಾಗುವಂತೆ ನೋಡಿಕೊಳ್ಳುತ್ತೇನೆ. **-ರತನ್ ಟಾಟಾ**

ಪಕ್ಷಕ್ಕೆ ಬಲ ತುಂಬುವುದು ಮರೆತು ಬಣರಾಜಕೀಯದಲ್ಲಿ ಮುಳುಗಿದ ಕಾಂಗ್ರೆಸ್

ರಾಜ್ಯದಲ್ಲಿ ಮುಖ್ಯಮಂತ್ರಿ ಹುದ್ದೆ ಕುರಿತ ಚರ್ಚೆ ಒಮ್ಮೆಲೇ ಬಿರುಸು ಪಡೆದುಕೊಂಡಿದೆ. 'ಮುಖ್ಯಮಂತ್ರಿ ಸ್ಥಾನದಿಂದ ಬಿ.ಎಸ್. ಯಡಿಯೂರಪ್ಪ ಅವರನ್ನು ಬದಲಾಯಿಸಬೇಕು' ಎಂಬ ಕುರಿತು ಪರ-ವಿರೋಧ ಚರ್ಚೆ ಆಡಳಿತಾರೂಢ ಬಿಜೆಪಿಯಲ್ಲಿ ನಡೆದಿದೆ; 'ಮುಂದಿನ ಚುನಾವಣೆಯ ಬಳಿಕ ತಮ್ಮ ಪಕ್ಷದಿಂದ ಇಂಥವರೇ ಮುಖ್ಯಮಂತ್ರಿ ಆಗಬೇಕು' ಎಂಬ ಬಹಿರಂಗ ವಾಗ್ವಾದ ಕಾಂಗ್ರೆಸ್‌ನಲ್ಲಿ ನಡೆಯುತ್ತಿದೆ. ರಾಜ್ಯದಲ್ಲಿ ಈಗ ಬಿಜೆಪಿ ನೇತೃತ್ವದ ಸರ್ಕಾರವಿದೆ. ಹಾಗಾಗಿ, ಆ ಪಕ್ಷದೊಳಗೆ ಮುಖ್ಯಮಂತ್ರಿ ಬದಲಾವಣೆಯ ಕುರಿತ ಚರ್ಚೆ ನಡೆದರೆ ಅದನ್ನು ಸಹಜ ರಾಜಕೀಯ ವಿದ್ಯಮಾನ ಎನ್ನಬಹುದು. ಬಿಜೆಪಿಯ ಹೆಚ್ಚಿನ ಶಾಸಕರು ಮತ್ತು ವರಿಷ್ಠರು ಒಪ್ಪಿದರೆ ಅಲ್ಲಿ ಮುಖ್ಯಮಂತ್ರಿಯ ಬದಲಾವಣೆ ನಡೆಯಲೂಬಹುದು. ಆದರೆ ಕಾಂಗ್ರೆಸ್ ಪಕ್ಷಕ್ಕೆ ಏನಾಗಿದೆ? ವಿಧಾನಸಭಾ ಚುನಾವಣೆ ನಡೆಯಲು ಇನ್ನೂ ಎರಡು ವರ್ಷಗಳಿವೆ. ಈಗಲೇ ತಮ್ಮ ಪಕ್ಷದಿಂದ ಮುಂದಿನ ಮುಖ್ಯಮಂತ್ರಿ ಅಭ್ಯರ್ಥಿ ಇವರೇ ಆಗಬೇಕು ಎಂದು ಪಕ್ಷದ ಹಲವು ಶಾಸಕರು ಮತ್ತು ನಾಯಕರು ಬಹಿರಂಗ ಹೇಳಿಕೆಗಳನ್ನು ನೀಡುತ್ತಿರುವುದು ಹಾಸ್ಯಾಸ್ಪದವಾಗಿ ಕಾಣಿಸುತ್ತಿದೆ. ಮೊದಲು ಚುನಾವಣೆ ನಡೆಯಬೇಕು. ಬಳಿಕ ಪಕ್ಷ ಅದರಲ್ಲಿ ಬಹುಮತ ಪಡೆಯಬೇಕು. ಅದ್ಯಾವುದೂ ಇಲ್ಲದೆ ಕಾಂಗ್ರೆಸ್ ನಾಯಕರು ಹಗಲುಗನಸು ಕಾಣುತ್ತಿದ್ದಾರೆ. 'ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸಿದರು' ಎಂಬ ಗಾದೆಯಂತಿದೆ ಕಾಂಗ್ರೆಸ್‌ನ ಪರಿಸ್ಥಿತಿ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೇ ಮುಂದಿನ ಮುಖ್ಯಮಂತ್ರಿ ಎಂದು ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ಶುರುವಾದ ಬೆನ್ನಲ್ಲೇ ಪಕ್ಷದೊಳಗೆ ಭಿನ್ನಾಭಿಪ್ರಾಯಗಳು ಭುಗಿಲೆದ್ದಿವೆ. 'ಸಿದ್ದರಾಮಯ್ಯ ಅವರೇ ಮುಂದಿನ ಮುಖ್ಯಮಂತ್ರಿ' ಎಂದು ಶಾಸಕರಾದ ಜಮೀರ್ ಅಹ್ಮದ್ ಖಾನ್ ಮತ್ತು ರಾಘವೇಂದ್ರ ಹಿಟ್ನಾಳ್ ಬಹಿರಂಗವಾಗಿ ಹೇಳಿದ್ದಾರೆ. ಪಕ್ಷದ ಜಿಲ್ಲಾ ಪದಾಧಿಕಾರಿಗಳ ಬದಲಾವಣೆಯ ಪಟ್ಟಿಯೊಂದಿಗೆ ಶಿವಕುಮಾರ್ ದೆಹಲಿಗೂ ಹೋಗಿಬಂದಿದ್ದು, ಅಲ್ಲಿ ಸಿದ್ದರಾಮಯ್ಯ ಬೆಂಬಲಿಗರ ವಿರುದ್ಧ ದೂರು ನೀಡಿದ್ದಾರೆ ಎನ್ನಲಾಗುತ್ತಿದೆ. ಕೆಲವು ವಿಧಾನಸಭಾ ಕ್ಷೇತ್ರಗಳಲ್ಲಿ, 'ನೀವೇ ಅಭ್ಯರ್ಥಿ' ಎಂದು ತಮ್ಮ ಹಿಂಬಾಲಕರಿಗೆ ಶಿವಕುಮಾರ್ ಭರವಸೆ ನೀಡಿರುವುದಾಗಿ ಸಿದ್ದರಾಮಯ್ಯ ಬೆಂಬಲಿಗರು ದೂರಿದ್ದಾರೆ. 'ಮುಖ್ಯಮಂತ್ರಿ ಅಭ್ಯರ್ಥಿಯ ಕುರಿತು ಯಾರೂ ಬಹಿರಂಗ ಹೇಳಿಕೆ ನೀಡಬಾರದು. ಪಕ್ಷದ ಶಿಸ್ತು ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಕಾಂಗ್ರೆಸ್ಸಿನ ಕರ್ನಾಟಕದ ಉಸ್ತುವಾರಿ ಹೊತ್ತಿರುವ ರಣದೀಪ್‌ಸಿಂಗ್ ಸುರ್ಜೇವಾಲಾ ಎಚ್ಚರಿಕೆ ನೀಡಿದ್ದಾರೆ. ಈ ಎಚ್ಚರಿಕೆಯ ಹೊರತಾಗಿಯೂ ಶಿವಕುಮಾರ್ ಮತ್ತು ಸಿದ್ದರಾಮಯ್ಯ ಬೆಂಬಲಿಗರ ನಡುವಣ ಟೀಕೆ- ಪ್ರತಿಟೀಕೆಗಳು ನಿಂತಿಲ್ಲ. ಈ ಮಧ್ಯೆ, ಹಿರಿಯ ನಾಯಕರಾದ ಜಿ. ಪರಮೇಶ್ವರ ಮತ್ತು ಕೆ.ಎಚ್. ಮುನಿಯಪ್ಪ ಭೇಟಿಯಾಗಿ 'ದಲಿತ ಮುಖ್ಯಮಂತ್ರಿ' ಬೇಡಿಕೆಯನ್ನು ತೇಲಿಬಿಟ್ಟಿದ್ದಾರೆ. 'ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಯಾಗಲು ಲಿಂಗಾಯತ ಅಭ್ಯರ್ಥಿಗಳ ಕೊರತೆಯಿಲ್ಲ' ಎಂದು ಹಿರಿಯ ಶಾಸಕ ಎಂ.ಬಿ.ಪಾಟೀಲ ಹೇಳಿದ್ದಾರೆ. ಇದನ್ನೆಲ್ಲ ಗಮನಿಸಿರುವ ಜನಸಾಮಾನ್ಯರು 'ಕಾಂಗ್ರೆಸ್ ನಾಯಕರು ಅಧಿಕಾರಕ್ಕಾಗಿ ಚಡಪಡಿಸುತ್ತಿದ್ದಾರೆ' ಎಂದು ಹಾದಿಬೀದಿಯಲ್ಲಿ ಮಾತನಾಡಿಕೊಳ್ಳುವಂತಾಗಿದೆ. ಪಕ್ಷನಿಷ್ಠ ಕಾಂಗ್ರೆಸ್ ಕಾರ್ಯಕರ್ತರೇ ಈ ವಿದ್ಯಮಾನದ ಕುರಿತು ತೀವ್ರ ಬೇಸರ ವ್ಯಕ್ತಪಡಿಸುತ್ತಿದ್ದಾರೆ.



ಜನರು ಕೋವಿಡ್ ಹೊಡೆತದಿಂದ ತತ್ತರಿಸಿರುವ ಈ ಹೊತ್ತಿನಲ್ಲಿ, ಕಾಂಗ್ರೆಸ್ ಮುಖಂಡರು ಮುಖ್ಯಮಂತ್ರಿ ಪಟ್ಟದ ಕನಸು ಕಾಣುತ್ತಿರುವುದು ಅಧಿಕಾರದಾಹದ ನಿರ್ಲಜ್ಜ ಪ್ರದರ್ಶನ

ಸದ್ಯದ ರಾಜಕೀಯ ಪರಿಸ್ಥಿತಿ ಗಮನಿಸಿದರೆ, ಕಾಂಗ್ರೆಸ್ ನಾಯಕರ ಈ ಅಧಿಕಾರದ ಹಪಹಪಿ ಮುಂದಿನ ಚುನಾವಣೆಯಲ್ಲಿ ಪಕ್ಷಕ್ಕೆ ದುಬಾರಿಯಾಗಿ ಪರಿಣಮಿಸಲೂಬಹುದು. ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರವು ದಕ್ಷ ಆಡಳಿತ ನೀಡುತ್ತಿದೆ ಎಂದು ಯಾರೂ ಹೇಳುತ್ತಿಲ್ಲ. ಕೋವಿಡ್ ನಿರ್ವಹಣೆಯಲ್ಲಿ ಈ ಸರ್ಕಾರದ ವೈಫಲ್ಯ ಮೇಲ್ನೋಟಕ್ಕೇ ಕಾಣಿಸುತ್ತಿದೆ. ಭ್ರಷ್ಟಾಚಾರ ವ್ಯಾಪಕವಾಗಿದೆ ಎಂದು ಬಿಜೆಪಿಯ ಕೆಲವು ಶಾಸಕರೇ ಆರೋಪಿಸಿದ್ದಾರೆ. ಹಾಗೆಂದು ಇವೆಲ್ಲದರ ಹಿನ್ನೆಲೆಯಲ್ಲಿ ಮುಂದಿನ ಚುನಾವಣೆಯಲ್ಲಿ ಜನರು ಕಾಂಗ್ರೆಸ್‌ಗೆ ಕಣ್ಣುಮುಚ್ಚಿ ಮತ ಹಾಕುತ್ತಾರೆ ಎನ್ನುವಂತಿಲ್ಲ. ಪ್ರತಿಪಕ್ಷವಾಗಿ ಕಾಂಗ್ರೆಸ್ ತನ್ನ ಪಾತ್ರವನ್ನು ಸರಿಯಾಗಿ ನಿರ್ವಹಿಸಿದೆಯೇ ಎನ್ನುವುದನ್ನೂ ಮತದಾರರು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದಾರೆ. ಕೊರೊನಾ ಸೋಂಕು ತೀವ್ರ ಸ್ವರೂಪ ಪಡೆದುಕೊಂಡಾಗ ಕಾಂಗ್ರೆಸ್ ಪಕ್ಷದ ವತಿಯಿಂದ ಆಂಬುಲೆನ್ಸ್ ಮತ್ತು ಆಮ್ಲಜನಕ ಒದಗಿಸಿದ್ದು ಹಾಗೂ ಬಡಜನರಿಗೆ ಪಡಿತರ ವಿತರಣೆ ಮಾಡಿದ್ದು ಒಳ್ಳೆಯ ಕ್ರಮ. ಜನಸಾಮಾನ್ಯರನ್ನು ಕಿತ್ತು ತಿನ್ನುತ್ತಿರುವ ಬೆಲೆ ಏರಿಕೆಯನ್ನು ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಬೀದಿಗಿಳಿದು ಹೋರಾಟ ನಡೆಸಿದ್ದೂ ಜನರ ಮನಸ್ಸಿನಲ್ಲಿದೆ. ಆದರೆ, ಎಲ್ಲ ಬಣ್ಣಗಳನ್ನೂ ಮಸಿ ನುಂಗಿತು ಎನ್ನುವಂತೆ, ಮುಖ್ಯಮಂತ್ರಿ ಹುದ್ದೆಗಾಗಿ ಕಾಂಗ್ರೆಸ್ ನಾಯಕರ ಕಿತ್ತಾಟದ ವರದಿಗಳು ಪಕ್ಷದ ಪ್ರತಿಷ್ಠೆಯನ್ನು ಮುಕ್ಕಾಗಿಸುತ್ತಿವೆ. 'ಚುನಾವಣೆಗೆ ಇನ್ನೂ ಎರಡು ವರ್ಷ ಇರುವಾಗಲೇ ಈ ನಾಯಕರು ಮುಖ್ಯಮಂತ್ರಿ ಪಟ್ಟಕ್ಕಾಗಿ ಹೀಗೆ ಕಿತ್ತಾಡಿದರೆ, ಇನ್ನು ಚುನಾವಣೆಯ ಫಲಿತಾಂಶ ಬಂದ ಬಳಿಕ ಎಷ್ಟು ಕಿತ್ತಾಡಬಹುದು?' ಎಂದು ಜನರು ಆಲೋಚಿಸುವಂತಾದರೆ ಅದರಲ್ಲಿ ತಪ್ಪೇನೂ ಇಲ್ಲ. ಈ ಹಿಂದಿನ ಚುನಾವಣೆಗಳಲ್ಲೂ ಕಾಂಗ್ರೆಸ್ಸನ್ನು ಕಾಂಗ್ರೆಸ್ಸೇ ಸೋಲಿಸಿದ ಪ್ರಕರಣಗಳು ಜನರ ನೆನಪಿನಲ್ಲಿವೆ. ಕಾಂಗ್ರೆಸ್ ಮುಖಂಡರು ಮುಖ್ಯಮಂತ್ರಿ ಪಟ್ಟದ ಕನಸು ಕಾಣುವುದನ್ನು ಬಿಟ್ಟು, ಕೋವಿಡ್ ಸಂಕಷ್ಟದಿಂದ ಇನ್ನೂ ಹೊರಬರದಿರುವ ಜನರಿಗೆ ನೆರವಾಗುವುದನ್ನು ಮುಂದುವರಿಸಲಿ. ಪ್ರತಿಪಕ್ಷವಾಗಿ ರಚನಾತ್ಮಕ ಕೆಲಸ ಮಾಡಿದರೆ, ಜನರು ಚುನಾವಣೆಯ ಸಂದರ್ಭದಲ್ಲಿ ಸಹಜವಾಗಿಯೇ ಆ ಪಕ್ಷವನ್ನು ನೆನಪಿಸಿಕೊಳ್ಳುತ್ತಾರೆ. ಜನರು ಕೋವಿಡ್ ಹೊಡೆತದಿಂದ ತತ್ತರಿಸಿ, ಆರ್ಥಿಕ ಸಂಕಷ್ಟದಿಂದ ಹೊರಬರಲು ಪರಿತಪಿಸುತ್ತಿರುವ ಈ ಹೊತ್ತಲ್ಲಿ, ನಾಯಕರ ಅಧಿಕಾರದಾಹದ ನಿರ್ಲಜ್ಜ ಪ್ರದರ್ಶನ ಎಳ್ಳಷ್ಟೂ ಸರಿಯಲ್ಲ.

ದಿನದ ಟ್ವೀಟ್

ನಡೆಯಲಿ ಪ್ರತಿಭಾಶೋಧ



ದೀಪಿಕಾ ಕುಮಾರಿ ಅವರ ಅದ್ಭುತ ಸಾಹಸಗಾಥೆಯ ಬಗ್ಗೆ ನಾವು ಹೆಚ್ಚಿಗೆ ಮಾತನಾಡುವುದಿಲ್ಲ. ಆಕೆ ಆಟೊ ಚಾಲಕರೊಬ್ಬರ ಮಗಳು. ಬೆಳೆದದ್ದು ರಾಂಚಿಯಿಂದ 15 ಕಿ.ಮೀ. ದೂರದಲ್ಲಿರುವ ಒಂದು ಊರಿನಲ್ಲಿ. ಆರ್ಚರಿಯಲ್ಲಿ ವಿಶ್ವದ ನಂ. 1 ಆಟಗಾರ್ತಿ. ಈಗ ಮೊದಲ ಸ್ಥಾನದ ಮೂರು ಪದಕಗಳನ್ನು ಜಯಿಸಿದ್ದಾರೆ. ನಿಜವಾದ ತಾರೆಯೆಂದರೆ ಆಕೆ.

ಭಾರತದಲ್ಲಿ, ವಿಶೇಷವಾಗಿ ನಗರಗಳಿಂದ ಹೊರತಾದ ಪ್ರದೇಶಗಳಲ್ಲಿ ಬೆಳಕಿಗೆ ಬಾರದ ಇನ್ನೂ ಎಷ್ಟೊಂದು ಕ್ರೀಡಾ ಪ್ರತಿಭೆಗಳು ಇರಬಹುದು ಎಂಬುದಕ್ಕೆ ಇದೊಂದು ನಿದರ್ಶನ.

ಸ್ನೇಹಲ್ ಪ್ರಧಾನ್, ಭಾರತದ ಮಾಜಿ ಕ್ರಿಕೆಟ್ ಆಟಗಾರ್ತಿ

ಅಂಕಿಅಂಶ ಹೊರಬರಲಿ



ಯಾವುದೇ ಗುಂಪು- ಸಮುದಾಯದ ಜನಸಂಖ್ಯಾ ಬೆಳವಣಿಗೆಯು ಶಿಕ್ಷಣದ ಮಟ್ಟ ಮತ್ತು ಆರ್ಥಿಕ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಹೆಚ್ಚು ಓದದವರು ಮತ್ತು ಬಡ ಜನರಲ್ಲಿ ಸಂತಾನೋತ್ಪತ್ತಿಯ ಪ್ರಮಾಣ ಹೆಚ್ಚಾಗಿರುತ್ತದೆ. ಜಾತಿ ಜನಗಣತಿಯ ಅಂಕಿಅಂಶವನ್ನು ಸರ್ಕಾರ ಬಿಡುಗಡೆ ಮಾಡಬೇಕು. ಆಗ ವಿಷಯ ಹೆಚ್ಚು ಸ್ಪಷ್ಟವಾಗಿ ತಿಳಿಯುತ್ತದೆ.

ಅಬ್ದುರ್ ರೆಹಮಾನ್, ಐಪಿಎಸ್ ಅಧಿಕಾರಿ, ಮಹಾರಾಷ್ಟ್ರ

50 ವರ್ಷಗಳ ಹಿಂದೆ

ಮಂಗಳವಾರ, 29-6-1971

- **ಪಾಕಿಸ್ತಾನದ ಮೇಲೆ ಯುದ್ಧ ಹೂಡುವ ಮಾತು ಬೇಡ: 'ತಾಳ್ಮೆ'ಗೆ ಇಂದಿರಾ ಮನವಿ**

ನವದೆಹಲಿ, ಜೂನ್ 28– ಬಾಂಗ್ಲಾದೇಶದ ವಿಷಯ ಪ್ರಸ್ತಾಪ ಮಾಡುವಾಗ, ಪಾಕಿಸ್ತಾನದ ಮೇಲೆ ಯುದ್ಧ ಹೂಡಬೇಕೆಂಬ ಯಾವ ಸಲಹೆಯೂ ಸರಿಯಲ್ಲವೆಂದು ಇಂದು ಬೆಳಿಗ್ಗೆ ಸುಮಾರು ಒಂದು ಗಂಟೆ ಕಾಲ ಭೇಟಿ ಮಾಡಿ ಚರ್ಚೆ ನಡೆಸಿದ ಲೋಕಸಭೆ ವಿರೋಧ ಪಕ್ಷಗಳ ನಾಯಕರಿಗೆ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ಸೂಚಿಸಿದುದಾಗಿ ತಿಳಿದುಬಂದಿದೆ.

ಅಂಥ ಸಲಹೆಗಳಿಂದ ಪಾಕಿಸ್ತಾನಕ್ಕೆ ಅನುಕೂಲವಾಗುತ್ತದೆ; ಏಕೆಂದರೆ ಅದರ ಮಿತ್ರ ರಾಷ್ಟ್ರಗಳು ಪಾಕಿಸ್ತಾನಕ್ಕೆ ಹೆಚ್ಚುಹೆಚ್ಚು ನೆರವು ನೀಡಲು ಅಂಥ ಮಾತುಗಳಿಂದ-ಪ್ರೇರಿತರಾಗುತ್ತಾರೆ ಎಂದು ಶ್ರೀಮತಿ ಗಾಂಧಿ ವಿವರಿಸಿದರು.

- **ರಾಜ್ಯದಲ್ಲಿ ತಯಾರಾಗುವ ಚಲನಚಿತ್ರಗಳಿಗೆಲ್ಲ ಸಬ್ಸಿಡಿಗೆ ಒತ್ತಾಯ**

ಬೆಂಗಳೂರು, ಜೂನ್ 28– ರಾಜ್ಯದಲ್ಲಿ ತಯಾರಾಗುವ ಎಲ್ಲ ಚಲನಚಿತ್ರಗಳಿಗೂ ತಲಾ 50 ಸಾವಿರ ರೂಪಾಯಿ ಸಹಾಯಧನ ನೀಡಬೇಕೆಂದು ಇಂದು ನಗರ ಭವನದಲ್ಲಿ ನಡೆದ ಚಲನ ಚಿತ್ರೋದ್ಯಮದ ಎಲ್ಲ ಕ್ಷೇತ್ರಗಳ ಪ್ರತಿನಿಧಿಗಳು ಹಾಗೂ ಅಭಿಮಾನಿಗಳ ಸಭೆ ಸರ್ಕಾರವನ್ನು ಒತ್ತಾಯಪಡಿಸಿತು.

ರಾಜ್ಯದಲ್ಲಿ ಫಿಲ್ಮ್ ಚೇಂಬರ್ ಹಾಗೂ ಚಿತ್ರ ನಿರ್ಮಾಪಕರ ಗಿಲ್ಡ್ ಆಶ್ರಯದಲ್ಲಿ ನಡೆದ ಸಂಘಟನಾ ಸಭೆಯ ಅಧ್ಯಕ್ಷತೆಯನ್ನು ಪ್ರಸಿದ್ಧ ನಟ ಶ್ರೀ ರಾಜ್‌ಕುಮಾರ್ ಅವರು ವಹಿಸಿದ್ದರು.

ಕುರ್ಚಿ ಉಳಿಸಲು, ಕುರ್ಚಿ ಗಳಿಸಲು ನಡೆಸುವ ಕಸರತ್ತೇ ಹೆಚ್ಚು

ಮತದಾರನೊಬ್ಬನೇ ವೆಂಕಟರಮಣ!



ಅನುಸಂಧಾನ

ರವೀಂದ್ರ ಭಟ್ಟ

ಗಂಗಾವತಿ ಪ್ರಾಣೇಶ್ ಒಂದು ಕತೆಯನ್ನು ಯಾವಾಗಲೂ ಹೇಳುತ್ತಾರೆ. ಅವರು ಚಿಕ್ಕವರಿದ್ದಾಗ ಶಾಲೆಯಲ್ಲಿ ಮಾಸ್ತರರು ಮಕ್ಕಳಿಗೆ ಒಂದು ಪ್ರಶ್ನೆ ಕೇಳಿದರಂತೆ. 'ಗ್ರಂಥಾಲಯಕ್ಕೆ ಬೆಂಕಿ ಬಿದ್ದಿದೆ. ನೀವು ಯಾವ ಪುಸ್ತಕ ರಕ್ಷಣೆ ಮಾಡುತ್ತೀರಿ' ಎಂದು. ಅದಕ್ಕೆ ಒಬ್ಬ ವಿದ್ಯಾರ್ಥಿ ತಾನು ಶಿವರಾಮ ಕಾರಂತರ ಪುಸ್ತಕ ರಕ್ಷಿಸುತ್ತೇನೆ ಎಂದನಂತೆ. ಇನ್ನೊಬ್ಬ ತಾನು ಕುವೆಂಪು ಅವರ ಪುಸ್ತಕ ರಕ್ಷಿಸುತ್ತೇನೆ ಎಂದನಂತೆ. ಮತ್ತೊಬ್ಬ ಕನಕದಾಸರ ಪುಸ್ತಕ, ಇನ್ನೊಬ್ಬ ಬಸವಣ್ಣನ ಪುಸ್ತಕ ರಕ್ಷಿಸುತ್ತೇನೆ ಎಂದು ಹೀಗೆ ಒಬ್ಬೊಬ್ಬರು ಒಬ್ಬೊಬ್ಬ ಮಹಾತ್ಮರ ಪುಸ್ತಕ ರಕ್ಷಿಸುವುದಾಗಿ ಉತ್ತರಿಸಿದರಂತೆ. ನಂತರ ಮಾಸ್ತರರು ಸಿದ್ಧಲಿಂಗನ ಬಳಿ 'ನೀನು ಯಾವ ಪುಸ್ತಕ ರಕ್ಷಿಸುತ್ತೀಯಾ?' ಎಂದು ಕೇಳಿದ್ದಕ್ಕೆ ಆತ 'ನಾನು ಗ್ರಂಥಾಲಯದ ಬಾಗಿಲ ಬಳಿ ಯಾವ ಪುಸ್ತಕ ಇರುತ್ತದೋ ಅದನ್ನು ರಕ್ಷಿಸುತ್ತೇನೆ. ನನ್ನ ಇಷ್ಟದ ಲೇಖಕರ ಪುಸ್ತಕ ಹುಡುಕುತ್ತಾ ಕುಳಿತರೆ ಗ್ರಂಥಾಲಯ ಸುಟ್ಟು ಭಸ್ಮವಾಗುತ್ತದೆ' ಎಂದು ಉತ್ತರಿಸಿದನಂತೆ. ಸದ್ಯಕ್ಕೆ ನಮ್ಮ ರಾಜ್ಯದ ಪರಿಸ್ಥಿತಿಯೂ ಹೀಗೆಯೇ ಆಗಿದೆ.

ಕೋವಿಡ್ ಎರಡನೇ ಅಲೆ, ಕಪ್ಪು ಶಿಲೀಂಧ್ರ, ಡೆಲ್ಟಾ ಪ್ಲಸ್ ಮುಂತಾದ ಕಾಯಿಲೆಗಳ ಹಾವಳಿಯಿಂದ ನಮ್ಮ ರಾಜ್ಯದ ಜನರ ಬದುಕಿಗೆ ಅಕ್ಷರಶಃ ಬೆಂಕಿ ಬಿದ್ದಿದೆ. ಆದರೆ ನಮ್ಮ ರಾಜಕಾರಣಿಗಳು ಮಾತ್ರ ತಮಗೆ ಬೇಕಾದವರನ್ನು ರಕ್ಷಿಸುವ ಕಾಯಕದಲ್ಲಿ ತೊಡಗಿದ್ದಾರೆ. ಯಾರಿಗೂ ಸಿದ್ಧಲಿಂಗನ ತರಹ ಸಾಮಾನ್ಯ ಜ್ಞಾನ ಇದ್ದಂತೆ ಕಾಣುತ್ತಿಲ್ಲ.

ರಾಜ್ಯ ಸಂಪೂರ್ಣವಾಗಿ ಆರ್ಥಿಕ ಮತ್ತು ಸಾಮಾಜಿಕ ಸಂಕಷ್ಟಕ್ಕೆ ಸಿಲುಕಿದೆ. ಆದರೆ ನಮ್ಮನ್ನು ಆಳುವ ರಾಜಕಾರಣಿಗಳಿಗೆ ರಾಜಕೀಯ ಸಂಕಷ್ಟ ಬಂದಾಗ ಮಾತ್ರ ಅದು ಸಂಕಷ್ಟ ಅನಿಸುತ್ತದೆ. ಉಳಿದವೆಲ್ಲಾ ಸಂಕಷ್ಟಗಳೇ ಅಲ್ಲ. ಜನ ಆಸ್ಪತ್ರೆಗಳಲ್ಲಿ ಬೆಡ್ ಸಿಗದೆ ನರಳುತ್ತಿದ್ದರೆ, ಔಷಧ ಸಿಗದೆ ಅಲುತ್ತಿದ್ದರೆ, ಆಕ್ಸಿಜನ್ ಇಲ್ಲದೆ ಪರದಾಡುತ್ತಿದ್ದರೆ ಅದೊಂದು ಕಷ್ಟ ಎಂದು ಗೊತ್ತಾಗುವುದಿಲ್ಲ. ನಾಯಕತ್ವದ ಪ್ರಶ್ನೆ ಬಂದರೆ ಮಾತ್ರ ಎದ್ದು ಕುಳಿತುಬಿಡುತ್ತಾರೆ. ಆಡಳಿತಾರೂಢ ಬಿಜೆಪಿಯಲ್ಲಿ ಮುಖ್ಯಮಂತ್ರಿಯನ್ನು ಕುರ್ಚಿಯಿಂದ ಇಳಿಸುವ ಕಸರತ್ತು. ವಿರೋಧ ಪಕ್ಷವಾದ ಕಾಂಗ್ರೆಸ್‌ನಲ್ಲಿ ಮುಂದಿನ ಮುಖ್ಯಮಂತ್ರಿ ಯಾರು ಎನ್ನುವ ಹೊಯ್‌ಕೈ.

ಒಂದೆಡೆ, ಕುರ್ಚಿ ಉಳಿಸಿಕೊಳ್ಳುವ ಕಸರತ್ತು. ಇನ್ನೊಂದೆಡೆ, ಕುರ್ಚಿ ಗಳಿಸಿಕೊಳ್ಳಲು ಪೈಪೋಟಿ. ಎರಡೂ ಕಡೆ ಭಾವನಾತ್ಮಕ ವಿಷಯಗಳದ್ದೇ ಮೇಲುಗೈ. 'ಸಂಕಟ ಬಂದಾಗ ವೆಂಕಟರಮಣ' ಎಂಬ ಮಾತು ನಮ್ಮ ಜನನಾಯಕರಿಗೆ ಸರಿಯಾಗಿಯೇ ಒಪ್ಪುತ್ತದೆ. ಸುಖವಿದ್ದಾಗ ಅವರಿಗೆ ಬಡಜನರೂ ನೆನಪಾಗುವುದಿಲ್ಲ, ಅವರ ಸಂಕಷ್ಟಗಳೂ ಕಾಣುವುದಿಲ್ಲ. ಕೇಳುವುದೂ ಇಲ್ಲ. ಎಲ್ಲಿಯಾದರೂ ಕುರ್ಚಿ ಅಲುಗಾಡುವ ಲಕ್ಷಣ ಕಾಣಿಸಿತೋ ಆಗ ಅವರಿಗೆ ಬಡಜನರ ನೆನಪಾಗಿಬಿಡುತ್ತದೆ. ಅದರಲ್ಲೂ ಜಾತಿ ನೆನಪಾಗುತ್ತದೆ. ಆಗ ದಲಿತ, ಲಿಂಗಾಯತ ಎನ್ನುವುದೆಲ್ಲಾ ಮುನ್ನೆಲೆಗೆ ಬಂದು ಬಿಡುತ್ತವೆ. ಅವರಿಗಾಗಿ ಹೃದಯ ಮಿಡಿಯುತ್ತದೆ. ಸಾಮಾಜಿಕ ಸಂಕಷ್ಟ ಬಂದಾಗ, ಆರ್ಥಿಕ ಸಂಕಷ್ಟ ಬಂದಾಗ ಮರುಗದ ಹೃದಯ ಈಗ ಮಾತ್ರ ಮಂಜಿನಂತೆ ಕರಗುತ್ತದೆ. ಆಗ ಅವರ ದೃಷ್ಟಿಯಲ್ಲಿ ಬಡ ಮತದಾರನೇ ವೆಂಕಟರಮಣ. ಕುರ್ಚಿ ಗಳಿಸಲೂ ಅವನೇ ಬೇಕು, ಕುರ್ಚಿ ಉಳಿಸಲೂ ಅವನೇ ಬೇಕು. ಉಳಿದಂತೆ ಲೋಕೋದ್ಧಾರ, ಜನ ಕಲ್ಯಾಣ ಎನ್ನುವುದೆಲ್ಲಾ ಬರೀ ಲೊಳಲೊಟ್ಟೆ.

ಪ್ರಜಾಪ್ರಭುತ್ವದಲ್ಲಿ ಮತದಾರನೇ ವೆಂಕಟರಮಣನಾಗಿರಬೇಕು. ಆದರೆ ನಿಜವಾದ ಅರ್ಥದಲ್ಲಿ ಹಾಗೆ ಆಗುವುದಿಲ್ಲ. ಭಾವನಾತ್ಮಕವಾಗಿ ಬಳಸಿಕೊಳ್ಳಲು ಮಾತ್ರ ಅವನು ವೆಂಕಟರಮಣನಾಗಿರುತ್ತಾನೆ. ಈಗ ನೋಡಿ, ಬಿಜೆಪಿಯಲ್ಲಿ ಮತ್ತೆ ನಾಯಕತ್ವ ಬದಲಾವಣೆಯ ಕೂಗು ಎದ್ದಿದೆ. ತಕ್ಷಣವೇ ನಮ್ಮ ಮುಖ್ಯಮಂತ್ರಿಗಳಿಗೆ ಬಸವಣ್ಣ ನೆನಪಾಗಿದ್ದಾರೆ. ವಿಧಾನಸೌಧದ ಆವರಣದಲ್ಲಿ ಬಸವಣ್ಣನ ಪ್ರತಿಮೆ ಸ್ಥಾಪಿಸುವ ಮಾತು ಹೇಳುತ್ತಿದ್ದಾರೆ. ವಿಧಾನಸೌಧದಿಂದ ಕೂಗಳತೆ ದೂರದಲ್ಲಿಯೇ ಬಸವೇಶ್ವರ ವೃತ್ತದಲ್ಲಿ ಈಗಾಗಲೇ ಒಂದು ಪ್ರತಿಮೆ ಇದೆ. ವಿಧಾನಸೌಧದ ಆವರಣದಲ್ಲಿ ಮತ್ತೊಂದು ಪ್ರತಿಮೆ ಸ್ಥಾಪನೆಗೆ ಜಾಗವೇ ಇಲ್ಲ. ಆದರೂ ಬಸವಣ್ಣ ಈಗ ಬೇಕು. ಇದು ಕೂಡ ಅಭಿವೃದ್ಧಿ ನಿಗಮದಂತೆ ಪೈಪೋಟಿಗೆ ಕಾರಣವಾದರೆ ಅಚ್ಚರಿಯಿಲ್ಲ.

ಬಸವಣ್ಣ ಪ್ರತಿಮೆಯಾಗುವುದಾದರೆ ಕೆಂಪೇಗೌಡರ ಪ್ರತಿಮೆ ಯಾಕೆ ಬೇಡ, ಕನಕದಾಸರ ಪ್ರತಿಮೆ ಯಾಕೆ ಬೇಡ ಎಂಬ ಕೂಗುಗಳೂ ಏಳಬಹುದು. ಬಸವಣ್ಣ ಸಾಮಾಜಿಕ ಪರಿವರ್ತನೆಯ ಹರಿಕಾರ. ದೊಡ್ಡ ಮನುಷ್ಯ. ಕೆಂಪೇಗೌಡ, ಕನಕದಾಸರ ಮಹತ್ವದ ಬಗ್ಗೆ ಯಾರಿಗೂ ಅನುಮಾನವಿಲ್ಲ. ಆದರೆ ರಾಜಕೀಯ ಸಂಕಷ್ಟ ಪರಿಹಾರಕ್ಕೆ ಈ ಮಹಾನುಭಾವರು ಬಳಕೆಯಾಗಬಾರದು ಅಷ್ಟೆ. ಹಾಗೆ ಬಳಕೆಯಾಗುವುದಾದರೂ ಅವರ ವಿಚಾರಧಾರೆಗಳು ಬಳಕೆಯಾಗಬೇಕು.

ಹೀಗೆ ಸಂಕಷ್ಟ ಕಾಲದಲ್ಲಿ ಬಸವಣ್ಣ ನೆನಪಾಗುವುದು ಇದೇ ಮೊದಲೇನೂ ಅಲ್ಲ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಅನುಭವ ಮಂಟಪ ನಿರ್ಮಾಣದ ಕನಸೂ ಹುಟ್ಟಿಕೊಂಡಿತ್ತು. 2018ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿಯೇ ಲಿಂಗಾಯತ ಪ್ರತ್ಯೇಕ ಧರ್ಮದ ಕೂಗು ಕೂಡ ಎದ್ದಿತ್ತು. ಅವು ಕೂಡ ಸಂಕಷ್ಟ ಕಾಲದ ಕ್ರಮಗಳೇ ಆಗಿದ್ದವು. ಈಗಲೂ ನೋಡಿ. ಕಳೆದ ನವೆಂಬರ್ ತಿಂಗಳಿನಲ್ಲಿ ಮುಖ್ಯಮಂತ್ರಿ ಬದಲಾವಣೆಯ ಕೂಗು ಜೋರಾಗಿದ್ದಾಗಲೇ ವೀರಶೈವ ಲಿಂಗಾಯತರನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸುವ ಪ್ರಸ್ತಾಪ ಸಚಿವ ಸಂಪುಟದ ಮುಂದೆ ಬಂದಿತ್ತು. ಆದರೆ ಕಾಣದ ಕೈಗಳ ಎಚ್ಚರಿಕೆಯಿಂದ ಆ ಬಗ್ಗೆ ಯಾವುದೇ ನಿರ್ಣಯ ಕೈಗೊಳ್ಳಲಿಲ್ಲ. ಕೊರೊನಾ ಸಂಕಷ್ಟ ಕಾಲದಲ್ಲಿಯೇ ಈಗಿನ ಮುಖ್ಯಮಂತ್ರಿ ಅನುಭವ ಮಂಟಪ ನಿರ್ಮಾಣಕ್ಕೂ ಮುಂದಾಗಿದ್ದಾರೆ.




ರಾಜಕೀಯ ಸಂಕಷ್ಟ ಬಂದಾಗ ಬಡವರನ್ನು ನೆನಪಿಸಿಕೊಳ್ಳುವುದಕ್ಕೆ ಇನ್ನೂ ಉದಾಹರಣೆಗಳು ಇವೆ. ರಾಜ್ಯದಲ್ಲಿ ಕೊರೊನಾ ಎರಡನೇ ಅಲೆ ವ್ಯಾಪಕವಾಗಿ ಜನ ಸಾಯತೊಡಗಿದಾಗ ನಿಜವಾಗಿಯೂ ರಾಜ್ಯವು ಆರ್ಥಿಕ ಮತ್ತು ಸಾಮಾಜಿಕ ಸಂಕಷ್ಟದಲ್ಲಿ ಇತ್ತು. ಈ ಸಂಕಟಗಳ ನಡುವೆಯೇ ರಾಜ್ಯದಲ್ಲಿ ಯಾವಾಗ ನಾಯಕತ್ವ ಬದಲಾವಣೆಯ ಕೂಗು ಜೋರಾಯಿತೋ ಆಗ ಮುಖ್ಯಮಂತ್ರಿಗಳಿಗೆ ಬಡ ಮತದಾರರು ನೆನಪಾಗಿಬಿಟ್ಟರು. ಬಿಜೆಪಿ ರಾಜ್ಯ ಉಸ್ತುವಾರಿ ಬೆಂಗಳೂರಿಗೆ ಬರುತ್ತಾರೆ ಎಂದು ಗೊತ್ತಾದ ತಕ್ಷಣವೇ ಎಚ್ಚೆತ್ತುಕೊಂಡರು. ಕೊರೊನಾದಿಂದ ನಿಧನರಾದ, ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬದ ಸದಸ್ಯರಿಗೆ ತಲಾ ಒಂದು ಲಕ್ಷ ರೂಪಾಯಿ ಪರಿಹಾರ ನೀಡುವುದಾಗಿ ಘೋಷಿಸಿದರು. ರಾಜ್ಯ ಸರ್ಕಾರ ಈ ಘೋಷಣೆ ಮಾಡುವುದಕ್ಕೆ ಮೊದಲೇ ಕೆಲವು ಶಾಸಕರು ಸ್ವಂತ ಖರ್ಚಿನಲ್ಲಿಯೇ ಇಂತಹ ಪರಿಹಾರ ವಿತರಣೆ ಮಾಡಿಬಿಟ್ಟಿದ್ದರು.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಮ್ಮ ಕ್ಷೇತ್ರದ ವ್ಯಾಪ್ತಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ತಲಾ ಒಂದು ಲಕ್ಷ ರೂಪಾಯಿ ನೀಡಿದರು. ಅದೇ ರೀತಿ ಕೃಷಿ ಸಚಿವ ಬಿ.ಸಿ.ಪಾಟೀಲ್ ತಲಾ ₹ 50,000 ಹಾಗೂ ಕೆ.ಆರ್.ನಗರ ಶಾಸಕ ಸಾ.ರಾ. ಮಹೇಶ್ ತಲಾ ₹25,000 ನೀಡಿದ ಎಷ್ಟೋ ದಿನಗಳ ನಂತರ ರಾಜ್ಯ ಸರ್ಕಾರ ಈ ತೀರ್ಮಾನ ಕೈಗೊಂಡಿತು. ಅತ್ತ ಕೇಂದ್ರ ಸರ್ಕಾರ ಇಂತಹ ಪರಿಹಾರ ಕೊಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟಿಗೆ ಹೇಳಿದೆ. ಆದರೂ ಇಲ್ಲಿ ಘೋಷಣೆ ಹೊರಬಿತ್ತು. ತಮ್ಮ ಸಂಪುಟದ ಸಹೋದ್ಯೋಗಿಗಳು ನಡೆಸುತ್ತಿದ್ದ ಕಾರ್ಯ ಮುಖ್ಯಮಂತ್ರಿಯವರ ಗಮನಕ್ಕೆ ಬಂದಿರಲಿಲ್ಲವೋ ಅಥವಾ ಜಾಣ ಕುರುಡಾಗಿತ್ತೋ ಗೊತ್ತಿಲ್ಲ. ಆದರೆ ಕುರ್ಚಿ ಅಲುಗಾಟ ಆರಂಭವಾದ ತಕ್ಷಣ ರಾಜ್ಯ ಸರ್ಕಾರ ಇಂತಹ ನಿರ್ಣಯ ಕೈಗೊಂಡಿತು. ಬಡವರಿಗೆ ನೆರವು ನೀಡಲು ಕುರ್ಚಿ ಅಲುಗಾಡುವವರೆಗೂ ಕಾಯಬಾರದಿತ್ತು.

ಶಿರಾ ಚುನಾವಣೆಯ ಸಂದರ್ಭದಲ್ಲಿ ದಿಢೀರನೆ ಗೊಲ್ಲ ಅಭಿವೃದ್ಧಿ ನಿಗಮ ಸ್ಥಾಪಿಸಲಾಯಿತು. ಬೆಳಗಾವಿ ಮತ್ತು ಬಸವಕಲ್ಯಾಣ ಉಪಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮರಾಠಾ ಅಭಿವೃದ್ಧಿ ನಿಗಮ ಸ್ಥಾಪನೆಯಾಯಿತು. ಚುನಾವಣೆ ಮುಗಿದಿದೆ. ಫಲಿತಾಂಶ ಹೊರಬಿದ್ದಿದೆ. ಆದರೆ ಈ ನಿಗಮಗಳಿಗೆ ಇನ್ನೂ ಅಧ್ಯಕ್ಷರ ನೇಮಕವಾಗಿಲ್ಲ. ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ಮತ್ತು ಒಕ್ಕಲಿಗ ಅಭಿವೃದ್ಧಿ ನಿಗಮಗಳಿಗೆ ತಕ್ಷಣವೇ ಹಣ ಮಂಜೂರು ಆಯಿತು. ಇದೆಲ್ಲಾ ಏನನ್ನು ತೋರಿಸುತ್ತದೆ?

ಚುರುಮುರಿ



ಕುರ್ಚಿ ಕ್ವಾಟ್ಲೆಗಳು

• ಲಿಂಗರಾಜು ಡಿ.ಎಸ್.

ನಮ್ಮ ಕಾಲೋನೀಲಿ ಕರ್ನಾಟಕ ಸಂಘ ಒಂದದೆ. ಕಾರ್ಯಕಾರಿ ಸಮಿತೀಗೆ ಈ ಸಾರಿ ಕಮಲಕ್ಕನ ಗುಂಪಿನ ರಾಜಾವುಲಿ ಅದ್ಯಕ್ಸರಾಗ್ಯವರೆ. ಹೋದ್ಸಾರಿ ಸೋಣಕ್ಕನ ಗುಂಪಿಂದ ಹುಲಿರಾಮಣ್ಣ ಅದ್ಯಕ್ಸರಾಗಿದ್ರು. ಮೂರನೇ ಗುಂಪು ಯಾತಾವ ಪಸಲು ಚೆನ್ನಾಗದೋ ಆತಾವ್ಕೆ ಸಾಂದರ್ಭಿಕವಾಗಿ ಕಡದೋಯ್ತದೆ.

'ಹಾಲಿ ಅದ್ಯಕ್ಸರು ನಮಗೆ ಬ್ಯಾಡಿ! ನಮ್ಮ ಕೆಲಸ ಒಂದೂ ಆಯ್ತಿಲ್ಲ. ಎಲ್ಲಾ ಅದ್ಯಕ್ಸರ ಮಗಂದೇ ಯವಾರ. ನಮ್ಮುನ್ನ ಕೆಲಸಕ್ಕೆ ಮಾತ್ರ ಕರೀತರೆ, ಊಟಕ್ಕೆ ಮರೆತೋಯ್ತರೆ' ಅಂತ ಒಂದಷ್ಟು ಜನ ಕ್ಯಾತೆ ತಗದುದ್ರು. ಇವುರಿಗೆಲ್ಲಾ ಒಳ್ಳೇ ಬುದ್ದಿ ಬರಲಿ ಅಂತ ರಾಜಾವುಲಿ ಏಡ್ಯೆಕ್ಳೂ ದೊಡ್ಡ ದೇವರಿಗೆ ಹಣ್ಣು-ಕಾಯಿ ಮಾಡ್ಸಕ್ಕೋಗಿದ್ದೋ. 'ದೇವರು ಬಲಗಡೆ ಹೂವು ಕೊಟ್ಟದೆ. ಇನ್ನೆರಡು ವರ್ಸ ಅಪ್ಪಾರೆ ಅದ್ಯಕ್ಸರು' ಅಂದ್ಕಂದು ಚರುಪು ಹಂಚತಾವೆ.

'ಹುಲಿರಾಮಣ್ಣನೇ ಭಾವೀ ಅಧ್ಯಕ್ಸರು. ನಿಮಗಿಷ್ಟ ಆದ್ರೆ ಲೈಕ್ ಮಾಡಿ, ಶೇರ್ ಮಾಡಿ' ಅಂತ ಮರೀಜಣ್ಣ 'ನಮ್ಮ ಹುಲಿಯಾ!' ಅನ್ನೋ ವಾಟ್ಸಪ್ ಗ್ರೂಪ್ ಮಾಡಿತ್ತು. ಈ ಪುಗಸಟ್ಟೆ ಪಾರುಪತ್ಯ ಕಂಡ್ರೂ ಕಾಣ್ದಂಗೆ ಹೊಸ ಸೊಸೆ ಥರ ಹುಲಿರಾಮಣ್ಣ ನುಲೀತಾ 'ಸುಮ್ಮಗಿರ್ರಪ್ಪಾ, ಹಿಂಗೆಲ್ಲಾ ಮಾಡಿದ್ರೆ ನನಗೆ ನಾಚ್ಕೆಯಾಯ್ತದೆ!' ಅಂದ್ರೂ ಅವರ ಐಲ್ವಾನುಗಳು ಸುಮ್ಮಗಾಗಿಲ್ಲ. 'ಪರಮೀನೇ ಮುಂದ್ಲ ಅದ್ಯಕ್ಸನಾಗ್ಬೇಕು' ಅಂಬೋದು ಇನ್ನೊಂದು ಗ್ರೂಪಂತೆ. 'ನಾನೂ ಇವ್ನಿ ಕಯ್ಯಾ!' ಅಂತ ವೃದ್ಧಾಶ್ರಮದಲ್ಲಿರೋ ಹಳೇ ಪಂಟ್ರುಗಳೆಲ್ಲಾ ಸೊಂಟಕ್ಕೆ ಎಣ್ಣೆ ನೀವಿಕ್ಯಂದು ಹಲ್ಲುಸೆಟ್ಟು ಇಕ್ಕ್ಯಂದು ಕೂತವಂತೆ.

'ಕಾಲೋನೀಲಿ ಅದ್ಯಕ್ಸರಾಗಕೆ ಯೇಗ್ತೆ ಇರೋರು ಭಾಳಾ ಜನವ್ರೆ. ನಾವೆಲ್ಲಾ ಒಟ್ಟಾಗಿ ಎಲೆಕ್ಷನ್ನಿಗೋಯ್ತಿವಿ' ಅಂದ ಡಿಕೆಸಣ್ಣ ಹೊಸಾ ಕುರ್ಚಿ ಮಾಡಕಾಕ್ಯದಂತೆ.

'ಸಂಘದ ಎಲೆಕ್ಸನ್ನಿಗೆ ಇನ್ನೂ ಎರಡೋರ್ಸದೆ, ಇವ್ಯಾಕೆ ಆತುರಗೆಟ್ಟ ಆಂಜನೇಯನ ಥರಾ ಆಡ್ತಾವೆ!' ಅಂತ ಜನೆಲ್ಲಾ ನಗಾಡಿಕ್ಯತಿದ್ರೂ ಕಮಲಕ್ಕ, ಸೋಣಕ್ಕನ ಹುಡ್ರಿಗೆ ಕ್ಯಾಮೆಗಿಂತಾ ಕುರ್ಚಿ ಸೊಕ್ಕಲುತನವೇ ಜಾಸ್ತಿಯಾಗ್ಯದೆ!

ಸಂಗತ

ಶೈಕ್ಷಣಿಕ ಸಂಶೋಧನೆಯ ವರ್ತಮಾನ

ಪಿಎಚ್‌.ಡಿ ಪದವಿಗಾಗಿ ತಾವು ನಡೆಸುವ ಸಂಶೋಧನಾ ಕೆಲಸಕ್ಕಿಂತ, ತಮ್ಮ ಗೈಡ್ ಮನಃಸ್ಥಿತಿ ಎಂತಹದ್ದು ಎಂಬುದೇ ಅಭ್ಯರ್ಥಿಗಳಿಗೆ ಹೆಚ್ಚು ಚಿಂತೆಯ ವಿಷಯವಾಗಿದೆ!

• ಎಚ್.ಕೆ.ಶರತ್

ರಾಜ್ಯದ ವಿಶ್ವವಿದ್ಯಾಲಯವೊಂದರಲ್ಲಿ ಪಿಎಚ್.ಡಿ ಪದವಿಗೆ ದಾಖಲಾಗಲು ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಳ್ಳುವ ಸಲುವಾಗಿ ತಮ್ಮದೇ ವಾಟ್ಸ್‌ಆ್ಯಪ್ ಗುಂಪೊಂದನ್ನು ರಚಿಸಿಕೊಂಡಿದ್ದಾರೆ. ಇತ್ತೀಚೆಗೆ ಆ ಗುಂಪಿನಲ್ಲಿ ನಡೆದ ಚರ್ಚೆ, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಇಂದಿಗೂ ಚಾಲ್ತಿಯಲ್ಲಿರುವ ಬಿಕ್ಕಟ್ಟೊಂದರತ್ತಲೇ ಬೊಟ್ಟು ಮಾಡುತ್ತಿತ್ತು.


ಈ ಬಾರಿ ಸಂಶೋಧನಾರ್ಥಿಗಳಾಗಿ ಪಿಎಚ್.ಡಿಗೆ ಪ್ರವೇಶ ಪಡೆಯುವವರಿಗೆ ತಮಗೆ ಬೇಕಾದ ಮಾರ್ಗದರ್ಶಕರನ್ನು (ಗೈಡ್) ಆಯ್ಕೆ ಮಾಡಿಕೊಳ್ಳಲು ಅವಕಾಶ ಇದೆಯೋ ಇಲ್ಲವೋ ಎನ್ನುವ ಕುರಿತು ಶುರುವಾದ ಚರ್ಚೆ, ಒಂದು ವೇಳೆ ವಿಶ್ವವಿದ್ಯಾಲಯವೇ ಗೈಡ್‌ಗಳನ್ನು ಆಯ್ಕೆ ಮಾಡಿದರೆ ಭವಿಷ್ಯದಲ್ಲಿ ತಾವು ಎದುರಿಸಬೇಕಿರುವ ಸವಾಲುಗಳತ್ತ ವಾಲಿತು. ಕೆಲವರು, ಹಾಗೇನಾದರೂ ಆದಲ್ಲಿ ಪಿಎಚ್.ಡಿ ಮುಗಿಸುವುದೇ ಕಷ್ಟವೆಂದೂ, ಕೆಲ ಗೈಡ್‌ಗಳು ಲಕ್ಷಗಟ್ಟಲೆ ಹಣಕ್ಕೆ ಬೇಡಿಕೆ ಸಲ್ಲಿಸುತ್ತಾರೆ ಅಂತಲೂ ಅಳಲು ತೋಡಿಕೊಳ್ಳತೊಡಗಿದರು. ಹಾಗೊಂದು ವೇಳೆ ಸಂಶೋಧನಾರ್ಥಿಗಳಿಗೆ ಗೈಡ್ ಆರಿಸಿಕೊಳ್ಳುವ ಅವಕಾಶ ಕಲ್ಪಿಸದೇ ಹೋದಲ್ಲಿ ಎಲ್ಲರೂ ಒಗ್ಗಟ್ಟಾಗಿ ಇದನ್ನು ವಿರೋಧಿಸಬೇಕೆನ್ನುವ ವಾದವನ್ನು ಕೆಲವರು ಮಂಡಿಸಿದರು. ಇದಕ್ಕೆ ಆ ಗುಂಪಿನಲ್ಲಿದ್ದ ಹಲವರು ಸಮ್ಮತಿ ಸೂಚಿಸಿದರು.

ಈ ನಡುವೆ, ಯಾವುದೇ ಪಿಎಚ್.ಡಿ ಮಾರ್ಗದರ್ಶಕರೊಂದಿಗೂ ಸಂಪರ್ಕ ಹೊಂದಿರದ ಅಭ್ಯರ್ಥಿಯೊಬ್ಬರು, 'ವಿಶ್ವವಿದ್ಯಾಲಯವೇ ಗೈಡ್ ಆಯ್ಕೆ ಮಾಡಿಕೊಟ್ಟರೆ ತಪ್ಪೇನು? ಗೈಡ್ ಆಗಲು ಅರ್ಹತೆ ಹೊಂದಿರುವ ಪ್ರಾಧ್ಯಾಪಕರ ಪರಿಚಯ ಇಲ್ಲದ ನಮ್ಮಂತಹವರು ಏನು ಮಾಡಬೇಕು' ಅಂತೆಲ್ಲ ಪ್ರಶ್ನಿಸಿದರು. 'ನಿಮಗೆ ಬೇಕಿದ್ದರೆ ವಿಶ್ವವಿದ್ಯಾಲಯವೇ ಗೈಡ್ ಹುಡುಕಿಕೊಡುತ್ತೆ. ಈಗಾಗಲೇ ಗೈಡ್ ಹುಡುಕಿಕೊಂಡಿರುವ ನಮಗೆ ಆಯ್ಕೆ ಅವಕಾಶ ನೀಡಲಿ' ಎಂದು ಅವರನ್ನು ಸಮಾಧಾನಪಡಿಸಲು ಕೆಲವರು ಯತ್ನಿಸಿದರು.

ಚರ್ಚೆಯಲ್ಲಿ ತೊಡಗಿದ್ದ ಬಹುತೇಕರು ರಾಜ್ಯದ ವಿವಿಧ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿರುವವರು ಎನ್ನುವುದು ಇಲ್ಲಿ ಗಮನಾರ್ಹ. ಉಪನ್ಯಾಸಕರಿಗೇ ಅಪರಿಚಿತ ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸುವುದೆಂದರೆ, ಸಮಸ್ಯೆಗಳನ್ನು ತಾವಾಗೇ ಆಹ್ವಾನಿಸಿಕೊಂಡಂತೆ ಅನಿಸುತ್ತಿರುವುದು ನಮ್ಮ ಶೈಕ್ಷಣಿಕ ವಲಯದ ಆರೋಗ್ಯ ಹೇಗಿದೆ ಎಂಬುದಕ್ಕೆ ಹಿಡಿದ ಕನ್ನಡಿ.

ಗೈಡ್ ಆಯ್ಕೆಯನ್ನು ವಿಶ್ವವಿದ್ಯಾಲಯ ಮಾಡಬೇಕೋ ಅಥವಾ ಸ್ವತಃ ಸಂಶೋಧನಾರ್ಥಿಗೇ ಆಯ್ಕೆ ಸ್ವಾತಂತ್ರ್ಯ ನೀಡಬೇಕೋ ಎಂಬುದನ್ನು ನಿರ್ಧರಿಸಲು ಮಾನದಂಡ ಆಗಬೇಕಿರುವುದು ಸಂಶೋಧನಾ ಗುಣಮಟ್ಟವಲ್ಲವೇ? ವಿಶ್ವವಿದ್ಯಾಲಯವೇ ಗೈಡ್ ಆಯ್ಕೆ ಮಾಡಿದರೆ ತಮ್ಮ ಸಂಶೋಧನಾ ಗುಣಮಟ್ಟ ಕುಸಿಯಲಿದೆ ಎನ್ನುವ ಆತಂಕವನ್ನು ಸಂಶೋಧನಾರ್ಥಿಗಳ ವಾಟ್ಸ್‌ಆ್ಯಪ್ ಗುಂಪಿನ ಯಾವೊಬ್ಬ ಸದಸ್ಯರೂ ವ್ಯಕ್ತಪಡಿಸದೇ ಇದ್ದುದು ಇಲ್ಲಿ ಗಮನಾರ್ಹ.

ಪಿಎಚ್.ಡಿ ಪದವಿ ಪೂರೈಸಲು ತಾವು ನಡೆಸುವ ಸಂಶೋಧನಾ ಕೆಲಸಕ್ಕಿಂತ, ಮಾರ್ಗದರ್ಶಕರ ಮನಃಸ್ಥಿತಿ ಎಂತಹದ್ದು ಎಂಬುದೇ ನಿರ್ಣಾಯಕ ಎನ್ನುವ ಅಭಿಪ್ರಾಯ ಬದಲಿಸಲು ಸಾಧ್ಯವಾಗುವಂತಹ ಸುಧಾರಣಾ ಕ್ರಮಗಳನ್ನು ವಿಶ್ವವಿದ್ಯಾಲಯಗಳು ಕೈಗೊಳ್ಳಬೇಕಲ್ಲವೇ? ಅಭ್ಯರ್ಥಿಗಳು ಸಂಶೋಧನಾ ಕೆಲಸಕ್ಕಿಂತ ತಮ್ಮ ಗೈಡುಗಳ ವೈಯಕ್ತಿಕ ಕೆಲಸವನ್ನೇ ಹೆಚ್ಚು ಮಾಡಿ ಪಿಎಚ್.ಡಿ ಪೂರೈಸಿರುವ ನಿದರ್ಶನಗಳು ಅನೇಕ ಕ್ಯಾಂಪಸ್‌ಗಳಲ್ಲಿ ಹಾಸುಹೊಕ್ಕಾಗಿವೆ.



ನಮ್ಮ ವಿಶ್ವವಿದ್ಯಾಲಯಗಳಲ್ಲಿನ ಸಂಶೋಧನಾ ಗುಣಮಟ್ಟ ಸುಧಾರಣೆಯಾಗದಿದ್ದರೂ ಪೇಟೆಂಟ್‌ಗೆ ಅರ್ಜಿ ಸಲ್ಲಿಸುವವರ ಸಂಖ್ಯೆ ಹೆಚ್ಚಾಗಿದೆ. ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣ ನೀಡುವ ಕಾಲೇಜುಗಳ ಗುಣಮಟ್ಟದ ಮೌಲ್ಯಮಾಪನ ನಡೆಸುವ ವಿವಿಧ ಸಂಸ್ಥೆ ಹಾಗೂ ಮಂಡಳಿಗಳು, ಅಲ್ಲಿ ಕಾರ್ಯ ನಿರ್ವಹಿಸುವ ಅಧ್ಯಾಪಕರ ಬಳಿ ಎಷ್ಟು ಪೇಟೆಂಟುಗಳಿವೆ ಎಂಬುದನ್ನೂ ಮುಖ್ಯ ಮಾನದಂಡವಾಗಿ ಪರಿಗಣಿಸುತ್ತಿವೆ. ಹೀಗಾಗಿ, ಸಂಶೋಧನೆಗಳಲ್ಲಿ ತೊಡಗಿರುವವರ ಮೇಲೆ ಪೇಟೆಂಟ್‌ಗೆ ಅರ್ಜಿ ಸಲ್ಲಿಸಬೇಕೆನ್ನುವ ಒತ್ತಡ ಹೇರಲಾಗುತ್ತಿದೆ. ವೇತನ ಹೆಚ್ಚಳ, ಬಡ್ತಿ ಮತ್ತು ಇರುವ ಕೆಲಸ ಉಳಿಸಿಕೊಳ್ಳುವ ಸಲುವಾಗಿ, ಆಸಕ್ತಿ ಇಲ್ಲದಿದ್ದರೂ ಪಿಎಚ್.ಡಿ ಪೂರೈಸಬೇಕಿರುವ ಒತ್ತಡಕ್ಕೆ ಸಿಲುಕಿದ್ದ ಅಧ್ಯಾಪಕರಿಗೆ ಈಗ ಪೇಟೆಂಟ್ ಹೊಂದುವುದು ಕೂಡ ಮುಖ್ಯವಾಗತೊಡಗಿದೆ.

ಪಿಎಚ್.ಡಿ ಸಂಶೋಧನಾರ್ಥಿಗಳ ವಾಟ್ಸ್‌ಆ್ಯಪ್ ಗುಂಪಿನಲ್ಲಿ ಕೆಲವರು, 'ನಾವು ಪೇಟೆಂಟ್‌ಗೆ ಅರ್ಜಿ ಸಲ್ಲಿಸುತ್ತಿದ್ದೇವೆ. ಅರ್ಜಿ ಶುಲ್ಕದಲ್ಲಿ ಒಂದು ಪಾಲು ಭರಿಸಲು ಸಿದ್ಧರಿರುವವರು ನಮ್ಮೊಂದಿಗೆ ಕೈಜೋಡಿಸಬಹುದು' ಎನ್ನುವ ಆಹ್ವಾನವನ್ನು ಆಗಾಗ ನೀಡುತ್ತಿರುತ್ತಾರೆ.

ಉನ್ನತ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಪೂರಕವಾಗಿ ನಡೆಯಬೇಕಿದ್ದ ಸಂಶೋಧನಾ ಚಟುವಟಿಕೆಗಳ ದಿಕ್ಕು ದೆಸೆಯನ್ನು ವೇತನ ಹೆಚ್ಚಳ ಮತ್ತು ಬಡ್ತಿ ಎಂಬ ಬಾಹ್ಯ ಒತ್ತಡಗಳೇ ನಿರ್ಧರಿಸುತ್ತಿರುವುದು ಮುಂದುವರಿದಿದೆ. ಇಂಥ ನಿರಾಸಕ್ತ ಸಂಶೋಧನಾರ್ಥಿಗಳ ಅಗತ್ಯ ಪೂರೈಸಲೆಂದೇ ಹೊಸ ರಿಸರ್ಚ್ ಕನ್‌ಸಲ್ಟೆನ್ಸಿಗಳು ಹುಟ್ಟಿಕೊಳ್ಳುತ್ತಿವೆ. ಅವರು ಸೂಚಿಸುವ ಮೊತ್ತ ಪಾವತಿಸಿದರೆ ಸಂಶೋಧನಾ ವಿಷಯದ ಆಯ್ಕೆಯಿಂದ ಹಿಡಿದು ಪ್ರಬಂಧ ಮಂಡನೆಯವರೆಗೆ ಕೈಹಿಡಿದು ನಡೆಸುವುದಾಗಿ ಭರವಸೆ ನೀಡುತ್ತಿವೆ.

ದುಡ್ಡು ಕೊಟ್ಟು ಪಡೆಯಬಹುದಾದದ್ದು ಗೌರವ ಡಾಕ್ಟರೇಟ್ ಒಂದೇ ಅಲ್ಲ, ಪಿಎಚ್.ಡಿ. ಪದವಿಯನ್ನೂ ಕೊಂಡುಕೊಳ್ಳಬಹುದಾದ ಸನ್ನಿವೇಶ ಎಂದೋ ನಿರ್ಮಾಣವಾಗಿದೆ. ಇಂದು ಅದರ ವ್ಯಾಪ್ತಿ ಮತ್ತಷ್ಟು ವಿಸ್ತಾರಗೊಳ್ಳುತ್ತಿದೆ.

ವಾಚಕರ ವಾಣಿ

ಬಿಗ್ ಬಾಸ್: ಅಸಹಜ ಟಾಸ್ಕ್ ತರವೇ?

ಎರಡನೆಯ ಇನಿಂಗ್ಸ್ ಎಂಬ ಹೆಸರಿನಲ್ಲಿ ಟಿ.ವಿ ಚಾನೆಲ್‌ವೊಂದರಲ್ಲಿ 'ಬಿಗ್ ಬಾಸ್' ಕಾರ್ಯಕ್ರಮವು ಮತ್ತೆ ಪ್ರಾರಂಭವಾಗಿದೆ. ನಾಲ್ಕೈದು ದಿನಗಳ ಕಾರ್ಯಕ್ರಮವನ್ನು ನೋಡಿದ ನಂತರ, ಎರಡನೆಯ ಇನಿಂಗ್ಸ್ ಬೇಡವಾಗಿತ್ತೇನೋ ಎನಿಸುತ್ತದೆ. ಅಗಾಧ ಇಚ್ಛಾಶಕ್ತಿಯಿದ್ದರೆ, ಅಸಾಧ್ಯವೆಂದು ತೋರುವ ಕಾರ್ಯಗಳೂ ಸಾಧ್ಯ ಎಂಬುದನ್ನು ಒಂದು 'ಕುರ್ಚಿ' ಟಾಸ್ಕ್ ತೋರಿಸಿತು. ಮಲ-ಜಲ ಬಾಧೆಗಳನ್ನು ಸಹಿಸುತ್ತಾ ಅನ್ನಾಹಾರ-ನಿದ್ರೆಯೂ ಇಲ್ಲದೆ, ಕೊನೆಗೆ ನೀರನ್ನೂ ಕುಡಿಯದೆ, ವ್ಯಕ್ತಿಯೊಬ್ಬ 38 ಗಂಟೆಗಳ ಕಾಲ ಏಳದೆ, ಕುರ್ಚಿಯ ಮೇಲೆ ಕುಳಿತದ್ದು ಆಶ್ಚರ್ಯ ಹಾಗೂ ವಿಷಾದವನ್ನುಂಟುಮಾಡಿತು. ಇಂತಹ ಟಾಸ್ಕ್‌ಗಳನ್ನು ಸ್ಪರ್ಧಿಗಳಿಗೆ ನೀಡುವುದು ಎಷ್ಟು ಸರಿ? ಆಮರಣಾಂತ ಉಪವಾಸ ಮಾಡುವವರೂ ನೀರು ಕುಡಿಯುತ್ತಾರೆ, ಮಲ-ಜಲಬಾಧೆಗಳನ್ನು ಪರಿಹರಿಸಿಕೊಳ್ಳುತ್ತಾರೆ; ಆದರೆ, ಇಲ್ಲಿ? ಇಂತಹ ಕಾರ್ಯಗಳು ಬಹುಕಾಲಿಕ ಆರೋಗ್ಯ ಸಮಸ್ಯೆಗಳನ್ನು ತರುವುದಿಲ್ಲವೇ? ಇದೇ ಆವೃತ್ತಿಯ ಮೊದಲ ಭಾಗದಲ್ಲಿ, 18 ಗಂಟೆಗಳ ಕಾಲ ನೀರಿನ ಮಧ್ಯೆ ನಿಂತಿದ್ದ ತರುಣಿಯರ ಬಗ್ಗೆ ಆತಂಕವಾಗಿ, ಸ್ಪರ್ಧಿಗಳಲ್ಲಿ ಒಬ್ಬರಾಗಿದ್ದ ಶಂಕರ್ ನೀರಿಗೆ ಧುಮುಕಿ ಆ ಪಂದ್ಯವನ್ನು ಅರ್ಧಕ್ಕೇ ನಿಲ್ಲಿಸಿದ್ದರು.

ವಿದ್ವತ್ತಿಗೂ ಸಂಸ್ಕೃತಿಗೂ ಏನೂ ಸಂಬಂಧವಿಲ್ಲವೆಂದು ಕಾಣುತ್ತದೆ. ಭಾನುವಾರದ 'ಪಂಚಾಯಿತಿ'ಯಲ್ಲಿ ಮಹಾನ್ ವಿದ್ವಾಂಸರೊಬ್ಬರು, ಸುಮಾರು ಹತ್ತು ನಿಮಿಷಗಳ ಕಾಲ ಉಸಿರುಬಿಡದೆ, ಮತ್ತೊಬ್ಬ ಸ್ಪರ್ಧಿಯ ಚಾರಿತ್ರ್ಯಹನನವನ್ನು ಅತ್ಯಂತ ಅಸಹ್ಯವಾಗಿ ನೆರವೇರಿಸಿದರು. ಕಾರಣ: 'ಬಲಿ'ಯಾದ ಹಳ್ಳಿಮುಕ್ಕನಿಗೆ ಯಾವ ವಿಶ್ವವಿದ್ಯಾಲಯದ ಪದವಿಯೂ ಇಲ್ಲ, ಇಂಗ್ಲಿಷ್ ಬರುವುದಿಲ್ಲ ಮತ್ತು ಕನ್ನಡದ ಆರೇಳು ಭಾಷಾಪ್ರಭೇದಗಳ ಹಾಗೂ ಅವುಗಳಲ್ಲಿ ಬರುವ ಪದಗಳ ವಿಶಿಷ್ಟ ಧ್ವನಿ ಅವರಿಗೆ ಗೊತ್ತಿಲ್ಲ (ನನಗೂ ಗೊತ್ತಿಲ್ಲ). ಇಷ್ಟು ಕಾರಣಗಳು ಸಾಕಲ್ಲವೆ? ಅವರನ್ನು ಕಾರ್ಯಕ್ರಮದ ನಿರೂಪಕ ಸುದೀಪ್ ತಡೆಯಲಿಲ್ಲ; ಅನುಚಿತವಾದರೂ ಅವರು ಮಧ್ಯಪ್ರವೇಶಿಸಿ, 'ಇದು ನ್ಯಾಯಾಲಯವಲ್ಲ' ಎಂದು ಹೇಳಬಹುದಿತ್ತಲ್ಲವೆ? ಹೇಳಬೇಕಿತ್ತಲ್ಲವೆ? ಇಂತಹ ಕಾರ್ಯಕ್ರಮಗಳಿಗೂ ಸೆನ್ಸಾರ್ ಬೋರ್ಡ್ ಇರಬೇಕೆ?

ಸಿ.ಎನ್.ರಾಮಚಂದ್ರನ್, ಬೆಂಗಳೂರು

ತುರ್ತುಪರಿಸ್ಥಿತಿ: ತಾತ್ವಿಕ ವಿಶ್ಲೇಷಣೆ

'ತುರ್ತುಪರಿಸ್ಥಿತಿಯ ಹಿಂದೆ- ಮುಂದೆ' ಎಂಬ ವಿಷಯ ಕುರಿತ 'ಪ್ರಜಾವಾಣಿ'ಯ ಫೇಸ್‌ಬುಕ್ ನೇರ ಸಂವಾದದಲ್ಲಿ ನಾನು ವ್ಯಕ್ತಪಡಿಸಿದ ಒಂದು ಅಭಿಪ್ರಾಯವನ್ನು ಮೋದೂರು ಮಹೇಶಾರಾಧ್ಯ ಅವರು ವಿತಂಡವಾದ ಎಂದಿದ್ದಾರೆ (ವಾ.ವಾ., ಜೂನ್ 28). ಬಹುಶಃ ಅವರು ಈ ಸಂವಾದದ ಬಗ್ಗೆ ಪತ್ರಿಕೆಯ ಸಂಕ್ಷಿಪ್ತ ವರದಿಯನ್ನು ಆಧರಿಸಿ ಈ ಅಭಿಪ್ರಾಯಕ್ಕೆ ಬಂದಿರುವಂತಿದೆ. ಸುಮಾರು ಒಂದೂಕಾಲು ಗಂಟೆಯ ಸಂವಾದವನ್ನು ಪೂರ್ಣ ಗಮನಿಸಿದರೆ ಒಟ್ಟು ಚಿತ್ರಣ ದೊರಕುತ್ತದೆ. ನಾನು ಅಂದಿನ ಚರ್ಚೆಯಲ್ಲಿ ಕರಾಳ ಮತ್ತು ನಿರಾಳ ಹಾಗೂ ಸ್ವಾತಂತ್ರ್ಯ ಮತ್ತು ಸಮಾನತೆಗಳ ನಡುವೆ ಉಂಟಾಗುತ್ತಿರುವ ವೈರುಧ್ಯಗಳನ್ನು ತಾತ್ವಿಕವಾಗಿ ವಿಶ್ಲೇಷಿಸಿದೆ. ಜನರ ನಿರಾಳತೆಯನ್ನು ತುರ್ತುಪರಿಸ್ಥಿತಿ ಸಂದರ್ಭದ ಕರ್ನಾಟಕದ ಸನ್ನಿವೇಶವನ್ನು ಗಮನಿಸಿ ಹೇಳುತ್ತಿರುವುದಾಗಿ ಸ್ಪಷ್ಟಪಡಿಸಿದೆ. ತುರ್ಕ್‌ಮನ್ ಗೇಟ್ ಮುಂತಾದ ಕರಾಳ ಕೃತ್ಯಗಳನ್ನು ಸ್ಪಷ್ಟ ಮಾತುಗಳಲ್ಲಿ ಖಂಡಿಸಿದೆ. ಆದರೆ ಅದೇ ಸನ್ನಿವೇಶದಲ್ಲಿ 'ಮೂಲಭೂತ ಅಗತ್ಯಗಳನ್ನು ಪಡೆದ ಜನಸಾಮಾನ್ಯರು' ಮೂಲಭೂತ ಹಕ್ಕು ಮತ್ತು ಸ್ವಾತಂತ್ರ್ಯದ ಬಗ್ಗೆ ಯಾಕೆ ಪ್ರಶ್ನೆ ಎತ್ತಲಿಲ್ಲ ಎಂಬ ವೈರುಧ್ಯವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವೆಂದು ಹೇಳಿದೆ. ಜೊತೆಗೆ, ಅಂದು ಅನೇಕ ದಮನಶೀಲ ಕಾರ್ಯಗಳಿಗೆ ಕಾರಣರಾದ ವಿ.ಸಿ.ಶುಕ್ಲಾ, ಜಗಮೋಹನ್‌ರಂಥವರನ್ನು ಆನಂತರ ತುರ್ತುಪರಿಸ್ಥಿತಿ ವಿರೋಧಿಸಿದವರು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವುದು ರಾಜಕೀಯ ನೈತಿಕತೆಯೆ ಎಂದೂ ಪ್ರಶ್ನಿಸಿದೆ.

ಸ್ವಾತಂತ್ರ್ಯ ಮತ್ತು ಸಮಾನತೆಗಳ ನಡುವಿನ ಅಂತರವನ್ನು ಹೋಗಲಾಡಿಸಿ ಒಂದಾಗಿಸುವ ಸವಾಲು ನಮ್ಮ ಮುಂದಿದೆ, ಒಟ್ಟಾರೆ ತುರ್ತುಪರಿಸ್ಥಿತಿಯ ಕಾಲದ ವೈರುಧ್ಯಗಳ ಮೂಲಕ ಭಾರತೀಯ ರಾಜಕಾರಣವನ್ನು ಅರ್ಥೈಸಿಕೊಳ್ಳುವ ಅಗತ್ಯವಿದೆಯೆಂಬುದು ನನ್ನ ಅಭಿಮತವಾಗಿತ್ತು. ಇದೆಲ್ಲವನ್ನೂ ವಿತಂಡವಾದ ಎನ್ನುವುದಾದರೆ ಅಂತಹ ಅಭಿಪ್ರಾಯ ತಾಳಲು ಅವರು ಸ್ವತಂತ್ರರು. ಆದರೂ ಅವರು ಅರ್ಥ ಮಾಡಿಕೊಳ್ಳುತ್ತಾರೆಂಬ ನಂಬಿಕೆ ನನ್ನದು.

ಬರಗೂರು ರಾಮಚಂದ್ರಪ್ಪ, ಬೆಂಗಳೂರು

ಕ್ರಮೇಣ ಕಡಿಮೆಯಾಗಲಿದೆ ವಿದ್ಯುತ್ ದರ

ವಿದ್ಯುತ್ ಖರೀದಿ ದರ ಕಡಿಮೆಯಾಗಿದ್ದರೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ವಿದ್ಯುತ್ ದರ ಹೆಚ್ಚಿಸಿ ಗ್ರಾಹಕರಿಗೆ ಬಿಸಿ ಮುಟ್ಟಿಸುತ್ತಿದೆ ಎಂದು ಮಲ್ಲಿಕಾರ್ಜುನ ಹೆಗ್ಗಳಗಿ ಆಕ್ಷೇಪಿಸಿದ್ದಾರೆ (ಸಂಗತ, ಜೂನ್ 26). ಕರ್ನಾಟಕವು ಗ್ರಾಹಕರ ವಿದ್ಯುತ್ ಬೇಡಿಕೆ ಪೂರೈಸಲು ವಿದ್ಯುತ್ ಮಾರುಕಟ್ಟೆಯಿಂದ ವಿದ್ಯುತ್ ಖರೀದಿಸುತ್ತಿದೆ. 2018ರ ನಂತರ ಸೇರ್ಪಡೆಯಾದ ನವೀಕರಿಸಬಹುದಾದ ಇಂಧನದಿಂದಾಗಿ ವಿದ್ಯುತ್ ಕ್ಷೇತ್ರದಲ್ಲಿ ಸಂಪೂರ್ಣ ಸ್ವಾವಲಂಬನೆ ಸಾಧಿಸಲಾಗಿದೆ. ನವೀಕರಿಸಬಹುದಾದ ಇಂಧನವನ್ನು ಪೂರ್ಣವಾಗಿ ಬಳಸಲು ಇನ್ನಿತರ ಮೂಲದ ವಿದ್ಯುತ್‌ನ್ನು ಕಡಿತಗೊಳಿಸಿ, ಮೂಲ ಒಪ್ಪಂದಗಳ ಪ್ರಕಾರ ಅವುಗಳಿಗೆ ಸ್ಥಿರ ದರ ಪಾವತಿ ಮಾಡಲಾಗುತ್ತದೆ. ಬೇಡಿಕೆ ನೀಗಲು ಶಾಖೋತ್ಪನ್ನ ಹಾಗೂ ಇನ್ನಿತರ ಮೂಲಗಳಿಂದ ಬಹು ಹಿಂದೆ ಮಾಡಿಕೊಂಡಿದ್ದ 25 ವರ್ಷಗಳಷ್ಟು ದೀರ್ಘಕಾಲದ ವಿದ್ಯುತ್ ಖರೀದಿ ಒಪ್ಪಂದದ ದರವು ಈಗಿನ ನವೀಕರಿಸಬಹುದಾದ ಮೂಲದ ಇಂಧನ ದರಕ್ಕೆ ಹೋಲಿಸಿದರೆ ಹೆಚ್ಚೆನಿಸುತ್ತದೆ. ನವೀಕರಿಸಬಹುದಾದ ಮೂಲದ ಇಂಧನದ ಪ್ರಸರಣಾ ಜಾಲದ ವಿಸ್ತರಣೆಗೆ ಅಧಿಕ ಬಂಡವಾಳ ಹೂಡಲಾಗಿದೆ. ಇದು ಆರಂಭಿಕ ಹಂತದಲ್ಲಿ ಅಧಿಕವೆನಿಸಿದರೂ ದೀರ್ಘಕಾಲದಲ್ಲಿ ಇದರಿಂದ ಬಹಳಷ್ಟು ಪ್ರಯೋಜನವಾಗಲಿದೆ.

ದೀರ್ಘಕಾಲದ ವಿದ್ಯುತ್ ಖರೀದಿ ಒಪ್ಪಂದಗಳ ಅವಧಿ ಮುಗಿದ ಬಳಿಕ ಕಡಿಮೆ ದರದ ನವೀಕರಿಸಬಹುದಾದ ಇಂಧನ ಖರೀದಿಸಿದಲ್ಲಿ ಕ್ರಮೇಣವಾಗಿ ವಿದ್ಯುತ್ ದರ ಕಡಿಮೆಯಾಗಲಿದೆ. ಗ್ರಾಹಕರ ಅಗತ್ಯಕ್ಕೆ ಅನುಗುಣವಾಗಿ ವಿದ್ಯುತ್ ಪೂರೈಕೆಯನ್ನು ನಿಭಾಯಿಸಲು ಈ ಕ್ಷೇತ್ರದಲ್ಲಿಯ ಹೂಡಿಕೆ ಪ್ರಮಾಣ ನಿರಂತರವಾಗಿ ಇರಬೇಕಾಗಿರುತ್ತದೆ. ವಿದ್ಯುತ್ ಸರಬರಾಜು ಕಂಪನಿಗಳು ₹ 1ರಿಂದ ₹ 1.5ರವರೆಗಿನ ದರ ಪರಿಷ್ಕರಣೆ ಕೇಳಿದ್ದರೂ ಗ್ರಾಹಕರ ಹಿತದೃಷ್ಟಿಯಿಂದ ಆಯೋಗವು ಸ್ವಲ್ಪ ಮಟ್ಟಿನ (ಅಂದರೆ ಪ್ರತೀ ಯೂನಿಟ್‌ಗೆ ಕೇವಲ 30 ಪೈಸೆ) ವಿದ್ಯುತ್ ದರ ಪರಿಷ್ಕರಣೆಯನ್ನು ಮಾಡಿದೆ.

ಜಿ.ಕುಮಾರ್ ನಾಯಕ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಈಕ್ವಿಟಿ: ಭಯ ತೊರೆದರೇ ಸಣ್ಣ ಹೂಡಿಕೆದಾರರು?

• ವಿಜಯ್ ಜೋಶಿ

ಲಾಕ್‌ಡೌನ್ ಜಾರಿಯಾದ ನಂತರದಲ್ಲಿ ಭಾರತದ ಷೇರು ಮಾರುಕಟ್ಟೆಗಳಲ್ಲಿ ಸಣ್ಣ ಹೂಡಿಕೆದಾರರು ಹಣ ತೊಡಗಿಸುತ್ತಿರುವುದು ಹೆಚ್ಚಾಗಿದೆ ಎಂಬ ಮಾತನ್ನು ಹಲವರು ಹೇಳಿದ್ದಾರೆ. ಈ ಮಾತಿನಲ್ಲಿ ನಿಜವಿದೆ. ಆದರೆ, ಲಾಕ್‌ಡೌನ್ ಜಾರಿಯ ನಂತರವಷ್ಟೇ ಭಾರತೀಯರಿಗೆ ಈಕ್ವಿಟಿಗಳ ಮೇಲೆ ಹೂಡಿಕೆ ಹೆಚ್ಚಿಸಬೇಕು ಎಂಬ ಮನಸ್ಸು ಬಂದಿದ್ದಲ್ಲ; ಅದಕ್ಕೂ ಮೊದಲಿನಿಂದಲೇ ಅವರು ಈ ಕಡೆ ಆಕರ್ಷಿತರಾಗಿದ್ದಾರೆ ಎಂದು ಹೇಳುತ್ತವೆ ಮ್ಯೂಚುವಲ್ ಫಂಡ್‌ಗಳ ಮೂಲಕ ಆಗಿರುವ ಹೂಡಿಕೆಗೆ ಸಂಬಂಧಿಸಿದ ಅಂಕಿ-ಅಂಶಗಳು.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವಾದ ಎಎಂಎಫ್‌ಐ ನೀಡಿರುವ ಮಾಹಿತಿಯ ಪ್ರಕಾರ, 2014ರ ಮಾರ್ಚ್ ತಿಂಗಳ ನಂತರದಲ್ಲಿ ಭಾರತದಲ್ಲಿ ಮ್ಯೂಚುವಲ್ ಫಂಡ್ ಖಾತೆಗಳ ಸಂಖ್ಯೆ ಏರಿಕೆಯ ಹಾದಿಯಲ್ಲಿಯೇ ಸಾಗಿದೆ. 2014ರ ಮಾರ್ಚ್ ತಿಂಗಳಲ್ಲಿ ದೇಶದಲ್ಲಿ ಇದ್ದ ಒಟ್ಟು ಮ್ಯೂಚುವಲ್ ಫಂಡ್ ಖಾತೆಗಳ (ಇವನ್ನು ಮ್ಯೂಚುವಲ್ ಫಂಡ್ ಕಂಪನಿಗಳು ಫೋಲಿಯೊ ಎಂದು ಕರೆಯುತ್ತವೆ) ಸಂಖ್ಯೆ 3.95 ಕೋಟಿ. ಈ ಖಾತೆಗಳ ಸಂಖ್ಯೆಯು ಈ ವರ್ಷದ ಮಾರ್ಚ್ ವೇಳೆಗೆ 9.79 ಕೋಟಿಗೆ ಏರಿಕೆ ಕಂಡಿದೆ.

9.78 ಕೋಟಿ ಖಾತೆಗಳಲ್ಲಿ ಸಣ್ಣ ಹೂಡಿಕೆದಾರರು ಹೊಂದಿರುವ ಖಾತೆಗಳ ಪ್ರಮಾಣ ಶೇಕಡ 90.1ರಷ್ಟು (ಒಟ್ಟು 8.82 ಕೋಟಿ ಖಾತೆಗಳು). 2014ರ ನಂತರ ಮ್ಯೂಚುವಲ್ ಫಂಡ್ ಖಾತೆಗಳ ಸಂಖ್ಯೆ ಏರಿಕೆ ಆಗುತ್ತಲೇ ಇದೆ ಹಾಗೂ ಅವುಗಳಲ್ಲಿ ಬಹುಪಾಲು ಖಾತೆಗಳು ಸಣ್ಣ ಹೂಡಿಕೆದಾರರಿಗೆ ಸೇರಿರುವುದನ್ನು ಗಮನಿಸಿದರೆ, ಸಣ್ಣ ಹೂಡಿಕೆದಾರರು ಸಾಂಪ್ರದಾಯಿಕ ಹೂಡಿಕೆ ಉತ್ಪನ್ನಗಳಾದ ನಿಶ್ಚಿತ ಠೇವಣಿ, ಆರ್‌.ಡಿ. (ರೆಕರಿಂಗ್ ಡೆಪಾಸಿಟ್), ಅಂಚೆ ಕಚೇರಿ ಉಳಿತಾಯ ಯೋಜನೆ ಮಾತ್ರವೇ ಅಲ್ಲದೆ, ಹೊಸ ಕಾಲದ ಮ್ಯೂಚುವಲ್ ಫಂಡ್‌ಗಳತ್ತಲೂ ಹೆಚ್ಚಿನ ಸಂಖ್ಯೆಯಲ್ಲಿ ಮುಖ ಮಾಡುತ್ತಿರುವುದು ಸ್ಪಷ್ಟವಾಗುತ್ತದೆ.

ಇಲ್ಲಿ ಇನ್ನೂ ಒಂದು ಮುಖ್ಯವಾದ ಅಂಶ ಇದೆ. ಈಕ್ವಿಟಿ ಆಧಾರಿತ (ಅಂದರೆ, ಪ್ರಧಾನವಾಗಿ ಬೇರೆ ಬೇರೆ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡುವ) ಮ್ಯೂಚುವಲ್ ಫಂಡ್‌ಗಳಲ್ಲಿ ಸಣ್ಣ ಹೂಡಿಕೆದಾರರು ಹೊಂದಿರುವ ಪಾಲು ಶೇಕಡ 93.2ರಷ್ಟು ಎಂದು ಎಎಂಎಫ್‌ಐ ಹೇಳಿದೆ. ಮ್ಯೂಚುವಲ್ ಫಂಡ್ ಮೂಲಕ ಮಾಡುವ ಹೂಡಿಕೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ರಿಸ್ಕ್ ಇರುವುದು ಈಕ್ವಿಟಿ ಆಧಾರಿತ ಹೂಡಿಕೆ ಯೋಜನೆಗಳಲ್ಲಿ. ಅಲ್ಲಿಯೂ ಸಣ್ಣ ಹೂಡಿಕೆದಾರರೇ ಹೆಚ್ಚಿನ ಪ್ರಮಾಣದಲ್ಲಿ ಪಾಲು ಹೊಂದಿದ್ದಾರೆ ಎಂದಾದರೆ, ಹೂಡಿಕೆಯಲ್ಲಿ ತೊಡಗಿರುವವರು ಈಕ್ವಿಟಿ ಹೂಡಿಕೆಗಳಲ್ಲಿ ಇರುವ ರಿಸ್ಕ್ ವಿಚಾರವಾಗಿ ಹೆಚ್ಚಿನ ಭಯ ಹೊಂದಿಲ್ಲ ಎಂದು ಭಾವಿಸಲು ಅಡ್ಡಿಯಿಲ್ಲ.

'ಮ್ಯೂಚುವಲ್ ಫಂಡ್‌ಗಳ ಮೂಲಕ ವಿವಿಧ ಕಡೆ ಹೂಡಿಕೆ ಆಗುತ್ತಿರುವ ಹಣದ ಮೊತ್ತವು ಜಾಸ್ತಿ ಆಗುತ್ತಲೇ ಇದೆ. ಇದಕ್ಕೆ ಒಂದು ಕಾರಣ ಹಣವನ್ನು ಹೂಡಿಕೆ ಮಾಡುವ ಪ್ರಕ್ರಿಯೆಯು ಸುಲಭ ಆಗಿರುವುದು. ಸುಲಭವಾಗಿ ಮ್ಯೂಚುವಲ್ ಫಂಡ್ ಖಾತೆ ತೆರೆದು, ಹೂಡಿಕೆ ಮಾಡಲು ಅವಕಾಶ ಕಲ್ಪಿಸುವ ಆನ್‌ಲೈನ್ ವೇದಿಕೆಗಳು ಬಂದಿವೆ. ಹಾಗೆಯೇ, ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟವು ಜಾಹೀರಾತುಗಳ (ಮ್ಯೂಚುವಲ್ ಫಂಡ್ ಸಹಿ ಹೈ ಎಂಬ ಶೀರ್ಷಿಕೆ ಹೊಂದಿರುವವು) ಮೂಲಕ ಮ್ಯೂಚುವಲ್ ಫಂಡ್‌ಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ಅಭಿಯಾನ ನಡೆಸಿದೆ. ಇದು ಕೂಡ ಅಲ್ಲಿ ಹೂಡಿಕೆ ಜಾಸ್ತಿ ಆಗಲು ಒಂದು ಮುಖ್ಯ ಕಾರಣ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು ಪ್ರೈಮ್‌ಇನ್ವೆಸ್ಟರ್ ಡಾಟ್ ಇನ್ ಸಂಸ್ಥೆಯ ಸಹಸಂಸ್ಥಾಪಕಿ ವಿದ್ಯಾ ಬಾಲಾ. ಆದರೆ, ಫೋಲಿಯೊ ಸಂಖ್ಯೆಯೊಂದನ್ನು ಮಾತ್ರ ಗಮನಿಸಿ ಹೂಡಿಕೆದಾರರ ಸಂಖ್ಯೆ ಹೆಚ್ಚಾಗಿದೆ ಎನ್ನಲಾಗದು ಎಂದು ಅವರು ಹೇಳಿದರು. ಒಬ್ಬರು ಒಂದಕ್ಕಿಂತ ಹೆಚ್ಚಿನ ಫೋಲಿಯೊ ಹೊಂದಿರಲು ಅವಕಾಶ ಇರುವ ಕಾರಣ, ಫೋಲಿಯೊಗಳ ಸಂಖ್ಯೆಯೇ ಹೂಡಿಕೆದಾರರ ಸಂಖ್ಯೆ ಎಂದು ಹೇಳಲು ಆಗದು.

ಈಕ್ವಿಟಿ ಆಧಾರಿತ ಫಂಡ್‌ಗಳಲ್ಲಿ ಹೂಡಿಕೆ ಮಾಡಿದವರು, ಹಣವನ್ನು ಹೆಚ್ಚಿನ ಅವಧಿಗೆ ಅಲ್ಲಿಯೇ ಬಿಡುತ್ತಿದ್ದಾರೆ. ಈಕ್ವಿಟಿಗಳಲ್ಲಿ ಹೂಡಿಕೆಯಾಗಿರುವ ಮೊತ್ತದಲ್ಲಿ ಶೇಕಡ 43.2ರಷ್ಟು ಹಣವು ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಅಲ್ಲಿಯೇ ಇರುತ್ತದೆ. ಹೆಚ್ಚಿನ ಅವಧಿಗೆ ಹಣವು ಷೇರುಗಳಲ್ಲಿ ಹೂಡಿಕೆ ಆಗಿರುತ್ತದೆ ಎಂದರೆ, ಸಣ್ಣ ಹೂಡಿಕೆದಾರರು ಹೆಚ್ಚು ಪ್ರಬುದ್ಧರಾಗಿದ್ದಾರೆ ಎಂದು ಅರ್ಥ. ಮಾರುಕಟ್ಟೆಯ ದೈನಂದಿನ ಏರಿಳಿತಗಳಿಂದ ಅವರು ಅಧೀರರಾಗುವುದಿಲ್ಲ ಎಂದೂ ಅರ್ಥ. 'ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ರಿಸ್ಕ್ ಜಾಸ್ತಿ ಇದ್ದರೂ ಅಧಿಕ ಲಾಭ ಸಿಗುವ ಸಾಧ್ಯತೆಯೂ ಹೆಚ್ಚು. ಈ ಕಾರಣದಿಂದಾಗಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಹೆಚ್ಚಾಗಿರಬಹುದು. ಫಂಡ್ ಮ್ಯಾನೇಜರ್‌ಗಳು ಜನಸಾಮಾನ್ಯರ ಹೂಡಿಕೆಯ ಹಣವನ್ನು ನಿಭಾಯಿಸುವ ಕಾರಣ, ಷೇರು ಮಾರುಕಟ್ಟೆಯ ಏರಿಳಿತದ ಬಗ್ಗೆ ಹೂಡಿಕೆದಾರರು ಹೆಚ್ಚು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಮಾರುಕಟ್ಟೆಯ ಏರಿಳಿತಗಳಿಂದ ಹೂಡಿಕೆದಾರರಿಗೆ ಒಂದಿಷ್ಟು ರಕ್ಷಣೆ ಒದಗಿಸುವ ವ್ಯವಸ್ಥಿತ ಹೂಡಿಕೆ ಯೋಜನೆಗಳು (ಎಸ್‌ಐಪಿ) ಕೂಡ ಈಕ್ವಿಟಿ ಹೂಡಿಕೆಗಳ ಜನಪ್ರಿಯತೆ ಹೆಚ್ಚುತ್ತಿರುವುದಕ್ಕೆ ಕಾರಣ' ಎಂದು ಸುವಿಷನ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ಪ್ರಮೋದ್ ಬಿ.ಪಿ. ಹೇಳಿದರು.

ವೈಯಕ್ತಿಕ ಹೂಡಿಕೆದಾರರು ಷೇರು ಮಾರುಕಟ್ಟೆಯತ್ತ ಹೆಚ್ಚಿನ ಸಂಖ್ಯೆಯಲ್ಲಿ ಮುಖ ಮಾಡಿರುವುದನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಅರ್ಥಶಾಸ್ತ್ರಜ್ಞರು ಸಿದ್ಧಪಡಿಸಿದ ಮಾಸಿಕ 'ಎಕೊವ್ರ್ಯಾಪ್' ವರದಿಯಲ್ಲಿ ಕೂಡ ಉಲ್ಲೇಖಿಸಲಾಗಿದೆ. '2020–21ನೆಯ ಆರ್ಥಿಕ ವರ್ಷದಲ್ಲಿ ದೇಶದ ವೈಯಕ್ತಿಕ ಹೂಡಿಕೆದಾರರ ಸಂಖ್ಯೆಯು 142 ಲಕ್ಷದಷ್ಟು ಹೆಚ್ಚಳವಾಗಿದೆ. ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ಹೊಸದಾಗಿ 44.7 ಲಕ್ಷ ಸಣ್ಣ ಹೂಡಿಕೆದಾರರ ಖಾತೆಗಳು ತೆರೆಯಲ್ಪಟ್ಟಿವೆ. ಷೇರು ಮಾರುಕಟ್ಟೆಗಳಲ್ಲಿನ ಒಟ್ಟು ವಹಿವಾಟಿನಲ್ಲಿ ವೈಯಕ್ತಿಕ ಹೂಡಿಕೆದಾರರ ಪಾಲು ಮೊದಲು ಶೇಕಡ 39ರಷ್ಟು ಇದ್ದುದು ಈಗ ಶೇ 45ರಷ್ಟಕ್ಕೆ ಹೆಚ್ಚಳವಾಗಿದೆ' ಎಂದು ಎಸ್‌ಬಿಐ ವರದಿ ಹೇಳಿದೆ. ಈ ವರದಿಯಲ್ಲಿ ಉಲ್ಲೇಖವಾಗಿರುವುದು ಮ್ಯೂಚುವಲ್ ಫಂಡ್ ಖಾತೆಗಳ ವಿವರ ಅಲ್ಲ; ನೇರವಾಗಿ ಷೇರುಗಳಲ್ಲಿ ಹೂಡಿಕೆ ಮಾಡುವವರ ಸಂಖ್ಯೆ ಇದು.

'ವಿಶ್ವಾಸ ಹೆಚ್ಚಾಗಿದೆ': ತಂತ್ರಜ್ಞಾನದ ಕಾರಣದಿಂದಾಗಿ ಹೂಡಿಕೆ ಸುಲಭವಾಗಿರುವುದಷ್ಟೇ ಅಲ್ಲದೆ, ಬಿಗಿ ನಿಯಮಗಳು ಜಾರಿಗೆ ಬಂದಿರುವುದರಿಂದಾಗಿ ಹೂಡಿಕೆದಾರರ ವಿಶ್ವಾಸ ಈಕ್ವಿಟಿಯಲ್ಲಿ ಹೆಚ್ಚಾಗಿದೆ ಎಂದು ಹೇಳಿದರು 'ಪೇಟಿಎಂ ಮನಿ' ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ವರುಣ್ ಶ್ರೀಧರ್.

ಪ್ರಮುಖ ಷೇರು ಮಾರುಕಟ್ಟೆಗಳು ಡಿಜಿಟೈಸ್ ಆಗುತ್ತಿವೆ. ಇದರ ಪರಿಣಾಮವಾಗಿ ಮ್ಯೂಚುವಲ್ ಫಂಡ್ ಹಾಗೂ ಇತರ ಈಕ್ವಿಟಿ ಹೂಡಿಕೆಗೆ ಸಂಬಂಧಿಸಿದ ಶುಲ್ಕಗಳು ಹಿಂದೆಂದಿಗಿಂತ ಕಡಿಮೆ ಆಗಿವೆ. ಹೊಸ ಕಾಲದ ಹೂಡಿಕೆ ವೇದಿಕೆಗಳು ಕೆವೈಸಿ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಡಿಜಿಟಲ್ ಆಗಿ ನಿಭಾಯಿಸುತ್ತಿವೆ. ಹೂಡಿಕೆದಾರರ ಹಿತರಕ್ಷಣೆಯ ಉದ್ದೇಶದ ನಿಯಂತ್ರಣ ಕಾನೂನುಗಳು ಮಾರುಕಟ್ಟೆಗಳ ಬಗ್ಗೆ ವಿಶ್ವಾಸ ಹೆಚ್ಚಿಸಿವೆ. ಮ್ಯೂಚುವಲ್ ಫಂಡ್ ಹಾಗೂ ಈಕ್ವಿಟಿ ಉತ್ಪನ್ನಗಳತ್ತ ಹೂಡಿಕೆದಾರರು ಹೆಚ್ಚು ಆಕರ್ಷಿತರಾಗಲು ಇವೆಲ್ಲವೂ ಕಾರಣ ಎಂದು ಶ್ರೀಧರ್ ಅಭಿಪ್ರಾಯ ವ್ಯಕ್ತಪಡಿಸಿದರು.



ಇದು ಶಾಶ್ವತವೋ, ತಾತ್ಕಾಲಿಕವೋ?

ಹಣದ ಉಳಿತಾಯಕ್ಕೆ ಇರುವ ಬೇರೆ ಉತ್ಪನ್ನಗಳಲ್ಲಿ ಸಿಗುತ್ತಿರುವ ಬಡ್ಡಿಯ ಪ್ರಮಾಣ ಕಡಿಮೆ ಇರುವುದು ಸಣ್ಣ ಹೂಡಿಕೆದಾರರು ಷೇರು ಮಾರುಕಟ್ಟೆಯತ್ತ ಹೆಚ್ಚಿನ ಆಸಕ್ತಿ ತೋರಿಸಲು ಮುಖ್ಯ ಕಾರಣ ಎಂದು ಎಸ್‌ಬಿಐ ವರದಿ ಹೇಳಿದೆ. ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಜನ ಮನೆಯಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದಾರೆ. ಇದು ಕೂಡ ಅವರು ಷೇರು ಮಾರುಕಟ್ಟೆಯಲ್ಲಿ ವಹಿವಾಟು ನಡೆಸಲು ಅವಕಾಶ ಮಾಡಿಕೊಟ್ಟಿದೆ.


ಆದರೆ, ಈಕ್ವಿಟಿಗಳಲ್ಲಿ ಸಣ್ಣ ಹೂಡಿಕೆದಾರರ ಪಾಲ್ಗೊಳ್ಳುವಿಕೆ ಹೆಚ್ಚುತ್ತ ಸಾಗಿರುವುದು ತಾತ್ಕಾಲಿಕ ಬೆಳವಣಿಗೆಯೇ ಅಥವಾ ಇದು ಬಹುಕಾಲ ಉಳಿದುಕೊಳ್ಳುವಂತಹ, ಹೂಡಿಕೆದಾರರ ಮನೋಸ್ಥಿತಿಯಲ್ಲಿಯೇ ಆಗಿರುವ ಬದಲಾವಣೆಯೇ ಎಂಬುದನ್ನು ಕಾದುನೋಡಬೇಕು ಎಂದು ವರದಿಯಲ್ಲಿ ಹೇಳಲಾಗಿದೆ. 'ಸಣ್ಣ ಹೂಡಿಕೆದಾರರ ಪಾಲ್ಗೊಳ್ಳುವಿಕೆಯಲ್ಲಿ ಸ್ಥಿರತೆ ಕಂಡುಬಂದರೆ, ಭಾರತದ ಮೂಲಸೌಕರ್ಯ ಯೋಜನೆಗಳಿಗೆ ದೊಡ್ಡ ಹಣಕಾಸಿನ ಮೂಲವೊಂದು ಸಿಕ್ಕಂತೆ ಆಗುತ್ತದೆ' ಎನ್ನುವುದು ಎಸ್‌ಬಿಐ ಅರ್ಥಶಾಸ್ತ್ರಜ್ಞರ ಲೆಕ್ಕಾಚಾರ.

ಅಂಕಿ-ಅಂಶಗಳು

3.4%
2019–20ರಲ್ಲಿ ಭಾರತದ ಕೌಟುಂಬಿಕ ಉಳಿತಾಯದ ಹಣದಲ್ಲಿ ಇಷ್ಟು ಪಾಲು, ಷೇರುಗಳ ಹಾಗೂ ಡಿಬೆಂಚರುಗಳಲ್ಲಿ (ಒಂದು ಬಗೆಯ ಸಾಲಪತ್ರ) ಹೂಡಿಕೆ ಆಗಿತ್ತು

4.8% - 5%
2020–21ರಲ್ಲಿ ದೇಶದ ಕೌಟುಂಬಿಕ ಉಳಿತಾಯದಲ್ಲಿ ಇಷ್ಟು ಪಾಲು ಷೇರು, ಡಿಬೆಂಚರುಗಳಲ್ಲಿ ಹೂಡಿಕೆ ಆಗಿದೆ ಎಂದು ಎಸ್‌ಬಿಐ ಅಂದಾಜಿಸಿದೆ

36.5%
ಅಮೆರಿಕದಲ್ಲಿನ ಕೌಟುಂಬಿಕ ಉಳಿತಾಯದ ಮೊತ್ತದಲ್ಲಿ ಇಷ್ಟು ಪಾಲು ಷೇರು ಹಾಗೂ ಡಿಬೆಂಚರುಗಳಲ್ಲಿ ಹೂಡಿಕೆ ಆಗುತ್ತದೆ



ಮಾಹಿತಿ: ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ — ಪ್ರಜಾವಾಣಿ ಗ್ರಾಫಿಕ್ಸ್

'ಧನಕರ್ ಭ್ರಷ್ಟ'

ಪ್ರಜಾವಾಣಿ ವಾರ್ತೆ


ಮಮತಾ

ಕೋಲ್ಕತ್ತ: ಪಶ್ಚಿಮ ಬಂಗಾಳ ರಾಜ್ಯಪಾಲ ಜಗದೀಪ್ ಧನಕರ್ ವಿರುದ್ಧ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮತ್ತೊಂದು ಆರೋಪ ಮಾಡಿದ್ದಾರೆ. 1996ರ ಜೈನ್ ಹವಾಲಾ ಪ್ರಕರಣದ ದೋಷಾರೋಪ ಪಟ್ಟಿಯಲ್ಲಿ ಧನಕರ್ ಅವರ ಹೆಸರನ್ನು ಉಲ್ಲೇಖಿಸಲಾಗಿತ್ತು ಎಂದು ಸೋಮವಾರ ಹೇಳಿದ್ದಾರೆ. ಆದರೆ ರಾಜ್ಯಪಾಲರು ಈ ಆರೋಪವನ್ನು ನಿರಾಕರಿಸಿದ್ದಾರೆ.


ಧನಕರ್ ಅವರು ಭ್ರಷ್ಟ ಎಂದೂ ಮಮತಾ ಹೇಳಿದ್ದಾರೆ.

'ಧನಕರ್ ಅವರು ನ್ಯಾಯಾಲಯಕ್ಕೆ ಹೋಗಿ ತಮ್ಮ ಹೆಸರನ್ನು ತೆರವು ಮಾಡಿಸಿಕೊಂಡಿದ್ದಾರೆ. ಆದರೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದ್ದು, ಅದು ಕೋರ್ಟ್ ಎದುರು ಬಾಕಿ ಇದೆ. ಹೀಗಿದ್ದೂ ಬಂಗಾಳದ ರಾಜ್ಯಪಾಲರಾಗಿ ಧನಕರ್ ಅವರು ಮುಂದುವರಿಯಲು ಕೇಂದ್ರ ಸರ್ಕಾರ ಇನ್ನೂ ಹೇಗೆ ಅವಕಾಶ ನೀಡುತ್ತದೆ' ಎಂದು ಮಮತಾ ಪ್ರಶ್ನಿಸಿದ್ದಾರೆ.

ಇಂತಹ ಆರೋಪಗಳಿರುವ ರಾಜ್ಯಪಾಲರಿಗೆ ಕೇಂದ್ರ ಸರ್ಕಾರ ಏಕೆ ಅವಕಾಶ ನೀಡುತ್ತದೆ? ಕೇಂದ್ರ ಸರ್ಕಾರವು ಆರೋಪಪಟ್ಟಿ ತೆಗೆದು ಅವರ ಹೆಸರು ಇದೆಯೇ ಎಂದು ನೋಡಲಿ ಎಂದು ಹೇಳಿದ್ದಾರೆ.

ಧನಕರ್ ಅವರನ್ನು ಬಂಗಾಳ ರಾಜ್ಯಪಾಲ ಹುದ್ದೆಯಿಂದ ತೆಗೆದುಹಾಕುವಂತೆ ಕೋರಿ ಕೇಂದ್ರಕ್ಕೆ ಬರೆದ ಮೂರು ಪತ್ರಗಳನ್ನು ಉಲ್ಲೇಖಿಸಿದ ಮಮತಾ, ಕೇಂದ್ರವು ಈಗಲಾದರೂ ತಮ್ಮ ಬೇಡಿಕೆಯನ್ನು ಪರಿಗಣಿಸಬೇಕು ಎಂದು ಹೇಳಿದರು.

ಆರೋಪ ನಿರಾಕರಿಸಿದ ಧನಕರ್


ಜಗದೀಪ್ ಧನಕರ್

ಮಮತಾ ಮಾಡಿರುವ ಆರೋಪ ಸತ್ಯಕ್ಕೆ ದೂರ ಎಂದು ರಾಜ್ಯಪಾಲ ಧನಕರ್ ಹೇಳಿದ್ದಾರೆ. ಹವಾಲಾ ಪ್ರಕರಣದಲ್ಲಿ ಯಾರೂ ಶಿಕ್ಷೆಗೊಳಗಾಗಿಲ್ಲ. ಮುಖ್ಯಮಂತ್ರಿಯವರು ಕೆಲವು ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಆದರೆ ತಮ್ಮ ಹೆಸರು ಪ್ರಕರಣದಲ್ಲಿ ಇಲ್ಲ ಎಂದು ಹೇಳಿದ್ದಾರೆ.

'ಮಮತಾ ಅವರಂತಹ ಹಿರಿಯ ರಾಜಕಾರಣಿಯು ಉದ್ವಿಗ್ನತೆಯನ್ನು ಸೃಷ್ಟಿಲು ಇಂತಹ ಸುಳ್ಳು ಆರೋಪಗಳನ್ನು ಮಾಡುತ್ತಾರೆ ಎಂದು ನಾನು ಎಂದಿಗೂ ನಿರೀಕ್ಷಿಸಿರಲಿಲ್ಲ' ಎಂದು ಧನಕರ್ ಹೇಳಿದ್ದಾರೆ.

ಮಾರಣಾಂತಿಕ ಕಾಯಿಲೆ ಚಿಕಿತ್ಸೆಗೆ ಹಣ

ಆದೇಶ ಪಾಲಿಸದ ಕೇಂದ್ರ ಹೈಕೋರ್ಟ್ ಆಕ್ರೋಶ

ಬೆಂಗಳೂರು: ಮಾರಣಾಂತಿಕ ಅನುವಂಶೀಯ ಕಾಯಿಲೆಗಳಿಂದ ಬಳಲುತ್ತಿರುವ ಕಿರಿಯ ವಯಸ್ಸಿನ 25 ರೋಗಿಗಳ ಚಿಕಿತ್ಸೆಗೆ ₹3 ಕೋಟಿ ಹಣ ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಲಾಗಿತ್ತು. ಆದರೆ ಈ ಆದೇಶವನ್ನು ಪಾಲಿಸದಿರುವುದನ್ನು ಕರ್ನಾಟಕ ಹೈಕೋರ್ಟ್ ಗಂಭೀರವಾಗಿ ಪರಿಗಣಿಸಿದೆ.

ಹಣ ಪಾವತಿಯ ಗಡುವನ್ನು 2021ರ ಜೂನ್ 18ರಂದು ವಿಸ್ತರಿಸಲಾಗಿದೆ. ಅದರಂತೆ ₹ 3 ಕೋಟಿಯಲ್ಲಿ ಶೇ 50ರಷ್ಟು ಮೊತ್ತವನ್ನು ಜುಲೈ 17ರ ಮೊದಲು ಪಾವತಿಸಲು ಮತ್ತು ಬಾಕಿ ಹಣವನ್ನು ಆ.17ರ ಒಳಗೆ ಪಾವತಿಸಲು ಹೇಳಲಾಗಿದೆ.

ಇತ್ತೀಚೆಗೆ ಪ್ರಕಟಿಸಲಾದ ಅಪರೂಪದ ಕಾಯಿಲೆಗಳ ರಾಷ್ಟ್ರೀಯ ನೀತಿ 2021ರಲ್ಲಿ ಗುಂಪು 3(ಎ) ವರ್ಗೀಕರಣದಲ್ಲಿ 'ಲೈಸೋಮಲ್ ಶಾರ್ಟೇಜ್ ಡಿಸಾರ್ಡರ್' (ಎಲ್‌ಎಸ್‌ಡಿಎಸ್) ಕಾಯಿಲೆ ಸ್ಥಾನ ಪಡೆದಿದೆ. ಕಿಣ್ವಗಳ ಕೊರತೆಯಿಂದ ಜೀವಕೋಶಗಳಲ್ಲಿ ವಿಷಕಾರಿ ಅಂಶಗಳು ಉತ್ಪತ್ತಿಯಾಗಿ ಉಂಟಾಗುವ ಕಾಯಿಲೆ ಇದಾಗಿದೆ. ಈ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳಿಗೆ ಸಾಂಸ್ಥಿಕ ನೆರವು ನೀಡುವುದು ಬಹಳ ಮುಖ್ಯ.

ಎಲ್‌ಎಸ್‌ಡಿಎಸ್‌ನಿಂದ ಬಳಲುತ್ತಿರುವ ಮಕ್ಕಳಿಗೆ ಚಿಕಿತ್ಸೆ ನೀಡುತ್ತಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಇಂಥ ರೋಗಿಗಳ ಚಿಕಿತ್ಸೆಗಾಗಿ ಬಜೆಟ್ ಅನುದಾನ ನೀಡಬೇಕೆಂದು ವೈದ್ಯಕೀಯ ಕ್ಷೇತ್ರದ ತಜ್ಞರು ಮತ್ತು ರೋಗಿಗಳ ಪರ ವಕಾಲತ್ತು ತಂಡಗಳ ಪ್ರತಿನಿಧಿಗಳು ಬಹು ದಿನಗಳಿಂದ ಬೇಡಿಕೆ ಇರಿಸಿದ್ದಾರೆ ಎಂದು ಕೋರ್ಟ್ ಹೇಳಿದೆ.

ಎಲ್‌ಎಸ್‌ಡಿಎಸ್ ಕಾಯಿಲೆಗೆ ಚಿಕಿತ್ಸೆ ನೀಡಲು ಕೇಂದ್ರ ಸರ್ಕಾರ ₹3 ಕೋಟಿ ಮತ್ತು ರಾಜ್ಯ ಸರ್ಕಾರ ₹2 ಕೋಟಿ ಹಣ ಬಿಡುಗಡೆ ಮಾಡಬೇಕು ಎಂದು ಕರ್ನಾಟಕ ಹೈಕೋರ್ಟ್ ಏಪ್ರಿಲ್‌ನಲ್ಲಿ ಆದೇಶಿಸಿತ್ತು. ಮೇ 10ರ ಒಳಗೆ ಎರಡೂ ಸರ್ಕಾರಗಳು ಶೇ 50ರಷ್ಟು ಮೊತ್ತವನ್ನು ಪಾವತಿಸಬೇಕು ಎಂದು ಸೂಚಿಸಿತ್ತು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ಸರ್ಕಾರವು ಕೋವಿಡ್ ಲಸಿಕೆ ನೀಡುತ್ತಿಲ್ಲ. ಲಸಿಕೆ ನೀಡದೇ ಇದ್ದರೂ ಎಲ್ಲಾ ದಿನಪತ್ರಿಕೆಗಳಲ್ಲಿ ಪೂರ್ಣಪುಟ ಜಾಹೀರಾತು ನೀಡುತ್ತಿದೆ. ಜಾಹೀರಾತಿನ ಹಣವನ್ನು ಲಸಿಕೆಗೆ ವಿನಿಯೋಗಿಸಿದ್ದರೆ ಕೋಟ್ಯಂತರ ಜನರಿಗೆ ಲಸಿಕೆ ನೀಡಬಹುದಿತ್ತು. ಆದರೆ ಸರ್ಕಾರ ಜಾಹೀರಾತಿಗೆ ಹಣ ವಿನಿಯೋಗಿಸುತ್ತಿದೆ' ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ಟೀಕಿಸುತ್ತಿರುವ ವಿಡಿಯೊ ವೈರಲ್ ಆಗಿದೆ. ವಿಡಿಯೊ ಪಕ್ಕದಲ್ಲೇ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಚಿತ್ರ ಇರುವ ದೆಹಲಿ ಸರ್ಕಾರದ ಜಾಹೀರಾತಿನ ಚಿತ್ರ ಹಾಕಲಾಗಿದೆ. ಕೇಜ್ರಿವಾಲ್ ಅವರನ್ನು ಅವರ ಉಪಮುಖ್ಯಮಂತ್ರಿಯೇ ಟೀಕಿಸುತ್ತಿದ್ದಾರೆ ಎಂದು ಹಲವರು ಲೇವಡಿ ಮಾಡಿದ್ದಾರೆ.

ಇದು ತಿರುಚಿದ ಮಾಹಿತಿ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಸಿಸೋಡಿಯಾ ಅವರು ಜೂನ್ 21ರಂದು ಪತ್ರಿಕಾಗೋಷ್ಠಿ ನಡೆಸಿದ್ದರು. ಅದರಲ್ಲಿ ಕೇಂದ್ರ ಸರ್ಕಾರ ಮತ್ತು ಬಿಜೆಪಿ ಆಡಳಿತವಿರುವ ರಾಜ್ಯಗಳ ಸರ್ಕಾರಗಳ ಲಸಿಕೆ ಜಾಹೀರಾತನ್ನು ಟೀಕಿಸಿದ್ದರು. ಆ ವಿಡಿಯೊವನ್ನು ತಿರುಚಿ, ಸರ್ಕಾರ ಜಾಹೀರಾತು ನೀಡುತ್ತಿದೆ ಎಂಬುದನ್ನಷ್ಟೇ ಉಳಿಸಿಕೊಳ್ಳಲಾಗಿದೆ. ಜತೆಗೆ ಕೇಜ್ರಿವಾಲ್ ಅವರ ಜಾಹೀರಾತಿನ ಚಿತ್ರ ಬಳಸಿ ಮಾಹಿತಿಯನ್ನು ತಿರುಚಲಾಗಿದೆ. ಐದು ನಿಮಿಷಗಳ ವಿಡಿಯೊವನ್ನು ಎಡಿಟ್ ಮಾಡಿ, ಕೇವಲ 18 ಸೆಕೆಂಡ್‌ಗಳ ವಿಡಿಯೊ ಉಳಿಸಿಕೊಳ್ಳಲಾಗಿದೆ. ಈ ಸುಳ್ಳು ಸುದ್ದಿಯನ್ನು ಮೊದಲು ಪೋಸ್ಟ್ ಮಾಡಿರುವ 'ಪೊಲಿಟಿಕಲ್ ಕೀಡಾ' ಹ್ಯಾಂಡ್ಲರ್‌ನಲ್ಲಿ ಈ ಹಿಂದೆಯೂ ಹಲವು ಸುಳ್ಳುಸುದ್ದಿಗಳನ್ನು ಪೋಸ್ಟ್ ಮಾಡಲಾಗಿತ್ತು' ಎಂದು ಆಲ್ಟ್‌ನ್ಯೂಸ್ ವಿವರಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಜೂನ್ 29, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆರ್ದ್ರೆ ಪಂಚಮೀ ಗಂ. 26-57 ಹ. 4-50) ಮಂಗಳವಾರ ನಿತ್ಯ ನಕ್ಷತ್ರ ಶತಭಿಷ ಗಂ. 57-2 (ರಾ. 4-53) ಪ್ರೀತಿ ನಾಮ ಯೋಗ ಗಂ. 26-11 ತೈತಲ ಕರಣ ಗಂ. 26-57 ವಿಷ ಗಂ. 14-43 ಅಮೃತ ಗಂ. 35-38 ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-00 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 1 6

ಮೇಷ: ಮಾನಸಿಕ ಚಾಂಚಲ್ಯದಿಂದ ಭಯದ ವಾತಾವರಣ. ವ್ಯಾಪಾರ ವ್ಯವಹಾರಗಳಲ್ಲಿ ಲಾಭದ ಇಳಿಮುಖ. ಉದ್ಯೋಗಸ್ಥರಿಗೆ ವಿಶ್ವಾಸದ ನಿರ್ಧಾರಗಳಿಂದಾಗಿ ಮುನ್ನಡೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಪ್ರಗತಿ.

ವೃಷಭ: ಆರೋಗ್ಯದಲ್ಲಿ ಸುಧಾರಣೆ. ಉದ್ಯೋಗದಲ್ಲಿ ಪ್ರಗತಿ. ವಾಹನಗಳಿಂದ ಖರ್ಚು ಬರುವ ಸಾಧ್ಯತೆ. ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವ ಸಾಧ್ಯತೆ. ಕುಟುಂಬ ಸದಸ್ಯರೊಂದಿಗೆ ಇಷ್ಟದೇವತಾ ದರ್ಶನ ಭಾಗ್ಯ.

ಮಿಥುನ: ಅನಾಯಾಸವಾಗಿ ಕೆಲಸ ಕಾರ್ಯಗಳು ಕೈಗೂಡುವವು. ಆತ್ಮೀಯರ ಭೇಟಿ ಮತ್ತು ಸಂತೋಷದ ಸುದ್ದಿ ಕೇಳುವ ಸಾಧ್ಯತೆ. ವಿದ್ಯಾರ್ಥಿಗಳು ಆಟಪಾಠಗಳಲ್ಲಿ ಹಿನ್ನಡೆಯನ್ನು ಅನುಭವಿಸುವರು. ವ್ಯಾಪಾರದಲ್ಲಿ ಸ್ವಲ್ಪಮಟ್ಟಿನ ನಷ್ಟ.

ಕರ್ಕಾಟಕ: ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು. ಸಕಾಲದಲ್ಲಿ ಕೆಲಸ ಕಾರ್ಯಗಳು ಪೂರೈಸಿದ ಸಂತಸ. ಸಂಘ ಸಂಸ್ಥೆಗಳಿಂದ ಸಹಕಾರ ದೊರಕಲಿದೆ. ಹೊಸ ವ್ಯವಹಾರಗಳ ಬಗ್ಗೆ ಚಿಂತನೆ. ನ್ಯಾಯಾಲಯದಲ್ಲಿ ಜಯ ಸಾಧ್ಯತೆ.

ಸಿಂಹ: ಕುಟುಂಬದಲ್ಲಿ ಸುಖ ಶಾಂತಿ ನೆಲೆಸಿ ಮಾನಸಿಕ ನೆಮ್ಮದಿ. ಕಾರ್ಯಕಲಾಪಗಳಲ್ಲಿ ಪ್ರಗತಿ ಕಂಡುಬರುವುದು. ಕೊಡುಕೊಳ್ಳುವ ವ್ಯವಹಾರಗಳಲ್ಲಿ ಲಾಭ ನಿರೀಕ್ಷಿಸಬಹುದು. ದೂರ ಪ್ರಯಾಣದ ಯೋಜನೆ ರೂಪುಗೊಳ್ಳುವ ಸಾಧ್ಯತೆ.

ಕನ್ಯಾ: ನಿರೀಕ್ಷಿತ ಕೆಲಸ ಕಾರ್ಯಗಳು ಫಲ ನೀಡಿ ಸಂತಸದ ವಾತಾವರಣ. ವ್ಯಾಪಾರದಲ್ಲಿ ಲಾಭ. ಆತ್ಮೀಯ ವ್ಯಕ್ತಿಗಳ ಸಂದರ್ಶನ ಸಾಧ್ಯತೆ. ದೂರದಲ್ಲಿರುವ ಮಕ್ಕಳಿಂದ ಸಹಾಯ. ಉದ್ಯೋಗಸ್ಥರಿಗೆ ಮೇಲಾಧಿಕಾರಿಗಳಿಂದ ಪ್ರಶಂಸೆ.

ತುಲಾ: ಕಾರ್ಯಬಾಹುಳ್ಯದಿಂದಾಗಿ ಒತ್ತಡ ಹೆಚ್ಚಾಗಿ ಕೆಲಸ ಕಾರ್ಯಗಳಲ್ಲಿ ಮಂದಗತಿ. ದಾಯಾದಿ ಕಲಹ ಸಂಭವಿಸುವ ಸಾಧ್ಯತೆ. ವಾಹನ ಪ್ರಯಾಣದ ಬಗ್ಗೆ ಎಚ್ಚರಿಕೆ ವಹಿಸುವುದು ಸೂಕ್ತ.

ವೃಶ್ಚಿಕ: ಉದ್ಯೋಗ ಕ್ಷೇತ್ರದಲ್ಲಿ ಸಮಾಧಾನ. ಕುಟುಂಬದಲ್ಲಿ ಶಾಂತವಾತಾವರಣ. ವಿದ್ಯಾರ್ಥಿಗಳಿಗೆ ಆಟಪಾಠಗಳಲ್ಲಿ ಹೆಚ್ಚಿನ ಪ್ರಗತಿ. ಉದ್ಯೋಗಸ್ಥರಿಗೆ ಕಚೇರಿ ಲೆಕ್ಕಪತ್ರಗಳಲ್ಲಿನ ತೊಡಕುಗಳ ನಿವಾರಣೆ.

ಧನು: ಕೆಲಸ ಕಾರ್ಯಗಳು ಸುಲಭವಾಗಿ ನೆರವೇರಿ ಸಂತಸವನ್ನುಂಟು ಮಾಡುವುದು. ಲೇವಾದೇವಿ ಹಣಕಾಸು ವ್ಯವಹಾರಸ್ಥರಿಗೆ ಅಧಿಕ ಲಾಭ. ಉದ್ಯೋಗ ನಿಮಿತ್ತ ವಿದೇಶ ಯಾನದ ಸಾಧ್ಯತೆ.

ಮಕರ: ಅನಿರೀಕ್ಷಿತ ಪ್ರಯಾಣ ಸಂಭವಿಸಿ ವೃಥಾ ಖರ್ಚಿಗೆ ನಾಂದಿಯಾಗುವ ಸಾಧ್ಯತೆ. ಆತ್ಮೀಯರ ಆರೋಗ್ಯದಲ್ಲಿ ವ್ಯತ್ಯಯ. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ. ಹಿತಶತ್ರುಗಳ ಭಯ ಆವರಿಸಬಹುದು.

ಕುಂಭ: ನಿರೀಕ್ಷಿತ ಕೆಲಸ ಕಾರ್ಯಗಳು ನಡೆಯದೇ ವ್ಯತಿರಿಕ್ತ ಪರಿಣಾಮಗಳುಂಟಾಗಬಹುದು. ಅಹಿತಕರ ಘಟನೆಗಳಿಂದಾಗಿ ವೃಥಾ ದಂಡ ತೆರಬೇಕಾದೀತು. ಲೇವಾದೇವಿ ವ್ಯವಹಾರವನ್ನು ದಿನದಮಟ್ಟಿಗೆ ಮುಂದೂಡುವುದು ಉಚಿತ.

ಮೀನ: ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆ ಮೀರಿದ ಲಾಭ. ಬಹುದಿನಗಳಿಂದ ನಿರೀಕ್ಷೆಯಲ್ಲಿದ್ದ ಸಮಾಚಾರ ಕೇಳಿ ದುಗುಡ ನಿವಾರಣೆ. ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ಅಗತ್ಯ. ಸಂಗಾತಿಯೊಂದಿಗೆ ಸುಮಧುರ ಬಾಂಧವ್ಯ.

ನಿಮ್ಮ ಜನ್ಮದಿನ 29-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವಿದ್ಯಾಭ್ಯಾಸದಲ್ಲಿ ಉನ್ನತಿಯನ್ನು ಸಾಧಿಸುವ ಎಲ್ಲ ಸಾಧ್ಯತೆಗಳು ಕಂಡುಬರುತ್ತಿದೆ. ಪ್ರಗತಿಪರರಾದ ಉದ್ಯೋಗ ಕ್ಷೇತ್ರದಲ್ಲಿಯೂ ಹೊಸ ಹೊಸ ಆವಿಷ್ಕಾರವನ್ನು ಮಾಡುವ ಮೂಲಕ ಪ್ರಗತಿಯನ್ನು ಕಾಣುವಿರಿ. ಕೌಟುಂಬಿಕ ಜೀವನವು ಉತ್ತಮವಾಗಿದ್ದು, ಸಂಗಾತಿಯೊಂದಿಗೆ ನೆಮ್ಮದಿ ಕಾಣುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಎರಡು ಪ್ರಪಂಚಗಳ ನಡುವಿನ ಸೇತುವೆಗಳು

ಅಳುವೇನು ? ನಗುವೇನು? ಹೃತ್ಕಪಾಟೋದ್ಘಾಟ |
ಶಿಲೆಯೆ ನೀಂ ಕರಗದಿರಲ್ ? ಅರಳದಿರೆ
ಮರಳೇಂ ? ||
ಒಳಜಗವ ಹೊರವಡಿಪ,
ಹೊರಜಗವನೊಳಕೊಳುವ |
ಸುಳುದಾರಿಯಳುನಗುವು – ಮಂಕುತಿಮ್ಮ || 422||

ಪದ-ಅರ್ಥ: ಹೃತ್ಕಪಾಟೋದ್ಘಾಟ = (ಹೃತ್ + ಕಪಾಟ + ಉದ್ಘಾಟ) ಹೃದಯದ ಬಾಗಿಲುಗಳನ್ನು ತೆರೆಯುವುದು, ಮರಳೇಂ = ಹುಚ್ಚೇ, ಹೊರವಡಿಪ = ಹೊರಗೆ ಹಾಕುವ, ಹೊರಜಗವನೊಳಕೊಳುವ = ಹೊರಜಗವ (ಹೊರಗಿನ ಜಗತ್ತನ್ನು) + ಒಳಕೊಳುವ (ಒಳಗೆ ತರುವ), ಸುಳುದಾರಿಯಳು ನಗುವು = ಸುಳುದಾರಿ (ಸುಲಭದ ದಾರಿ) + ಅಳು + ನಗುವು.

ವಾಚ್ಯಾರ್ಥ: ಅಳು, ನಗುಗಳು ಹೃದಯ ಬಾಗಿಲುಗಳನ್ನು ತೆರೆಯುವ ಉಪಾಯಗಳು. ಕರಗದೆ ಇರಲು ನೀನೇನು ಕಲ್ಲೇ? ಉಲ್ಲಾಸಗೊಳ್ಳದಿರಲು ನೀನು ಮರುಳೇ? ಈ ಅಳು, ನಗುಗಳು ಆಂತರಿಕ ಜಗತ್ತನ್ನು ಹೊರತರುವ ಮತ್ತು ಹೊರಜಗತ್ತನ್ನು ಒಳಗೆಳೆದುಕೊಳ್ಳುವ ಸುಲಭದ ದಾರಿಗಳು.


ವಿವರಣೆ: ಪ್ರಪಂಚದಲ್ಲಿ ಅತ್ಯಂತ ಮಧುರವಾದ ಆದರೆ ಎಂದೂ ಪರಸ್ಪರ ಬೆಟ್ಟಿಯಾಗದ ಜೋಡಿಯೆಂದರೆ ನಗು-ಅಳು. ಅವು ನಾಣ್ಯದ ಎರಡು ಮುಖಗಳಿದ್ದಂತೆ. ಮನದ ಕೋಟೆಯೊಳಗೆ ನಡೆದ ವ್ಯವಹಾರವನ್ನು ಬಯಲು ಮಾಡುವ ಹೆಬ್ಬಾಗಿಲುಗಳು ಇವು. ಹೃದಯದಲ್ಲಿ ಸಂತಸದ ಬುಗ್ಗೆ ಚಿಮ್ಮಿದರೆ ತಕ್ಷಣ ಮುಖದ ಮೇಲೆ ನಗು ಮೂಡುತ್ತದೆ. ಮನದಲ್ಲಿ ದು:ಖ ಮೊಳೆತರೆ, ಕಣ್ಣಲ್ಲಿ ನೀರು ಜಿನುಗುತ್ತದೆ, ಮಂದಹಾಸ ಮಾಯವಾಗುತ್ತದೆ. ಅದಕ್ಕೆ ಈ ಕಗ್ಗ ಒಂದು ಸುಂದರ ಪದದ ಬಳಕೆ ಮಾಡುತ್ತದೆ -ಹೃತ್ಕ-ಪಾಟೋದ್ಘಾಟ-ಹೃದಯವೆಂಬ ಕಪಾಟಿನ ಬಾಗಿಲುಗಳನ್ನು ತೆರೆಯುವುದು. ಜೀವನದ ಪ್ರತಿಕ್ಷಣದಲ್ಲೂ ಪರೀಕ್ಷೆಗೆ ಮುಖಾಮುಖಿಯಾಗುವಾಗ ದುಃಖ, ಸುಖಗಳೆರಡೂ ದಕ್ಕುತ್ತವೆ. ದು:ಖಕ್ಕೆ ಕರಗದಿರಲು ನಾವು ನಿರ್ಜೀವವಾದ ಶಿಲೆಯೆ? ಸಂತೋಷಕ್ಕೆ ಮನಸ್ಸು ಅರಳದಿರಲು ಸಾಧ್ಯವೇ? ನಾವು ಏಕಕಾಲದಲ್ಲಿ ಎರಡು ಮನೆಗಳಲ್ಲಿ ವಾಸಿಸುತ್ತಿದ್ದೇವೆ. ಒಂದು ಅಂತರಂಗದ ಮನೆ, ಮತ್ತೊಂದು ಹೊರಗಿರುವ ಪ್ರಪಂಚದ ಮನೆ. ಅಂತರಂಗದಲ್ಲಿ ಒಂದು ಸವಿಯಾದ, ಹಿತವಾದ ಅನುಭವ ನಗುವಾಗಿ ಹೊಮ್ಮಿದ್ದು ಹೊರ ಪ್ರಪಂಚಕ್ಕೆ ಗೋಚರವಾಗುತ್ತದೆ. ಹೊರಗಿನ ಪ್ರಪಂಚದಲ್ಲಿ ಕಂಡ ದುಃಖ, ಒಳಪ್ರಪಂಚದಲ್ಲಿ ಕುದಿದು ಕಣ್ಣೀರು ಬರಿಸುತ್ತದೆ. ಹೀಗೆ ಈ ಅಳು-ನಗುಗಳು ನಮ್ಮ ಒಳಜಗತ್ತನ್ನು ಹೊರಗೆ ತೋರ್ಪಡಿಸುವ ಮತ್ತು ಹೊರಜಗತ್ತಿನ ಸನ್ನಿವೇಶಗಳು ಅಂತರಂಗದ ಭಾವನೆಗಳಿಗೆ ಪ್ರಚೋದನೆ ನೀಡುವುದಕ್ಕಾಗಿ ಇರುವ ಸುಲಭದ ದಾರಿಗಳು. ಈ ದಾರಿಗಳನ್ನು ನಾವೇ ಕಂಡುಕೊಳ್ಳಬೇಕು. ಮನೆಯ ಮುಂದಿನ ತೋಟದಲ್ಲಿ ಹೂಗಳಿರಬೇಕೆಂದರೆ ಏನು ಮಾಡಬಹುದು? ರಾಶಿ ರಾಶಿ ಪ್ಲಾಸ್ಟಿಕ್ ಹೂಗಳನ್ನು ತಂದು ಜೋಡಿಸಿದರಾಗದೇ? ಅವು ಎಂದಿಗೂ ಸಂತೋಷಕೊಡಲಾರವು. ಆದರೆ ಮಣ್ಣು, ಗೊಬ್ಬರ, ನೀರು, ಬಿಸಿಲು ಸರಿಯಾಗಿ, ಹದವಾಗಿ ಇರುವಂತೆ ನೋಡಿ, ಉತ್ತಮ ಮಟ್ಟದ ಬೀಜಗಳನ್ನು ಹಾಕಿದರೆ ಹೂಗಳು ತಾನೇ ಅರಳಿ ಮುದಕೊಡುತ್ತವೆ. ಅಂತೆಯೇ ಮುಖದಲ್ಲಿ ಮಂದಹಾಸವೂ ಒಂದು ಪರಿಣಾಮ. ಸುಮ್ಮನೆ ನಗಲು ಹೊರಟರೆ ಪೆದ್ದರಂತೆ ಕಾಣುತ್ತೇವೆ. ಆನಂದ, ಸಂತೋಷಗಳು ಸಾಧನೆಗಳಲ್ಲ. ಅವು ಆಂತರ್ಯದ ಅನುಭವದ ಪರಿಣಾಮಗಳು. ಅದಕ್ಕಾಗಿಯೇ ಅಳು, ನಗುಗಳು ಆಂತರ್ಯದ ಹಾಗೂ ಹೊರಪ್ರಪಂಚದ ಸುಲಭವಾದ ಮತ್ತು ಖಚಿತವಾದ ಸೇತುವೆಗಳು. ❖

ಪದಬಂಧ 4642

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅತ್ಯಂತ ಸರಾಗವಾದ ಹಂಚಿಕೆ (5)
4.ಪಾಂಡಿತ್ಯವನ್ನು ಹೊಂದಿದವಳು (3)
5.ಇದು ಸವಿಯಾದುದು (3)
6.ಹತಾರು ಹಿಡಿದಿದ್ದರೂ ನಿರಾಶೆ! (3)
8.ರಾಕ್ಷಸರ ಶಿಲ್ಪಿ (2)
9.ಬಾಳೆಕುಡಿ ಕತ್ತಸಿದ ಕಿರುಗತ್ತಿ (2)
11.ಮಂದಿ ಹೊಕ್ಕಿರುವ ಗುಡಿ (3)
14.ಜನರ ನಡುವೆಯೇ ನುಗ್ಗಿರುವ ಆಳು (3)
15.ಪೂಜೆ ಮಾಡುವವನು (3)
16.ಹಳೆದನ್ನು ಹೊಸದು ಮಾಡುವಿಕೆ (5)

ಮೇಲಿಂದ ಕೆಳಕ್ಕೆ
1.ವಿಶ್ರಾಂತಿಯನ್ನು ಕೊಡುವ ಪೀಠ (4)
2. ಊಟದ ಮನೆಯಿದು (5)
3.ಯಮನ ಬಳಿಯಿರುವ ಜೋಡಿ (3)
4.ಪ್ರೇಮಿಗಳ ಅಗಲಿಕೆಯ ನೋವು (3)
7.ತಾರೀಫು ಮಾಡಿದ ದಿನಾಂಕ! (3)
8.ಬಿಡದಿಯಲ್ಲಿರುವ ಪತ್ನಿ (3)
9.ಲಾಂಗೂಲ ಹಿಡಿದಿರುವ ಹಿಂಬಾಲಕ! (5)
10.ಕರುಣೆಯೇ ಇಲ್ಲದ ಕ್ರೂರ (4)
12.ಮಡಿವಾಳನನ್ನು ಹೀಗೂ ಕರೆವರು (3)
13.ಆ ಕಡೆ ನಿಂತಿರುವವನ ಮುಖ (3)



4641ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಕಲಾವಿದ 3.ಶತಪದಿ 5.ಶರೀರ 6.ತಿಲೋದಕ 8.ಣಗುಸು 10.ಮಮತೆ 12.ನಸುನಗು 15.ವಠಾರ 16.ಕೆನೆಹಾಲು 17.ಕಡುಗಲಿ

ಮೇಲಿಂದ ಕೆಳಕ್ಕೆ: 1.ಕಸೂತಿ 2.ದಶಕ 3.ಶರಣ 4.ದಿಣ್ಣೆ 7.ಲೋಕಾಭಿರಾಮ 9.ಸುಪ್ತಚೇತನ 11.ತೆವಲು 12.ನರಕ 13.ಗುದ್ದಲಿ 14.ಸೆಕೆ

ಸುಡೊಕು 5028

	4				7			
8			1			2		7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5027 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ರಾಜ್ಯದಲ್ಲಿ 1 ಲಕ್ಷಕ್ಕೂ ಹೆಚ್ಚು ಡೋಸ್ ಲಸಿಕೆ ಪೋಲು

II ಪುಟದಿಂದ...

11 ಎಂಎಲ್ ಲಸಿಕೆಗಳನ್ನು ಒಳಗೊಂಡ ಪ್ರತಿ ಕೋವಿಶೀಲ್ಡ್ ಮತ್ತು ಕೊವ್ಯಾಕ್ಸಿನ್ ವಯಲ್ಸ್ ಅನ್ನು, ಗರಿಷ್ಠ 4 ತಾಸು ತೆರೆದಿಡಬಹುದಾಗಿದೆ. ಅಷ್ಟರಲ್ಲಿ ಬಳಸದಿದ್ದರೆ ವ್ಯರ್ಥವಾಗುತ್ತವೆ. ಒಂದು ವಯಲ್ಸ್ ತೆರೆದರೆ ಕನಿಷ್ಠ 10 ಮಂದಿಗೆ ನೀಡಬೇಕು. ಆದರೆ, ಆರಂಭಿಕ ಹಂತದಲ್ಲಿ 10ಕ್ಕಿಂತಲೂ ಕಡಿಮೆ ಮಂದಿಗೆ ನೀಡಲಾಗಿದೆ. ಇದರಿಂದಾಗಿ, ಹೆಚ್ಚಿನ ಲಸಿಕೆಗಳು ಪೋಲಾಗಿವೆ ಎಂದು ಹೆಸರು ಹೇಳಲು ಇಚ್ಛಿಸದ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಲಸಿಕೆಯಲ್ಲಿ ಹೆಚ್ಚಿನ ಸಾಧನೆ ಮಾಡಿರುವ ಶಿವಮೊಗ್ಗ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು, ಹೆಚ್ಚುವರಿ ಲಸಿಕೆಗಳನ್ನು ಬಳಸಿರುವುದನ್ನು ಈ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳು ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳು ಖಚಿತಪಡಿಸಿದ್ದಾರೆ. ಧಾರವಾಡ ಜಿಲ್ಲಾಧಿಕಾರಿ ನಿತೇಶ ಪಾಟೀಲ ಮಾತನಾಡಿ, 'ಜಿಲ್ಲೆಯಲ್ಲಿ ಲಸಿಕೆ ಪೋಲಾಗದಂತೆ ನಿಗಾ ವಹಿಸಲಾಗಿದೆ. ನಮಗೆ ನಿಗದಿಗಿಂತ ಶೇ 4.25 ಹೆಚ್ಚುವರಿ ಡೋಸ್ ಸಿಕ್ಕಿದ್ದು, 8,786 ಮಂದಿಗೆ ಅವುಗಳನ್ನು ನೀಡಲಾಗಿದೆ' ಎಂದರು.

ಈ ಕುರಿತು ಪ್ರತಿಕ್ರಿಯೆಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರೋಗನಿರೋಧ ವಿಭಾಗದ ಉಪ ನಿರ್ದೇಶಕರಾದ ಡಾ.ರಜನಿ ನಾಗೇಶ್‌ರಾವ್ ಮತ್ತು ಡಾ. ಅರುಂಧತಿ ಚಂದ್ರಶೇಖರ್ ಅವರಿಗೆ 'ಪ್ರಜಾವಾಣಿ' ಕರೆ ಮಾಡಿದರೂ ಪ್ರತಿಕ್ರಿಯಿಸಲಿಲ್ಲ.

ಜಿಲ್ಲಾವಾರು ಲಸಿಕೆ ಪೋಲು ವಿವರ

ಜಿಲ್ಲೆ	ಎಷ್ಟು	ಶೇಕಡವಾರು	ಜಿಲ್ಲೆ	ಎಷ್ಟು	ಶೇಕಡವಾರು
ಬಾಗಲಕೋಟೆ	22,196	12.66	ಚಿಕ್ಕಬಳ್ಳಾಪುರ	6501	4.17
ಹಾಸನ	17028	8.01	ಬಳ್ಳಾರಿ	9859	3.86
ಕೊಪ್ಪಳ	7799	0.48	ಚಾಮರಾಜನಗರ	3967	3.58
ರಾಮನಗರ	8060	5.40	ವಿಜಯಪುರ	4667	2.48
ಯಾದಗಿರಿ	3898	5.15	ಗದಗ	2476	2.36

ರಾಷ್ಟ್ರದಾದ್ಯಂತ 12 ಕೋಟಿ ಲಸಿಕೆ ಮಾತ್ರ ಹಂಚಲಿರುವ ಕೇಂದ್ರ ಸರ್ಕಾರ

ಜುಲೈನಲ್ಲಿ ರಾಜ್ಯಕ್ಕೆ 60 ಲಕ್ಷ ಡೋಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಜುಲೈ ತಿಂಗಳಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಒಟ್ಟು 60 ಲಕ್ಷ ಡೋಸ್ ಕೋವಿಡ್–19 ಲಸಿಕೆ ಹಂಚಿಕೆ ಮಾಡಲಿದೆ. ಇದರಿಂದಾಗಿ ನಿತ್ಯ 2 ಲಕ್ಷ ಜನರಿಗೆ ಮಾತ್ರ ಲಸಿಕೆ ನೀಡಲು ಸಾಧ್ಯವಾಗಲಿದ್ದು, ರಾಜ್ಯ ಸರ್ಕಾರ ಆರಂಭಿಸಿರುವ ಅಭಿಯಾನ ವೇಗ ಕಳೆದುಕೊಳ್ಳುವ ಸಾಧ್ಯತೆ ಇದೆ.

ಕೇಂದ್ರ ಸರ್ಕಾರ ಶನಿವಾರ ಸಂಜೆ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಹೇಳಿಕೆಯ ಪ್ರಕಾರ, ಜುಲೈನಲ್ಲಿ ಖಾಸಗಿಯವರಿಗೆ ವಿತರಿಸುವುದೂ ಒಳಗೊಂಡಂತೆ ರಾಷ್ಟ್ರದಾದ್ಯಂತ 12 ಕೋಟಿ ಡೋಸ್ ಲಸಿಕೆ ಮಾತ್ರ ಲಭ್ಯವಾಗಲಿದೆ.

ಕರ್ನಾಟಕವು ಈ ಅವಧಿಯಲ್ಲಿ ಒಟ್ಟು 59,98,450 ಡೋಸ್ ಲಸಿಕೆ ಪಡೆಯಲಿದೆ. ಆ ಪೈಕಿ 49,77,830 ಕೋವಿಶೀಲ್ಡ್ ಲಸಿಕೆ, 10,20,630 ಡೋಸ್ ಕೋವ್ಯಾಕ್ಸಿನ್ ಲಸಿಕೆ ರಾಜ್ಯಕ್ಕೆ ಲಭ್ಯವಾಗಲಿದೆ. ಅದರಲ್ಲಿ ಖಾಸಗಿಯವರಿಗೆ 12,44,460 ಕೋವಿಶೀಲ್ಡ್, 2,55,160 ಡೋಸ್ ಕೋವ್ಯಾಕ್ಸಿನ್ ದೊರೆಯಲಿದೆ.

ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯಗಳಾದ ಉತ್ತರ ಪ್ರದೇಶ (1.91 ಕೋಟಿ) ಹಾಗೂ ಮಹಾರಾಷ್ಟ್ರ (1.51 ಕೋಟಿ) ಮಾತ್ರ ಮುಂದಿನ ತಿಂಗಳು ಒಂದು ಕೋಟಿಗೂ ಅಧಿಕ ಡೋಸ್ ಲಸಿಕೆ ಪಡೆಯುವ ರಾಜ್ಯಗಳಾಗಿವೆ.

ನಿತ್ಯವೂ ರಾಷ್ಟ್ರದಾದ್ಯಂತ 1 ಕೋಟಿ ಡೋಸ್ ಲಸಿಕೆ ಒದಗಿಸುವುದಾಗಿ ಭರವಸೆ ನೀಡಿದ್ದರೂ, ಕಳೆದ ವಾರದವರೆಗೆ ಸರಾಸರಿ 64 ಲಕ್ಷ ಡೋಸ್ ಒದಗಿಸಿದ್ದ ಕೇಂದ್ರ, ಮುಂದಿನ ತಿಂಗಳಿನ ಹಂಚಿಕೆಯ ಪ್ರಕಾರ ಪ್ರತಿ ದಿನ ಸರಾಸರಿ 38 ಲಕ್ಷ ಡೋಸ್ ಲಸಿಕೆ ಒದಗಿಸಲಿದೆ.

ಕರ್ನಾಟಕದ ಆರೋಗ್ಯ ಇಲಾಖೆ ಒದಗಿಸಿರುವ ಮಾಹಿತಿ ಪ್ರಕಾರ ಜೂನ್ 21ರಿಂದ 27ರವರೆಗೆ 26 ಲಕ್ಷ ಡೋಸ್ ನೀಡಲಾಗಿದೆ. ಇದೇ ಅವಧಿಯಲ್ಲಿ ಕೇರಳದಲ್ಲಿ 36.50 ಲಕ್ಷ, ಆಂಧ್ರಪ್ರದೇಶದಲ್ಲಿ 70.86 ಲಕ್ಷ, ತೆಲಂಗಾಣದಲ್ಲಿ 27.99 ಲಕ್ಷ, ತಮಿಳುನಾಡಿನಲ್ಲಿ 71.01 ಲಕ್ಷ ಡೋಸ್ ಲಸಿಕೆ ಹಾಕಲಾಗಿದೆ.

ಕೋವಿಡ್ ದೃಢ ಪ್ರಮಾಣ ಶೇ 1.92ಕ್ಕೆ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ದೃಢ ಪ್ರಮಾಣ ಶೇ 1.92ಕ್ಕೆ ಇಳಿದಿದೆ. ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ನಂತರ ವರದಿಯಾದ ಅತೀ ಕಡಿಮೆ ಪ್ರಮಾಣ ಇದಾಗಿದೆ.

ಸೋಂಕಿತರ ಸಂಖ್ಯೆಯೂ ಗಣನೀಯ ಪ್ರಮಾಣದಲ್ಲಿ ತಗ್ಗಿದೆ. ಹೊಸದಾಗಿ 2,576 ಮಂದಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ಹಿಂದಿನ 24 ಗಂಟೆಗಳಲ್ಲಿ 93 ಮಂದಿ ಸಾವಿಗೀಡಾಗಿದ್ದು, ಮರಣ ಪ್ರಮಾಣ ದರ ಶೇ 3.61ರಷ್ಟಿದೆ. ಒಂದೇ ದಿನ 1.33 ಲಕ್ಷ ಮಂದಿಯ ಮಾದರಿಗಳನ್ನು ಪರೀಕ್ಷಿಸಲಾಗಿದೆ.

ರಾಜ್ಯದಲ್ಲಿ ಸೋಮವಾರ 5,933 ಮಂದಿಯಲ್ಲಿ ಕಾಯಿಲೆ ವಾಸಿಯಾಗಿದೆ. ಹೀಗಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 97,592ಕ್ಕೆ ತಗ್ಗಿದೆ. ಈವರೆಗೆ 27.04 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ಬೆಂಗಳೂರು ಸೇರಿ ರಾಜ್ಯದ ಇತರ ಜಿಲ್ಲೆಗಳಲ್ಲೂ ಸೋಂಕಿತರ ಸಂಖ್ಯೆ ಕ್ಷೀಣಿಸಿದೆ. ಬೆಂಗಳೂರಿನಲ್ಲಿ ಮತ್ತೆ 563 ಮಂದಿಯಲ್ಲಿ ಸೋಂಕು ಕಾಣಿಸಿಕೊಂಡಿದೆ.

'ಕೇರಳದಿಂದ ಬರುವವರಿಗೆ ನೆಗೆಟಿವ್ ವರದಿ ಕಡ್ಡಾಯ'

ಮಂಗಳೂರು: ಕೇರಳ ಗಡಿ ಭಾಗದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು, ಡೆಲ್ಟಾ ಪ್ಲಸ್ ಸೋಂಕು ಕಾರಣದಿಂದ ಕೇರಳ ಗಡಿಯನ್ನು ಹಂಚಿಕೊಳ್ಳುವ ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ರಾಜ್ಯ ಸರ್ಕಾರ ನಿರ್ದೇಶನ ನೀಡಿದೆ.

'ಅದರಂತೆ ಕೇರಳದಿಂದ ಜಿಲ್ಲೆಗೆ ಬರುವವರಿಗೆ ಮಂಗಳವಾರ (ಜೂ.29)ದಿಂದ ಆರ್‌ಟಿಪಿಸಿಆರ್ ನೆಗೆಟಿವ್ ವರದಿ ಕಡ್ಡಾಯಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ. ತಿಳಿಸಿದ್ದಾರೆ. 'ಮಂಗಳವಾರದಿಂದ ಇದು ಜಾರಿಗೆ ಬರಲಿದೆ. ಪರೀಕ್ಷೆಗಾಗಿ ಗಡಿ ಭಾಗದ ಚೆಕ್‌ಪೋಸ್ಟ್‌ಗಳಲ್ಲಿ ಗಂಟಲು ದ್ರವ ಸಂಗ್ರಹ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದರು.

ರಕ್ತ ಕ್ಯಾನ್ಸರ್‌ಗೆ ಕನ್ನಡಿಗನ ಕ್ರಾಂತಿಕಾರಿ ಚಿಕಿತ್ಸೆ

II ಪುಟದಿಂದ...

ದೇಹದಲ್ಲಿ ಕ್ಯಾನ್ಸರ್ ಕೋಶಗಳನ್ನು ಸಂಪೂರ್ಣವಾಗಿ ನಾಶ ಮಾಡುವವರೆಗೆ ಇವು ವಿರಮಿಸುವುದಿಲ್ಲ. ಕ್ಯಾನ್ಸರ್ ಕೋಶಗಳು ನಾಶವಾದ ಬಳಿಕ ಸ್ವಲ್ಪ ಕಾಲ ದೇಹದಲ್ಲೇ ಉಳಿದಿರುತ್ತವೆ. ಬಳಿಕ ಕ್ರಮೇಣ ಲಯವಾಗುತ್ತವೆ.

ವಂಶವಾಹಿ ಮಾರ್ಪಾಡಿಗೆ ಎಷ್ಟು ಸಮಯ:? ರೋಗಿಯ ದೇಹದಿಂದ ಟಿ ಕೋಶಗಳನ್ನು ಸಂಗ್ರಹಿಸಿ, ಅವುಗಳ ವಂಶವಾಹಿ ಮಾರ್ಪಾಡಿಗೆ ಸಾಮಾನ್ಯವಾಗಿ 3 ರಿಂದ 6 ವಾರಗಳು ಬೇಕಾಗುತ್ತವೆ. ಆದರೆ, ರೋಗಿಯ ದೇಹದೊಳಗೆ ಕೋಶಗಳನ್ನು ಸೇರಿಸುವ ಮೂಲಕ ಚಿಕಿತ್ಸೆ ಆರಂಭಿಸಲಾಗುತ್ತದೆ. ಇದಕ್ಕೆ ಬೇಕಾಗುವ ಸಮಯ 1 ರಿಂದ 2 ಗಂಟೆಗಳು ಮಾತ್ರ.

ಚಿಕಿತ್ಸೆಯ ಬಳಿಕ ಕೆಲವು ಸಣ್ಣ ಪುಟ್ಟ ಅಡ್ಡ ಪರಿಣಾಮಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುವುದರಿಂದ, ಚಿಕಿತ್ಸೆಯ ನಂತರ ಒಂದು ತಿಂಗಳವರೆಗೆ ರೋಗಿಯ ಮೇಲೆ ನಿಗಾ ಇಡಲಾಗುತ್ತದೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1350 (1390)
ಸೋಯಾ (ರಿಫೈನ್ಡ್)	₹1290 (1290)
ಸೂರ್ಯಕಾಂತಿ (ರಿಫೈನ್ಡ್)	₹1350(1350)
ಪಾಮೋಲಿನ್	₹1155(1153)

ಜು.19, 22ಕ್ಕೆ ಎಸ್ಸೆಸ್ಸೆಲ್ಸಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಒಂದನೇ ಪುಟದಿಂದ

'ಅಂತಿಮ ಪ್ರವೇಶ ಪತ್ರ ಸಿದ್ಧಪಡಿಸಲಾಗಿದೆ. ಮಂಡಳಿಯ ಜಾಲತಾಣದ ಮುಖಾಂತರ ಶಾಲಾ ಲಾಗಿನ್‌ಗೆ ಇದೇ 29ರಂದು ಅಪ್‌ಲೋಡ್ ಮಾಡಲಾಗುವುದು. ಒಟ್ಟು 14,927 ಶಾಲೆಗಳಿಂದ ಮಂಡಳಿಯ ಜಾಲತಾಣದ ಶಾಲಾ ಲಾಗಿನ್ ಮುಖಾಂತರ ಶಾಲಾ ವಿದ್ಯಾರ್ಥಿಗಳ ಆಂತರಿಕ ಅಂಕಗಳನ್ನು ನಮೂದು ಮಾಡಲಾಗಿದೆ' ಎಂದೂ ಹೇಳಿದರು.

'ಆರೋಗ್ಯ ಇಲಾಖೆಯ ಸಲಹೆಯಂತೆಯೇ ಎಸ್ಸೆಸ್ಸೆಲ್ಸಿ ಪರೀಕ್ಷೆಯ ದಿನಗಳನ್ನು ಪ್ರಕಟಿಸಲಾಗಿದೆ' ಎಂದರು.

ಶಾಲೆ ಆರಂಭ ವಿಳಂಬ: '2021-22ನೇ ಸಾಲಿನ ಶೈಕ್ಷಣಿಕ ವರ್ಷ ಜುಲೈ 1ರಿಂದ ಆರಂಭವಾಗಲಿದ್ದರೂ ನೇರ ತರಗತಿಗಳನ್ನು ಆರಂಭಿಸುವುದಿಲ್ಲ. ಡಾ.ದೇವಿ ಶೆಟ್ಟಿ ಅವರ ವರದಿಯಲ್ಲಿರುವಂತೆ ಗ್ರಾಮೀಣ ಮಕ್ಕಳು ಕಲಿಕೆಯಿಂದ ವಂಚಿತರಾಗದಿರುವಂತೆ ಕ್ರಿಯಾಯೋಜನೆ ರೂಪಿಸಲು ವಿಷಯ ಪರಿಣತರು, ಸರ್ಕಾರದ ತಾಂತ್ರಿಕ ಸಲಹಾ ಸಮಿತಿ ಸದಸ್ಯರು, ಮಕ್ಕಳ ತಜ್ಞರನ್ನು ಒಳಗೊಂಡ ಕಾರ್ಯಪಡೆ ರಚಿಸಲಾಗುವುದು' ಎಂದು ಸುರೇಶ್‌ಕುಮಾರ್ ವಿವರಿಸಿದರು.


ಪಿಯು ಫಲಿತಾಂಶ: '2020-21ನೇ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶವನ್ನು ಜುಲೈ 2ನೇ ವಾರ ಪ್ರಕಟಿಸಲಾಗುವುದು. ಯಾವ ಆಧಾರದಲ್ಲಿ ಫಲಿತಾಂಶ ಘೋಷಿಸಬೇಕು ಎಂದು ಚರ್ಚಿಸಲು 12 ಮಂದಿ ತಜ್ಞರ ಸಮಿತಿ ರಚಿಸಲಾಗಿದೆ. ಈ ಸಮಿತಿ ಸಲಹೆಯನ್ನು ಪರಿಶೀಲಿಸಿ ಫಲಿತಾಂಶ ಘೋಷಿಸಲಾಗುವುದು. ಯಾವುದೇ ವಿದ್ಯಾರ್ಥಿಗೆ ಫಲಿತಾಂಶ ಕುರಿತು ತೃಪ್ತಿ ಇಲ್ಲದಿದ್ದರೆ ಮುಂದೆ ನಡೆಯಲಿರುವ ಪರೀಕ್ಷೆಗೆ ಹಾಜರಾಗಬಹುದು' ಎಂದು ತಿಳಿಸಿದರು.

> **ಪರೀಕ್ಷೆಯ ದಿನ ಕೇಂದ್ರದ ಸುತ್ತಮುತ್ತಲಿನ ಜೆರಾಕ್ಸ್ ಸೆಂಟರ್‌ಗಳನ್ನು ಮುಚ್ಚಿಸಲಾಗುವುದು, ಸೆಕ್ಷನ್ 144 ಜಾರಿಗೊಳಿಸಲಾಗುವುದು**
> **ಎಸ್. ಸುರೇಶ್‌ಕುಮಾರ್,** ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

'ಶಿಕ್ಷಕರ ವರ್ಗಾವಣೆ ವೇಳಾಪಟ್ಟಿ ನಾಳೆ'

'ಶಿಕ್ಷಕರ ವರ್ಗಾವಣೆಗೆ ವೇಳಾಪಟ್ಟಿ ಮತ್ತು ಅಧಿಸೂಚನೆ ಬುಧವಾರ (ಜೂನ್ 30) ಹೊರ ಬೀಳಲಿದ್ದು, ಅಂದಿನಿಂದಲೇ ಪ್ರಕ್ರಿಯೆ ಆರಂಭವಾಗಲಿದೆ' ಎಂದು ಸುರೇಶ್‌ಕುಮಾರ್ ತಿಳಿಸಿದರು. 'ವರ್ಗಾವಣೆ ಕಾಯ್ದೆಗೆ ಸುಗ್ರೀವಾಜ್ಞೆ ಮೂಲಕ ತಂದ ತಿದ್ದುಪಡಿಯ ಪ್ರಕಾರವೇ ಪ್ರಕ್ರಿಯೆ ನಡೆಯಲಿದೆ. 2019-2020ರಲ್ಲಿ ಕಡ್ಡಾಯ ಹಾಗೂ ಹೆಚ್ಚುವರಿ ವರ್ಗಾವಣೆಗೊಂಡ ಶಿಕ್ಷಕರಿಗೆ ಮೊದಲ ಆದ್ಯತೆ ಸಿಗಲಿದೆ. ಈ ಬಾರಿ ವಲಯ ಅಥವಾ ಹೆಚ್ಚುವರಿ ವರ್ಗಾವಣೆ ಇರುವುದಿಲ್ಲ. ಈಗಾಗಲೇ ಸ್ವೀಕೃತಗೊಂಡಿರುವ 75 ಸಾವಿರ ಅರ್ಜಿಗಳಿಗೆ ಸಂಬಂಧಿಸಿದಂತೆ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭಿಸಲಾಗುವುದು. ಇವರನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಅರ್ಹರಾಗುವ ಶಿಕ್ಷಕರಿಗೆ ಎರಡನೇ ಹಂತದಲ್ಲಿ ಅವಕಾಶ ನೀಡಲಾಗುವುದು' ಎಂದರು.

ಷೇರುಪೇಟೆ ವಹಿವಾಟು 189



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,860
ಇಂದಿನ ಅಂತ್ಯ	15,814
▼	46
ದಿನದ ಕನಿಷ್ಠ	15,792

ವಿನಿಮಯ ದರ

$ ಡಾಲರ್	74.19
£ ಪೌಂಡ್	103.26
€ ಯುರೊ	88.58
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹520

ಎಥೆನಾಲ್ ಎಂಜಿನ್: ಮೂರು ತಿಂಗಳಲ್ಲಿ ಯೋಜನೆ

ಮುಂಬೈ (ಪಿಟಿಐ): ಎಥೆನಾಲ್ ಅನ್ನೂ ಇಂಧನವಾಗಿ ಬಳಸುವ ಎಂಜಿನ್‌ಗಳನ್ನು ವಾಹನಗಳಲ್ಲಿ ಅಳವಡಿಸಲು ಅವಕಾಶ ನೀಡಲು ನಿರ್ಧರಿಸಲಾಗಿದ್ದು, ಈ ಸಂಬಂಧ ಯೋಜನೆಯೊಂದನ್ನು ಮೂರು ತಿಂಗಳಲ್ಲಿ ಜಾರಿಗೊಳಿಸಲಾಗುವುದು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಸೋಮವಾರ ತಿಳಿಸಿದ್ದಾರೆ.

ಪರ್ಯಾಯ ಇಂಧನ ಬಳಸಲು ಆಗುವಂತಹ ವಾಹನಗಳನ್ನು ಅಭಿವೃದ್ಧಿಪಡಿಸುವಂತೆ ಬಿಎಂಡಬ್ಲ್ಯು, ಮರ್ಸಿಡಿಸ್ ಮತ್ತು ಟೊಯೊಟಾದಂತಹ ಕಂಪನಿಗಳಿಗೆ ಅವರು ಹೇಳಿದ್ದಾರೆ. ಬಹುಪಾಲು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುವ ಭಾರತದಂತಹ ದೇಶಗಳಿಗೆ ಸ್ಥಳೀಯವಾಗಿ ತಯಾರಾದ ಎಥೆನಾಲ್ ಬಳಕೆ ಹೆಚ್ಚು ಪ್ರಯೋಜನಕಾರಿ ಎಂದಿದ್ದಾರೆ. ಎಥೆನಾಲ್ ಬೆಲೆ ಲೀಟರಿಗೆ ₹ 60ರಿಂದ ₹ 62 ರಷ್ಟಿದೆ. ಪೆಟ್ರೋಲ್ ಲೀಟರಿಗೆ ₹ 100ಕ್ಕಿಂತ ಹೆಚ್ಚಿಗೆ ಇದೆ.

ಷೇರು ಹೂಡಿಕೆ: ಅಲ್ಪವಿದ್ಯೆ ಅಪಾಯಕಾರಿ



ಅಡಿಪಾಯ ಭದ್ರವಾಗಿದ್ದರಷ್ಟೇ ಕಟ್ಟಡ ಬಲಿಷ್ಠವಾಗಿ ನಿಲ್ಲುತ್ತದೆ. ಷೇರು ಹೂಡಿಕೆಯಲ್ಲಿ ಕಲಿಕೆಯ ಅಡಿಪಾಯವಿದ್ದರಷ್ಟೇ ಗಳಿಕೆಯ ಲಾಭ ಪಡೆಯಲು ಸಾಧ್ಯ. ಷೇರುಗಳಲ್ಲಿನ ಹೂಡಿಕೆ ವಿಷಯದಲ್ಲಿ ಅವಸರದಲ್ಲಿ ಶ್ರೀಮಂತರಾಗುವ ಕನಸು ಕಂಡರೆ ಅಪಾಯ ಕಟ್ಟಿಟ್ಟಬುತ್ತಿ.

ನನ್ನ ಸ್ನೇಹಿತನೊಬ್ಬ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಾನೆ. ಆತನ ವೇತನ ಅಷ್ಟೇನೂ ಉತ್ತಮವಾಗಿಲ್ಲ. ಕಾರಣಾಂತರಗಳಿಂದ ಅವನ ಕುಟುಂಬದ ಆರ್ಥಿಕ ಸ್ಥಿತಿ ಕೆಟ್ಟಿತ್ತು. ಹಣಕಾಸಿನ ಪರಿಸ್ಥಿತಿ ಸುಧಾರಿಸಿಕೊಳ್ಳಲು ಏನಾದರೊಂದು ಪರ್ಯಾಯ ಆದಾಯದ ಮೂಲ ಹುಡುಕಬೇಕು ಎಂದು ಆತ ಆಲೋಚಿಸುತ್ತಿದ್ದ. ಆಗ, ಷೇರು ಮಾರುಕಟ್ಟೆಯಲ್ಲಿ ಟ್ರೇಡಿಂಗ್ ಮಾಡಿ ಸಿಕ್ಕಾಪಟ್ಟೆ ದುಡ್ಡು ಮಾಡಬಹುದು ಎಂಬ ಜಾಹೀರಾತು ಸಾಮಾಜಿಕ ಜಾಲತಾಣವೊಂದರಲ್ಲಿ ಗೋಚರಿಸಿತು. ಹಿಂದೆ ಮುಂದೆ ಯೋಚಿಸದೆ ಡಿಮ್ಯಾಟ್ ಮತ್ತು ಟ್ರೇಡಿಂಗ್ ಖಾತೆ ತೆರೆದ. ಷೇರು ಮಾರುಕಟ್ಟೆಯಲ್ಲಿ ಅತಿ ಹೆಚ್ಚು ಲಾಭ ಕೊಟ್ಟಿರುವ ಕಂಪನಿಗಳು ಯಾವುವು ಎಂದು ಗೂಗಲ್ ಮಾಡಿದ. ಒಂದು ದೊಡ್ಡ ಪಟ್ಟಿ ಬಂತು. ಅದನ್ನು ನಂಬಿ ಉಳಿತಾಯದ ದುಡ್ಡನ್ನೆಲ್ಲಾ ಷೇರು ಟ್ರೇಡಿಂಗ್‌ಗೆ ಬಳಸಿ ರಾತ್ರೋರಾತ್ರಿ ಶ್ರೀಮಂತನಾಗುವ ಕನಸು ಕಂಡ.

ಮೊದಲ ದಿನ, ಹೂಡಿದ ಹಣ ಹೋದಾಗ ಮರುದಿನ ಮರಳಿ ಬರಬಹುದೇನೋ ಎಂದು ಹೂಡಿಕೆ ಮುಂದುವರಿಸಿದ. ಲಾಭದ ವಿಚಾರ ಹಾಗಿರಲಿ, ₹ 20,000 ಅಸಲು ಕಳೆದುಕೊಂಡ. ಇಷ್ಟೆಲ್ಲಾ ಆದಮೇಲೆ ನನಗೆ ಕರೆ ಮಾಡಿದ. 'ಏನು ಮಾಡಲಿ? ಟ್ರೇಡಿಂಗ್ ಮಾಡಲು ಹೋಗಿ ಇಷ್ಟೆಲ್ಲಾ ಸಮಸ್ಯೆಯಾಗಿದೆ' ಎಂದು ಹೇಳಿದ. 'ಟ್ರೇಡಿಂಗ್ ಬಗ್ಗೆ ನಿನಗೆ ಏನು ಗೊತ್ತು' ಎಂದು ಕೇಳಿದೆ. 'ಅಷ್ಟೇನೂ ತಿಳಿದಿಲ್ಲ. ಚೆನ್ನಾಗಿ ದುಡ್ಡು ಗಳಿಸಬಹುದು ಎಂದು ಕೆಲವರು ಹೇಳಿದ್ದರು. ಹಾಗಾಗಿ ಹಣ ಹಾಕಿದೆ' ಅಂದ!

'ಹೋಗಿದ್ದು ಹೊಯ್ತು, ಕೂಡಲೇ ಟ್ರೇಡ್ ಮಾಡುವುದನ್ನು ನಿಲ್ಲಿಸು. ಷೇರು ಮಾರುಕಟ್ಟೆಯ ಬಗ್ಗೆ ಸರಿಯಾಗಿ ತಿಳಿದ ನಂತರದಲ್ಲಿ ಹೂಡಿಕೆ ಮಾಡು' ಎಂದು ಸಲಹೆ ನೀಡಿದೆ. ಇಷ್ಟೆಲ್ಲಾ ಆದ ಮೇಲೆ, ಈಗ ಆತ ಹೂಡಿಕೆಯ ಅ, ಆ, ಇ, ಈ ಕಲಿಯಲು ಶುರು ಮಾಡಿದ್ದಾನೆ. ಷೇರು ಮಾರುಕಟ್ಟೆಗೆ ಬೇಕಾದ ಮೂಲಭೂತ ತಿಳಿವಳಿಕೆ ಪಡೆಯುವೆ, ನಷ್ಟವಾಗಿರುವ ಹಣದ ಜತೆಗೆ ಲಾಭವನ್ನೂ ಗಳಿಸುವೆ ಎಂದು ನಿಶ್ಚಯ ಮಾಡಿದ್ದಾನೆ.

'ಅಯ್ಯೋ ₹ 20,000 ಅಷ್ಟು ದೊಡ್ಡ ಮೊತ್ತವೇ? ಹೋಗಲಿ ಬಿಡಿ, ಮತ್ತ್ಯಾವತ್ತೋ ಲಾಭ ಆಗುತ್ತೆ' ಅಂತ ನೀವು ಸುಲಭವಾಗಿ ನಿರ್ಧಾರಕ್ಕೆ ಬಂದುಬಿಟ್ಟಿರಬಹುದು. ಆದರೆ ಬಡವರಿಗೆ, ಮಧ್ಯಮ ವರ್ಗದವರಿಗೆ ₹ 20,000 ಎನ್ನುವುದು ಬಹಳ ದೊಡ್ಡ ಮೊತ್ತ. ಎಷ್ಟೋ ಜನರಿಗೆ ಅದು ಎರಡು ತಿಂಗಳ ಸಂಬಳ, ಕೆಲವರಿಗೆ ಮೂರು ತಿಂಗಳ ಗಳಿಕೆ.

ಅರಿತು ಹೂಡಿಕೆ ಮಾಡಬೇಕು, ಅದರ ಆಳ-ಅಗಲ ಗೊತ್ತಿರಬೇಕು. ಷೇರು ಮಾರುಕಟ್ಟೆಯಲ್ಲಿ ಟ್ರೇಡಿಂಗ್ ಮತ್ತು ಇನ್ವೆಸ್ಟಿಂಗ್ ಎಂಬ ಎರಡು ಪ್ರಮುಖ ವಿಚಾರಗಳ ಬಗ್ಗೆ ಪ್ರತಿ ಹೂಡಿಕೆದಾರನೂ ತಿಳಿದಿರಲೇಬೇಕಾದ ವಿವರಗಳನ್ನು ಮುಂದಿನ ಕಂತಿನಲ್ಲಿ ನೋಡೋಣ.

ಮೈಸೂರು, ಮಂಗಳೂರಿಗೂ ಬಾಡಿಗೆ ಸೇವೆ ವಿಸ್ತರಿಸಿದ ಮಾರುತಿ ಸುಜುಕಿ

ನವದೆಹಲಿ (ಪಿಟಿಐ): ಬಾಡಿಗೆ ಆಧಾರದಲ್ಲಿ ಕಾರುಗಳನ್ನು ಹೊಂದಲು ಅವಕಾಶ ಕಲ್ಪಿಸುವ ಸೇವೆಯನ್ನು ಮಂಗಳೂರು, ಮೈಸೂರು, ಜೈಪುರ, ಇಂದೋರ್ ನಗರಗಳಿಗೂ ವಿಸ್ತರಿಸಿರುವುದಾಗಿ ಮಾರುತಿ ಸುಜುಕಿ ಇಂಡಿಯಾ ಕಂಪನಿ ಸೋಮವಾರ ತಿಳಿಸಿದೆ. ಇದರಿಂದ ಒಟ್ಟಾರೆ 19 ನಗರಗಳಲ್ಲಿ ಈ ಸೇವೆ ಲಭ್ಯವಾದಂತಾಗಿದೆ ಎಂದು ಹೇಳಿದೆ.

ಈ ಸೇವೆಗಾಗಿ ಮಾರುತಿಯು, ಓರಿಕ್ಸ್ ಆಟೊ ಮ್ಯಾನುಫ್ಯಾಕ್ಚರಿಂಗ್ ಸರ್ವೀಸಸ್, ಎಎಲ್‌ಡಿ ಆಟೊಮೊಟಿವ್ ಇಂಡಿಯಾ ಮತ್ತು ಮೈಲ್ಸ್ ಆಟೊಮೊಟಿವ್ ಟೆಕ್ನಾಲಜೀಸ್ ಪ್ರೈ. ಲಿ. ಜೊತೆ ಪಾಲುದಾರಿಕೆ ಮಾಡಿಕೊಂಡಿರುವುದಾಗಿ ಕಂಪನಿಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ ಶಶಾಂಕ್ ಶ್ರೀವಾಸ್ತವ ತಿಳಿಸಿದ್ದಾರೆ.

ಮಾರುತಿ ಸುಜುಕಿ ಚಂದಾದಾರಿಕೆ ಯೋಜನೆಯನ್ನು 2020ರ ಜುಲೈನಲ್ಲಿ ಜಾರಿಗೆ ತಂದಿದೆ. ಇದರಲ್ಲಿ ಕಂಪನಿಯ ವ್ಯಾಗನ್‌ಆರ್, ಸ್ವಿಫ್ಟ್, ಡಿಸೈರ್, ವಿತಾರಾ ಬ್ರೆಜಾ, ಎರ್ಟಿಗಾ, ಇಗ್ನಿಸ್, ಬಲೆನೊ, ಸಿಯಾಜ್, ಎಸ್–ಕ್ರಾಸ್ ಮತ್ತು ಎಕ್ಸ್‌ಎಲ್6 ವಾಹನ ಆಯ್ಕೆ ಮಾಡಿಕೊಳ್ಳಬಹುದು. ವಿವಿಧ ಅವಧಿಗಳಿಗೆ ವಾಹನವನ್ನು ತಿಂಗಳ ಬಾಡಿಗೆ ಆಧಾರದಲ್ಲಿ ಚಲಾಯಿಸಬಹುದು. ವಾಹನ ಬಳಕೆ ಶುಲ್ಕ, ನೋಂದಣಿ ಶುಲ್ಕ, ನಿರ್ವಹಣೆ, ವಿಮೆ ಹಾಗೂ ವಾಹನ ಬಳಕೆಯ ಇತರೆ ಸಾಮಾನ್ಯ ಸೇವೆಗಳಿಗೆ ಸಂಬಂಧಿಸಿದ ಶುಲ್ಕಗಳು ಈ ತಿಂಗಳ ಬಾಡಿಗೆಯಲ್ಲಿ ಸೇರಿಕೊಂಡಿವೆ.

ಬಾಡಿಗೆ ಅವಧಿ ಮುಗಿಯುವ ವೇಳೆಗೆ ಹೊಸ ಕಾರಿಗೆ ಬದಲಾಯಿಸಲು ಅಥವಾ ಬಾಡಿಗೆಯ ಆಧಾರದಲ್ಲಿ ಪಡೆದಿದ್ದ ಕಾರನ್ನೇ ಖರೀದಿಸುವ ಆಯ್ಕೆ ಕೂಡ ಇದೆ.

ಸ್ಕೋಡಾ ಕುಶಾಕ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಕೋಡಾ ಕಂಪನಿಯು ಸೋಮವಾರ 'ಕುಶಾಕ್' ಬಿಡುಗಡೆ ಮಾಡುವ ಮೂಲಕ ಭಾರತದ ಮಧ್ಯಮ ಗಾತ್ರದ ಎಸ್‌ಯುವಿ ಮಾರುಕಟ್ಟೆ ಪ್ರವೇಶಿಸಿದೆ. ದೆಹಲಿಯಲ್ಲಿ ಇದರ ಎಕ್ಸ್ ಷೋರೂಂ ಬೆಲೆ ₹ 10.5 ಲಕ್ಷದಿಂದ ₹ 17.6 ಲಕ್ಷದವರೆಗಿದೆ.



ಮುಂಬೈ ಧಾರಣೆ

ಶೇಂಗಾ 28-6-2021

ಜಾವಾ 70/80(ಹೊಸ)	9700-9750
ಜಾವಾ 80/90(ಹೊಸ)	8950-9000
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1360 (1400)
ಒಂದು ವಾರದ ಡೆಲಿವರಿ	1355 (1395)
ಸೋಯಾ ಕಚ್ಚಾ	1240 (1225)
ಪಾಮ್ ವಾರದ ಡೆಲಿವರಿ	1153 (1151)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,000 (46,800)
ಬೆಳ್ಳಿ ಕೆ.ಜಿ 68,200 (68,300)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-42000
ಹಳತು	42500-52000
ಚಿತ್ರದುರ್ಗ	
ಆಪಿ	42029-42479
ಬೆಟ್ಟೆ	33919-34389
ಕೆಂಪುಗೋಟು	27800-28200
ರಾಶಿ	41539-41969

ಕುಮಟ	
ಚಿಪ್ಪು	29169-32189
ಕೋಕ	19569-29569
ಫ್ಯಾಕ್ಟರಿ	13569-17199
ಹಳೇಚಾಲಿ	40189-42199
ಸಿದ್ದಾಪುರ	
ಬಿಳಿಗೋಟು	26099-32229
ಚಾಲಿ	34061-38199
ಕೋಕ	19499-30199
ಕೆಂಪುಗೋಟು	28499-31899
ರಾಶಿ	38509-41999
ತಟ್ಟಿಬೆಟ್ಟೆ	32489-38899

ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	322-393
ದ್ವಿತಳಿ (ಬಿ.ವಿ)	316-489

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	11300
ಎಸಿ	4865
ಆರ್‌ಪಿ	5500
ಆರ್‌ಸಿ	3300

ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಆಕ್ರೋಶದ ನಂತರ ಚಿತ್ರ ತೆಗೆದುಹಾಕಿದ ಸಂಸ್ಥೆ

ಭಾರತದ ಭೂಪಟ ತಿರುಚಿದ ಟ್ವಿಟರ್

ನವದೆಹಲಿ (ಪಿಟಿಐ): ಟ್ವಿಟರ್ ತನ್ನ ಜಾಲತಾಣದಲ್ಲಿ ಭಾರತದ ಭೂಪಟವನ್ನು ತಪ್ಪಾಗಿ ತೋರಿಸಿತ್ತು. ವಿಶ್ವದ ಭೂಪಟದಲ್ಲಿ ಜಮ್ಮು-ಕಾಶ್ಮೀರ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತ್ಯೇಕ ದೇಶಗಳು ಎಂದು ತೋರಿಸಲಾಗಿತ್ತು. ಲಡಾಖ್‌ನ ಕೆಲವು ಭಾಗವನ್ನು ಚೀನಾ ಭೂಪಟದ ಜತೆ ಸೇರಿಸಲಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ಇದಕ್ಕೆ ಭಾರಿ ಆಕ್ರೋಶ ವ್ಯಕ್ತವಾಗಿದೆ. ಇದರ ಬೆನ್ನಲ್ಲೇ ಟ್ವಿಟರ್ ಆ ಭೂಪಟವನ್ನು ತನ್ನ ಜಾಲತಾಣದಿಂದ ತೆಗೆದುಹಾಕಿದೆ.

ಟ್ವಿಟರ್ ಜಾಲತಾಣದ 'ಕೆರಿಯರ್' ವಿಭಾಗದ 'ಟ್ವೀಪ್ ಲೈಫ್'ನಲ್ಲಿ ವಿಶ್ವದ ಭೂಪಟವನ್ನು ತೋರಿಸಲಾಗಿತ್ತು. ಆ ಭೂಪಟದಲ್ಲಿ ಭಾರತದ ಭೂಪಟವು ತಪ್ಪಾಗಿತ್ತು. 'ಭಾರತದ ಭೂಪಟವನ್ನು ತಪ್ಪಾಗಿ ತೋರಿಸಿರುವ ಟ್ವಿಟರ್ ವಿರುದ್ಧ ಕಠಿಣ ಕ್ರಮ ತೆಗದುಕೊಳ್ಳಿ' ಎಂದು ಸಾಮಾಜಿಕ ಜಾಲತಾಣಗಳಲ್ಲಿ ಆಗ್ರಹಿಸಲಾಗಿದೆ. ಟ್ವಿಟರ್ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

ಈ ಬಗ್ಗೆ ಪ್ರತಿಕ್ರಿಯೆ ಕೇಳಿ ಕಳುಹಿಸಿದ್ದ ಇ-ಮೇಲ್‌ಗೆ ಟ್ವಿಟರ್‌ನಿಂದ ಯಾವುದೇ ಸ್ಪಂದನೆ ಸಿಕ್ಕಿಲ್ಲ. ಆದರೆ ಚಿತ್ರವನ್ನು ತೆಗೆದುಹಾಕಲಾಗಿದೆ.

ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಪಾಲನೆ ಮಾಡುವುದರ ಸಂಬಂಧ ಕೇಂದ್ರ ಸರ್ಕಾರ ಮತ್ತು ಟ್ವಿಟರ್ ಮಧ್ಯೆ ಜಟಾಪಟಿ ನಡೆದಿತ್ತು. ಸುಳ್ಳು ಮಾಹಿತಿ ಪ್ರಸಾರವಾಗುವುದನ್ನು ತಡೆಯಲು ವಿಫಲವಾದ ಆರೋಪದಲ್ಲಿ ಟ್ವಿಟರ್ ವಿರುದ್ಧ ಉತ್ತರಪ್ರದೇಶದಲ್ಲಿ ಪ್ರಕರಣ ದಾಖಲಾಗಿದೆ. ಈ ಸಂದರ್ಭದಲ್ಲಿಯೇ ಟ್ವಿಟರ್‌ನಿಂದ ಈ ತಪ್ಪಾಗಿದೆ.

ಭಾರತದ ಭೂಪಟಕ್ಕೆ ಸಂಬಂಧಿಸಿದಂತೆ ಟ್ವಿಟರ್ ಈ ರೀತಿ ತಪ್ಪು ಎಸಗುತ್ತಿರುವುದು ಇದು ಮೂರನೇ ಬಾರಿ. ಹೀಗಾಗಿ ಟ್ವಿಟರ್ ವಿರುದ್ಧ ಆಕ್ರೋಶ ತೀವ್ರವಾಗಿದೆ. 2020ರಲ್ಲೂ ಲಡಾಖ್‌ನ ಒಂದು ಭಾಗ ಚೀನಾದ್ದು ಎಂದು ಟ್ವಿಟರ್ ತೋರಿಸಿತ್ತು. ಜಿಯೋಟ್ಯಾಗಿಂಗ್ ಮಾಡುವಾಗ ಲಡಾಖ್ ಚೀನಾದ ಒಂದು ಭಾಗ ಎಂದು ತೋರಿಸುತ್ತಿತ್ತು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಕೇಂದ್ರ ಸರ್ಕಾರ ನೋಟಿಸ್ ನೀಡಿದ ಬಳಿಕ ಟ್ವಿಟರ್ ತನ್ನ ಜಿಯೋಟ್ಯಾಗಿಂಗ್ ವ್ಯವಸ್ಥೆಯಲ್ಲಿ ಪರಿಷ್ಕರಣೆ ಮಾಡಿತ್ತು.

2020ರ ನವೆಂಬರ್‌ನಲ್ಲಿ ಲಡಾಖ್ ಕೇಂದ್ರಾಡಳಿತ ಪ್ರದೇಶದ ಪ್ರಮುಖ ಪಟ್ಟಣ ಲೇಹ್ ಅನ್ನು ಜಮ್ಮು-ಕಾಶ್ಮೀರದ ಭಾಗ ಎಂದು ತೋರಿಸಲಾಗಿತ್ತು. ಆಗಲೂ ಕೇಂದ್ರ ಸರ್ಕಾರವು ಟ್ವಿಟರ್‌ಗೆ ನೋಟಿಸ್ ನೀಡಿತ್ತು.



ಟ್ವಿಟರ್ ಜಾಲತಾಣದಲ್ಲಿ ಇದ್ದ ವಿಶ್ವದ ಭೂಪಟ. ಇದರಲ್ಲಿ ಭಾರತದ ಭೂಪಟವನ್ನು ತಪ್ಪಾಗಿ ತೋರಿಸಲಾಗಿತ್ತು. ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಟ್ವಿಟರ್ ತನ್ನ ಜಾಲತಾಣದಿಂದ ಈ ಚಿತ್ರವನ್ನು ತೆಗೆದುಹಾಕಿದೆ

ಮತ್ತೆ ಮತ್ತೆ ಜಟಾಪಟಿ

- ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳ ಅನ್ವಯ ಕುಂದುಕೊರತೆ ಅಧಿಕಾರಿಯನ್ನು ಕಾಲಮಿತಿಯಲ್ಲಿ ನೇಮಕ ಮಾಡದ ಕಾರಣ ಭಾರತದಲ್ಲಿ ಟ್ವಿಟರ್ ಕಾನೂನು ರಕ್ಷಣೆ ಕಳೆದುಕೊಂಡಿದೆ. ಗಾಜಿಯಾಬಾದ್ ಸುಳ್ಳುಸುದ್ದಿ ಪ್ರಕರಣದಲ್ಲಿ ಟ್ವಿಟರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ
- ಈಚೆಗೆ, ಕೇಂದ್ರ ಕಾನೂನು ಸಚಿವ ರವಿಶಂಕರ್ ಪ್ರಸಾದ್ ಅವರ ಟ್ವಿಟರ್ ಖಾತೆಯನ್ನು ಕೆಲವು ಗಂಟೆಗಳ ಕಾಲ ಟ್ವಿಟರ್ ಸ್ಥಗಿತಗೊಳಿಸಿತ್ತು. ಅಮೆರಿಕ ಬೌದ್ಧಿಕ ಹಕ್ಕುಸ್ವಾಮ್ಯ ನಿಯಮಗಳ ಉಲ್ಲಂಘನೆ ಕಾರಣಕ್ಕೆ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಟ್ವಿಟರ್ ಹೇಳಿತ್ತು. ಈ ಕ್ರಮದ ವಿರುದ್ಧ ರವಿಶಂಕರ್ ಪ್ರಸಾದ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು
- ನೂತನ ಮಾಹಿತಿ ತಂತ್ರಜ್ಞಾನ ನಿಯಮಗಳ ಅನ್ವಯ ಭಾರತದಲ್ಲೇ ವಾಸವಿರುವ ವ್ಯಕ್ತಿಯು ಟ್ವಿಟರ್‌ನ ಕುಂದುಕೊರತೆ ಅಧಿಕಾರಿಯಾಗಿರಬೇಕು. ಈಗ ಅಮೆರಿಕದಲ್ಲಿರುವ ವ್ಯಕ್ತಿಯನ್ನು ಕುಂದುಕೊರತೆ ಅಧಿಕಾರಿಯಾಗಿ ನೇಮಕ ಮಾಡಲಾಗಿದೆ. ಇದು ನಿಯಮಗಳ ಉಲ್ಲಂಘನೆ ಎಂದು ನೇಮಕಾತಿಯನ್ನು ಸರ್ಕಾರ ತಿರಸ್ಕರಿಸಿದೆ

ಕೇಂದ್ರ ಮತ್ತು ಟ್ವಿಟರ್ ಸಂಸ್ಥೆ ಮಧ್ಯೆ ಘರ್ಷಣೆ

ವಿಚಾರಣೆಗೆ ಮಂಗಳವಾರ ಹಾಜರಾಗಲು ಮಾಹಿತಿ ತಂತ್ರಜ್ಞಾನ ಇಲಾಖೆಯ ಸಂಸದೀಯ ಸ್ಥಾಯಿ ಸಮಿತಿಯು ಸೂಚನೆ

ಫೇಸ್‌ಬುಕ್, ಗೂಗಲ್ ಅಧಿಕಾರಿಗಳಿಗೆ ಸಮನ್ಸ್

ನವದೆಹಲಿ: ಮಾಹಿತಿ ತಂತ್ರಜ್ಞಾನ ನಿಯಮಗಳ ಅನುಸರಣೆ ಕುರಿತಂತೆ ಕೇಂದ್ರ ಸರ್ಕಾರ ಮತ್ತು ಟ್ವಿಟರ್ ಸಂಸ್ಥೆ ಮಧ್ಯೆ ನಡೆಯುತ್ತಿರುವ ಘರ್ಷಣೆಯ ನಡುವೆಯೇ, ಮಾಹಿತಿ ತಂತ್ರಜ್ಞಾನ ಇಲಾಖೆಯ ಸಂಸದೀಯ ಸ್ಥಾಯಿ ಸಮಿತಿಯು ಫೇಸ್‌ಬುಕ್ ಮತ್ತು ಗೂಗಲ್ ಅಧಿಕಾರಿಗಳಿಗೆ ಮಂಗಳವಾರ ಹಾಜರಾಗುವಂತೆ ಸೂಚಿಸಿದೆ. ನಾಗರಿಕರ ಹಕ್ಕುಗಳನ್ನು ಕಾಪಾಡುವುದು ಮತ್ತು ಆನ್‌ಲೈನ್ ವೇದಿಕೆಗಳ ದುರುಪಯೋಗ ತಡೆಯುವ ಕುರಿತಂತೆ ಸಂಸ್ಥೆಗಳ ಅಧಿಕಾರಿಗಳ ಜೊತೆ ಸ್ಥಾಯಿ ಸಮಿತಿ ಚರ್ಚೆ ನಡೆಸಲಿದೆ.



ಸಾಂದರ್ಭಿಕ ಚಿತ್ರ

ಸ್ಥಾಯಿಸಮಿತಿ ಹಂಚಿಕೊಂಡಿರುವ ಕಾರ್ಯಸೂಚಿಯ ಪ್ರಕಾರ, ನಾಗರಿಕರ ಹಕ್ಕುಗಳ ರಕ್ಷಣೆ, ಮಹಿಳಾ ರಕ್ಷಣೆಗೆ ವಿಶೇಷ ಒತ್ತು ಸೇರಿದಂತೆ ಸಾಮಾಜಿಕ ಹಾಗೂ ಆನ್‌ಲೈನ್ ಸುದ್ದಿ ಮಾಧ್ಯಮ ವೇದಿಕೆಗಳ ದುರುಪಯೋಗವನ್ನು ತಡೆಗಟ್ಟುವ ವಿಷಯದ ಕುರಿತು ಫೇಸ್‌ಬುಕ್ ಮತ್ತು ಗೂಗಲ್ ಸಂಸ್ಥೆಗಳ ಭಾರತದ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಕೇಳಲಾಗುತ್ತದೆ.

ಕಾಂಗ್ರೆಸ್ ಸಂಸದ ಶಶಿ ತರೂರ್ ನೇತೃತ್ವದ ಸಮಿತಿಯು ಈ ಹಿಂದೆ ಟ್ವಿಟ್ಟರ್ ಪ್ರತಿನಿಧಿಗಳನ್ನು ಕರೆಸಿತ್ತು. ಅಮೆರಿಕ ಮೂಲದ ಟ್ವಿಟರ್ ಸಂಸ್ಥೆಯು ಸ್ಥಳೀಯ ಕಾನೂನುಗಳನ್ನು ಅನುಸರಿಸಬೇಕು ಎಂದು ಸೂಚಿಸಿತ್ತು.

ಕೋವಿಡ್ ಕಾರಣದಿಂದಾಗಿ ವಿಡಿಯೊ ಕಾನ್ಫರೆನ್ಸ್ ಮೂಲಕ ಸಮಿತಿಯ ಮುಂದೆ ಹಾಜರಾಗಲು ಫೇಸ್‌ಬುಕ್ ಈ ಹಿಂದೆ ಅನುಮತಿ ಕೋರಿತ್ತು. ಆದರೆ ಕಂಪನಿ ಅಧಿಕಾರಿಗಳು ಖುದ್ದಾಗಿ ಹಾಜರಾಗಬೇಕು ಎಂದು ಸಮಿತಿಯ ಅಧ್ಯಕ್ಷ ತರೂರ್ ಸ್ಪಷ್ಟವಾಗಿ ತಿಳಿಸಿದ್ದರು.

ಮುಂದಿನ ದಿನಗಳಲ್ಲಿ, ಸಮಿತಿಯು ಯೂಟ್ಯೂಬ್ ಮತ್ತು ಇತರ ಸಾಮಾಜಿಕ ಮಾಧ್ಯಮ ಸಂಸ್ಥೆಗಳನ್ನು ಕರೆಯಿಸಿಕೊಂಡು, ಇದೇ ವಿಷಯಗಳ ಕುರಿತು ಚರ್ಚೆ ನಡೆಸುವ ಸಾಧ್ಯತೆಯಿದೆ.

ಮೇ 26ರಂದು ದೇಶದಲ್ಲಿ ಜಾರಿಗೆ ಬಂದಿರುವ ಹೊಸ ಐ.ಟಿ ಕಾಯ್ದೆಗಳ ವಿಚಾರವಾಗಿ ಸಾಮಾಜಿಕ ಜಾಲತಾಣ ಸಂಸ್ಥೆಗಳು ಹಾಗೂ ಕೇಂದ್ರ ಸರ್ಕಾರದ ನಡುವೆ ಸಂಘರ್ಷ ನಡೆಯುತ್ತಿದೆ. ಕಾಯ್ದೆಗಳನ್ನು ಪ್ರಶ್ನಿಸಿರುವ ವಾಟ್ಸ್‌ಆ್ಯಪ್, ಈಗಾಗಲೇ ಕೋರ್ಟ್ ಮೊರೆ ಹೋಗಿದೆ.

ಎಸ್‌ಪಿಒ ಹತ್ಯೆ: ಜೈಷ್ ಉಗ್ರರ ಕೈವಾಡ

ಜಮ್ಮು–ಕಾಶ್ಮೀರ ಜನತೆಗೆ ಆಘಾತ ತಂದ ದುಷ್ಕೃತ್ಯ: ರಾಜಕೀಯ ಪಕ್ಷಗಳ ಖಂಡನೆ

ಶ್ರೀನಗರ(ಪಿಟಿಐ): ವಿಶೇಷ ಪೊಲೀಸ್ ಅಧಿಕಾರಿ(ಎಸ್‌ಪಿಒ) ಮತ್ತು ಅವರ ಪತ್ನಿ ಹಾಗೂ ಪುತ್ರಿ ಹತ್ಯೆಯಲ್ಲಿ ಇಬ್ಬರು ಜೈಷ್–ಎ–ಮೊಹಮ್ಮದ್ (ಜೆಇಎಂ) ಉಗ್ರರ ಕೈವಾಡವಿದೆ' ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಅವಂತಿಪೋರಾ ಪ್ರದೇಶದ ಹರಿಪರಿಗಾಮ್‌ನಲ್ಲಿ ಭಾನುವಾರ ರಾತ್ರಿ 11 ಗಂಟೆಗೆ ಎಸ್‌ಪಿಒ ಫೈಯಾಝ್ ಅಹ್ಮದ್ ಅವರ ಮನೆಗೆ ನುಗ್ಗಿದ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ. ಫೈಯಾಜ್ ಅವರನ್ನು ರಕ್ಷಿಸಲು ಹೋದ ಪತ್ನಿ ರಾಜಾ ಬೇಗಂ ಮತ್ತು ಪುತ್ರಿ ರಫಿಯಾ(22) ಅವರ ಮೇಲೆಯೂ ಉಗ್ರರು ಗುಂಡಿನ ದಾಳಿ ನಡೆಸಿ ಹತ್ಯೆ ಮಾಡಿದ್ದಾರೆ. ಈ ಹತ್ಯೆ ಜಮ್ಮು ಮತ್ತು ಕಾಶ್ಮೀರದ ಜನತೆಗೆ ಆಘಾತ ತಂದಿದೆ.

'ಭಾನುವಾರ ರಾತ್ರಿ ಇಬ್ಬರು ಉಗ್ರರು ಇಲ್ಲಿಗೆ ಬಂದಿದ್ದಾರೆ. ಇವರಲ್ಲಿ ಒಬ್ಬ ವಿದೇಶಿ ಉಗ್ರನಾಗಿದ್ದಾನೆ. ಈ ಪ್ರದೇಶದಲ್ಲಿ ಜೆಇಎಂ ಸಕ್ರಿಯವಾಗಿದೆ. ಹೀಗಾಗಿ, ಈ ಸಂಘಟನೆಯೇ ದುಷ್ಕೃತ್ಯ ನಡೆಸಿದೆ. ಉಗ್ರರ ಪತ್ತೆಗೆ ಶೋಧ ಕಾರ್ಯಾಚರಣೆ ನಡೆಯುತ್ತಿದೆ' ಎಂದು ಕಾಶ್ಮೀರದ ಐಜಿಪಿ ವಿಜಯ್ ಕುಮಾರ್ ತಿಳಿಸಿದ್ದಾರೆ.

ಇತ್ತೀಚೆಗೆ ಉಗ್ರರು ಪೊಲೀಸರು ಮತ್ತು ಭದ್ರತಾ ಪಡೆಗಳ ಮೇಲೆ ದಾಳಿಯನ್ನು ತೀವ್ರಗೊಳಿಸಿದ್ದಾರೆ. ಕಳೆದ ವಾರ ನೊವ್ಗಾಮ್‌ನಲ್ಲಿ ಉಗ್ರರು ನಡೆಸಿದ ದಾಳಿಯಲ್ಲಿ ಇನ್‌ಸ್ಪೆಕ್ಟರ್ ಮತ್ತು ಕಾನ್‌ಸ್ಟೆಬಲ್ ಸಾವಿಗೀಡಾಗಿದ್ದರು. ಶ್ರೀನಗರದಲ್ಲಿ ಭದ್ರತಾ ಪಡೆಗಳ ಮೇಲೆ ನಡೆಸಿದ ದಾಳಿಯಲ್ಲಿ ಒಬ್ಬ ನಾಗರಿಕ ಸಾವಿಗೀಡಾಗಿದ್ದರು.

ರಾಜಕೀಯ ಪಕ್ಷಗಳ ಖಂಡನೆ: ಜಮ್ಮು ಮತ್ತು ಕಾಶ್ಮೀರದ ರಾಜಕೀಯ ಪಕ್ಷಗಳು ದಾಳಿಯನ್ನು ಖಂಡಿಸಿದ್ದು, 'ಇದು ಹೇಡಿತನದ ಕೃತ್ಯ ಮತ್ತು ಭಯೋತ್ಪಾದನೆಯ ರೂಪ' ಎಂದು ಹೇಳಿವೆ.

'ಈ ರೀತಿಯ ಅಪಾಯಕಾರಿ, ಹೇಡಿತನದ ಕೃತ್ಯವನ್ನು ಖಂಡಿಸುತ್ತೇನೆ. ಈ ಕಷ್ಟದ ಸಂದರ್ಭದಲ್ಲಿ ಅವರ ಕುಟುಂಬದವರಿಗೆ ದೇವರು ಶಕ್ತಿ ನೀಡಲಿ' ಎಂದು ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಉಪಾಧ್ಯಕ್ಷ ಒಮರ್ ಅಬ್ದುಲ್ಲಾ ಟ್ವೀಟ್ ಮಾಡಿದ್ದಾರೆ.

ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ, ಜಮ್ಮು ಮತ್ತು ಕಾಶ್ಮೀರದ ಬಿಜೆಪಿ ವಕ್ತಾರ ಅಲ್ತಾಫ್ ಠಾಕೂರ್ ಮತ್ತು ಪೀಪಲ್ಸ್ ಕಾನ್ಫರೆನ್ಸ್ ಅಧ್ಯಕ್ಷ ಸಜಾದ್ ಲೋನ್ ಅವರು ಸಹ ಈ ದುಷ್ಕೃತ್ಯವನ್ನು ಖಂಡಿಸಿದ್ದಾರೆ.



ಉಗ್ರರ ದಾಳಿಯಲ್ಲಿ ಸಾವಿಗೀಡಾದ ವಿಶೇಷ ಪೊಲೀಸ್ ಅಧಿಕಾರಿ ಫಯಾದ್ ಅಹಮದ್ ಅವರ ಪುತ್ರಿಯ ಅಂತ್ಯಕ್ರಿಯೆಯಲ್ಲಿ ಭಾಗಿಯಾದ ಗ್ರಾಮಸ್ಥರು

'ಹೊಸ ಐ.ಟಿ. ನಿಯಮಗಳಿಗೆ ತಡೆ ಇಲ್ಲ'

ನವದೆಹಲಿ (ಪಿಟಿಐ): ಡಿಜಿಟಲ್ ಸುದ್ದಿ ಮಾಧ್ಯಮವನ್ನು ನಿಯಂತ್ರಿಸುವ ಹೊಸ ಮಾಹಿತಿ ತಂತ್ರಜ್ಞಾನ ನಿಯಮಗಳಿಗೆ ತಡೆ ನೀಡಲು ದೆಹಲಿ ಹೈಕೋರ್ಟ್ ಸೋಮವಾರ ನಿರಾಕರಿಸಿದೆ. ಈ ಹಂತದಲ್ಲಿ ತಡೆ ಆದೇಶ ನೀಡಲಾಗದು ಎಂದು ಸ್ಪಷ್ಟಪಡಿಸಿದೆ.

ಮಾಹಿತಿ ತಂತ್ರಜ್ಞಾನ (ಮಧ್ಯವರ್ತಿ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮೀಡಿಯಾ ಎಥಿಕ್ಸ್ ಕೋಡ್) ನಿಯಮಗಳು, 2021ಕ್ಕೆ ತಡೆ ನೀಡುವಂತೆ ಕೋರಿ ಫೌಂಡೇಶನ್ ಫಾರ್ ಇಂಡಿಪೆಂಡೆಂಟ್ ಜರ್ನಲಿಸಂ, ದಿ ವೈರ್, ಕ್ವಿಂಟ್ ಡಿಜಿಟಲ್ ಮೀಡಿಯಾ ಲಿಮಿಟೆಡ್ ಮತ್ತು ಆಲ್ಟ್ ನ್ಯೂಸ್‌ನ ಪ್ರವರ್ತಕ ಸಂಸ್ಥೆ ಪ್ರಾವ್ದಾ ಮೀಡಿಯಾ ಫೌಂಡೇಶನ್ ಸಂಸ್ಥೆಗಳು ಅರ್ಜಿ ಸಲ್ಲಿಸಿದ್ದವು. ನಿಯಮಗಳನ್ನು ಅನುಸರಿಸದಿದ್ದರೆ ಬಲವಂತದ ಕ್ರಮ ತೆಗೆದುಕೊಳ್ಳುವ ಎಚ್ಚರಿಕೆ ನೀಡಲಾಗಿದೆ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

'ಹೊಸ ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಅಳವಡಿಸಿಕೊಳ್ಳಬೇಕೆಂದು ಸೂಚಿಸಿ ಕೇಂದ್ರ ಸರ್ಕಾರ ಈ ಕಂಪನಿಗಳಿಗೆ ನೋಟಿಸ್ ನೀಡಿತ್ತು. ಒಂದೊಮ್ಮೆ ಅನುಸರಿಸದಿದ್ದರೆ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿತ್ತು. ಹೀಗಾಗಿ ನಿಯಮಗಳಿಗೆ ತಡೆ ನೀಡುವಂತೆ ದೆಹಲಿ ಹೈಕೋರ್ಟ್‌ನಲ್ಲಿ ಕಂಪನಿಗಳು ಅರ್ಜಿ ಸಲ್ಲಿಸಿದ್ದವು.

ನ್ಯಾಯಮೂರ್ತಿಗಳಾದ ಸಿ. ಹರಿಶಂಕರ್ ಮತ್ತು ಸುಬ್ರಮಣಿಯಂ ಪ್ರಸಾದ್ ಅವರ ಪೀಠವು ಅಧಿಸೂಚನೆ ಅನುಷ್ಠಾನಕ್ಕಾಗಿ ಮಾತ್ರ ನೋಟಿಸ್ ನೀಡಲಾಗಿದೆ ಎಂದು ತಿಳಿಸಿತು.

ಕಂಪನಿಗಳ ಪರ ನ್ಯಾಯಾಲಯಕ್ಕೆ ಹಾಜರಾಗಿದ್ದ ಹಿರಿಯ ವಕೀಲೆ ನಿತ್ಯಾ ರಾಮಕೃಷ್ಣನ್ ಅವರು, ನ್ಯಾಯಾಲಯಗಳ ರಜೆ ಮುಗಿದ ಮೇಲೆ, ಅರ್ಜಿಯ ವಿಚಾರಣೆ ಕೈಗೆತ್ತಿಕೊಳ್ಳುವಂತೆ ಪೀಠವನ್ನು ಕೋರಿದರು.

ಅಟಾರ್ನಿ ಜನರಲ್ ಅಧಿಕಾರ ಅವಧಿ ಒಂದು ವರ್ಷ ವಿಸ್ತರಣೆ



ವೇಣುಗೋಪಾಲ್

ನವದೆಹಲಿ: ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರ ಅಧಿಕಾರ ಅವಧಿಯನ್ನು ಒಂದು ವರ್ಷ ವಿಸ್ತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಅಟಾರ್ನಿ ಜನರಲ್ ಸಾಮಾನ್ಯವಾಗಿ ಮೂರು ವರ್ಷಗಳ ಅಧಿಕಾರ ಅವಧಿ ಹೊಂದಿರುತ್ತಾರೆ. ಕಳೆದ ವರ್ಷ ವೇಣುಗೋಪಾಲ್ ಅವರ ಅಧಿಕಾರ ಅವಧಿ ಮುಕ್ತಾಯಗೊಳ್ಳಬೇಕಾಗಿತ್ತು. ಆದರೆ ತಮ್ಮ ವಯಸ್ಸನ್ನು ಗಮನದಲ್ಲಿಟ್ಟುಕೊಂಡು ಒಂದು ವರ್ಷ ಅವಧಿ ವಿಸ್ತರಿಸುವಂತೆ ವೇಣುಗೋಪಾಲ್ ಅವರು ಮನವಿ ಮಾಡಿದ್ದರು. ಅವರಿಗೆ ಈಗ 90 ವರ್ಷ.

ಸುಪ್ರೀಂಕೋರ್ಟ್‌ನಲ್ಲಿ ಅವರು ನಿರ್ವಹಿಸುತ್ತಿರುವ ಉನ್ನತ ಮಟ್ಟದ ಪ್ರಕರಣಗಳು ಮತ್ತು ಅವರ ಅನುಭವ ಪರಿಗಣಿಸಿ, ಇನ್ನೂ ಒಂದು ವರ್ಷ ಅವಧಿ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.



ಅಂತರ ಮಾಯ...


ಪಶ್ಚಿಮ ಬಂಗಾಳದ ದಕ್ಷಿಣ ದಿನಾಜಪುರ ಜಿಲ್ಲೆಯ ಬಾಲುರ್ಘಟ್‌ನಲ್ಲಿನ ಲಸಿಕೆ ಕೇಂದ್ರದ ಮುಂದೆ ಸೋಮವಾರ ಕಂಡುಬಂದ ಜನಜಂಗುಳಿ ಪಿಟಿಐ ಚಿತ್ರ

ಲಸಿಕೆ ಕಡ್ಡಾಯ: ಸರ್ಕಾರಕ್ಕೆ ಲೀಗಲ್ ನೋಟಿಸ್

ಪ್ರಜಾವಾಣಿ ವಾರ್ತೆ

ಮಂಗಳೂರು: ಕಾಲೇಜು ವಿದ್ಯಾರ್ಥಿಗಳಿಗೆ ಲಸಿಕೆ ಕಡ್ಡಾಯಗೊಳಿಸಿರುವ ಸರ್ಕಾರದ ನಿರ್ಧಾರದ ವಿರುದ್ಧ ಇಲ್ಲಿನ ವೈದ್ಯ ಡಾ. ಶ್ರೀನಿವಾಸ ಕಕ್ಕಿಲಾಯ ಹಾಗೂ ನಾಲ್ವರು ಪೋಷಕರು, ವಕೀಲರ ಮೂಲಕ ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಿದ್ದಾರೆ.

ಕೋವಿಡ್ ಕಾರ್ಯಪಡೆ ಮುಖ್ಯಸ್ಥ, ಉಪ ಮುಖ್ಯಮಂತ್ರಿ ಡಾ. ಅಶ್ವತ್ಥ ನಾರಾಯಣ ಅವರು, 18 ವರ್ಷ ಮೀರಿದ ಎಲ್ಲ ವಿದ್ಯಾರ್ಥಿಗಳು, ಸಿಬ್ಬಂದಿಗೆ ಲಸಿಕೆ ಅಭಿಯಾನ ನಡೆಸಲಾಗುವುದು. ಕಾಲೇಜಿಗೆ ಬರುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಒಂದು ಡೋಸ್ ಲಸಿಕೆಯಾದರೂ ಪಡೆದಿರಬೇಕು. ಇಲ್ಲದಿದ್ದಲ್ಲಿ ಕಾಲೇಜು ಪ್ರವೇಶಿಸಲು ಅವಕಾಶ ಇಲ್ಲ ಎಂದು ಮಾಧ್ಯಮಗಳ ಮೂಲಕ ಹೇಳಿಕೆ ನೀಡಿದ್ದು, ಜತೆಗೆ ತಮ್ಮ ಟ್ವಿಟರ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಈ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿ ನೋಟಿಸ್ ನೀಡಲಾಗಿದೆ ಎಂದು ವಕೀಲ ಚಿದಾನಂದ ಕೆದಿಲಾಯ ತಿಳಿಸಿದ್ದಾರೆ.



ಡಾ.ಶ್ರೀನಿವಾಸ ಕಕ್ಕಿಲಾಯ

'ಲಸಿಕೆ ಪಡೆಯಬೇಕು ಎಂದು ಒತ್ತಡ ಹೇರುವ ಅಧಿಕಾರ ಸರ್ಕಾರಕ್ಕಿಲ್ಲ. ಈ ವಿಷಯಕ್ಕೆ ಸಂಬಂಧಿಸಿ ಮೇಘಾಲಯ, ಗುಜರಾತ್ ಸರ್ಕಾರದ ನಿಲುವಿಗೆ ಅಲ್ಲಿನ ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಇದೇ ಆದೇಶದ ಪ್ರತಿ ಲಗತ್ತಿಸಿ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಆರೋಗ್ಯ ಸಚಿವ ಡಾ.ಸುಧಾಕರ್ ಅವರಿಗೆ ನೋಟಿಸ್ ಜಾರಿಗೊಳಿಸಲಾಗಿದೆ' ಎಂದು ಡಾ.ಕಕ್ಕಿಲಾಯ ಪ್ರತಿಕ್ರಿಯಿಸಿದ್ದಾರೆ.

ಗುಪ್ಕಾರ್ ಮೈತ್ರಿ ಸಭೆ ಮುಂದೂಡಿಕೆ


ಶ್ರೀನಗರ (ಪಿಟಿಐ): ಪ್ರಧಾನಿಯೊಂದಿಗಿನ ಸರ್ವಪಕ್ಷ ಸಭೆ ಕುರಿತು ಚರ್ಚಿಸಲು ಮಂಗಳವಾರ ನಿಗದಿಯಾಗಿದ್ದ ಗುಪ್ಕಾರ್ ಮೈತ್ರಿ ಸಭೆಯನ್ನು ಮುಂದೂಡಲಾಗಿದೆ.

ಮೈತ್ರಿಕೂಟದ ಉಪಾಧ್ಯಕ್ಷೆ ಮತ್ತು ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಅವರ ವೈಯಕ್ತಿಕ ಕಾರ್ಯಕ್ರಮಗಳಿಂದ ಸಭೆ ಮುಂದೂಡಲಾಗಿದೆ ಎಂದು ಪಿಎಜಿಡಿ ವಕ್ತಾರ ತಿಳಿಸಿದ್ದಾರೆ. ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಅವರ ನಿವಾಸದಲ್ಲಿ ಸಭೆ ನಿಗದಿಯಾಗಿತ್ತು.

ಕ್ಲಬ್ ಹೌಸ್‌ನಲ್ಲಿ ಮಾತು ಸೋರಿಕೆ: ಸೈಬರ್ ಸೆಲ್‌ಗೆ ದೂರು

ಭೋಪಾಲ್(ಪಿಟಿಐ): ಕ್ಲಬ್ ಹೌಸ್‌ನಲ್ಲಿ ತಮ್ಮ ಮಾತುಗಳು ಸೋರಿಕೆಯಾಗಿವೆ ಎಂದು ಆರೋಪಿಸಿ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ದಿಗ್ವಿಜಯ್ ಸಿಂಗ್ ಅವರು ಸೋಮವಾರ ಮಧ್ಯಪ್ರದೇಶದ ಸೈಬರ್ ಸೆಲ್‌ಗೆ ದೂರು ನೀಡಿದ್ದಾರೆ.

'ಕ್ಲಬ್ ಹೌಸ್‌ನಲ್ಲಿ ಜಮ್ಮು–ಕಾಶ್ಮೀರದ ಕುರಿತು ನಾನು ಆಡಿದ ಮಾತುಗಳನ್ನು ಸಂಗ್ರಹಿಸಿ, ವಿರೂಪಗೊಳಿಸಿ ಹಂಚಿಕೊಳ್ಳಲಾಗಿದೆ. ಮಧ್ಯಪ್ರದೇಶದ ಸೈಬರ್ ಸೆಲ್‌ಗೆ ದೂರು ದಾಖಲಿಸಿದ್ದೇನೆ' ಎಂದು ದಿಗ್ವಿಜಯ್ ಸುದ್ದಿಗಾರರಿಗೆ ತಿಳಿಸಿದರು.



'ಕ್ಲಬ್ ಹೌಸ್‌ನ ಮಾತುಗಳನ್ನು ಹಂಚಿಕೊಂಡ ಮತ್ತು ಪೋಸ್ಟ್ ಅನ್ನು ಮರು ಟ್ವೀಟ್ ಮಾಡಿದವರ ವಿರುದ್ಧವೂ ಎಫ್‌ಐಆರ್ ದಾಖಲಿಸಲಾಗುವುದು. ಕ್ಲಬ್ ಹೌಸ್ ಆ್ಯಪ್‌ನ ಸಂಬಂಧಪಟ್ಟವರಿಗೂ ನೋಟಿಸ್ ನೀಡುತ್ತೇನೆ. ಟ್ವಿಟರ್‌ಗೆ ನೋಟಿಸ್ ಕಳುಹಿಸಿದ್ದೇನೆ' ಎಂದು ಅವರು ವಿವರಿಸಿದರು.

ಡಿಆರ್‌ಡಿಒ ಸಹಯೋಗದಲ್ಲಿ ಕೋವಿಡ್ ಚಿಕಿತ್ಸೆಗಾಗಿ ಅಭಿವೃದ್ಧಿಪಡಿಸಿದ ಔಷಧ

'2–ಡಿಜಿ ಔಷಧ ವಾಣಿಜ್ಯ ಬಳಕೆಗೆ ಲಭ್ಯ'

ಪ್ರಜಾವಾಣಿ ವಾರ್ತೆ

ಹೈದಾರಾಬಾದ್: ಇಲ್ಲಿನ ಡಾ. ರೆಡ್ಡೀಸ್ ಲ್ಯಾಬ್‌ನ ಸಹಯೋಗದಲ್ಲಿ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯರ್ ಮೆಡಿಸಿನ್ ಅಂಡ್ ಅಲೈಡ್ ಸೈನ್ಸಸ್ (ಐಎನ್‌ಎಂಎಎಸ್) ಪ್ರಯೋಗಾಲಯದಲ್ಲಿ ಕೋವಿಡ್ ಸೋಂಕಿತರಿಗಾಗಿ ಅಭಿವೃದ್ಧಿಪಡಿಸಿರುವ 2–ಡಯಾಕ್ಸಿ–ಡಿ–ಗ್ಲೂಕೋಸ್ (2–ಡಿಜಿ) ಔಷಧವನ್ನು ವಾಣಿಜ್ಯ ಬಳಕೆಗೆ ಬಿಡುಗಡೆ ಮಾಡಿರುವುದಾಗಿ ರೆಡ್ಡೀಸ್ ಲ್ಯಾಬ್ ಸೋಮವಾರ ಪ್ರಕಟಿಸಿದೆ.

ಕೋವಿಡ್ ಸೋಂಕು ನಿಗ್ರಹಿಸುವ ಈ ಔಷದದ ತುರ್ತು ಬಳಕೆಗಾಗಿ ಮೇ 1 ರಂದು ಭಾರತೀಯ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಅನುಮತಿ ನೀಡಿದ್ದರು.



ಪ್ರಾತಿನಿಧಿಕ ಚಿತ್ರ

ಡಾ. ರೆಡ್ಡೀಸ್ ಲ್ಯಾಬ್ ತಯಾರಿಸಿರುವ ಈ ಔಷಧವನ್ನು 2ಡಿಜಿ ಬ್ರ್ಯಾಂಡ್ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತದೆ. ಪ್ರತಿ ಸ್ಯಾಚೆಟ್‌ನ ಗರಿಷ್ಠ ಬೆಲೆ ₹990 ನಿಗದಿಪಡಿಸಲಾಗಿದೆ. ಸರ್ಕಾರಿ ಸಂಸ್ಥೆಗಳಿಗೆ ಸಬ್ಸಿಡಿ ದರದಲ್ಲಿ ಔಷಧವನ್ನು ಪೂರೈಸಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಸಾಧಾರಣ ಅಥವಾ ಗಂಭೀರವಾಗಿ ಕೋವಿಡ್–19 ಸೋಂಕಿನಿಂದ ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆ ಪಡೆಯುತ್ತಿರುವ ರೋಗಿಗೆ, ತಜ್ಞ ವೈದ್ಯರ ಸಲಹೆ ಮೇರೆಗೆ, ಈಗಿರುವ ಆರೈಕೆಯ ಮಾನದಂಡಗಳನ್ನು ಅನುಸರಿಸಿ, ಪೂರಕ ಚಿಕಿತ್ಸೆಯಾಗಿ ಈ ಔಷಧ ನೀಡಬಹುದು.

ಡಾ. ರೆಡ್ಡಿ ಪ್ರಯೋಗಾಲಯದವರು ಈ ಔಷಧವನ್ನು ಭಾರತದಾದ್ಯಂತವಿರುವ ಪ್ರಮುಖ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಸರಬರಾಜು ಮಾಡುತ್ತಾರೆ. ಆರಂಭಿಕ ವಾರಗಳಲ್ಲಿ, ಕಂಪನಿಯು ಮಹಾನಗರಗಳು ಮತ್ತು ಮೊದಲ ಹಂತದ (ಎ ಗ್ರೇಡ್) ನಗರಗಳಲ್ಲಿನ ಆಸ್ಪತ್ರೆಗಳಿಗೆ ಪೂರೈಕೆ ಮಾಡುತ್ತಾರೆ. ನಂತರ ಭಾರತದ ಉಳಿದ ಭಾಗಗಳಿಗೆ ವಿಸ್ತರಿಸುವುದಾಗಿ ಔಷಧ ಕಂಪನಿ ಸೋಮವಾರ ತಿಳಿಸಿದೆ.

ಅಗ್ನಿ 'ಪ್ರೈಂ' ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲಸೋರ್, ಒಡಿಶಾ(ಪಿಟಿಐ): ಇಲ್ಲಿನ ಕರಾವಳಿಯ ಸೇನಾ ನೆಲೆಯಲ್ಲಿ ಸೋಮವಾರ 'ಅಗ್ನಿ ಪ್ರೈಮ್' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿ ನಡೆಯಿತು.

ಅತ್ಯಾಧುನಿಕ ತಂತ್ರಜ್ಞಾನದ ಕ್ಷಿಪಣಿಯು, ಅಣ್ವಸ್ತ್ರಗಳನ್ನು ಕೊಂಡೊಯ್ಯುವ ಸಾಮರ್ಥ್ಯ ಹೊಂದಿದ್ದು, 2,000 ಕಿಲೋ ಮೀಟರ್ ವ್ಯಾಪ್ತಿಯವರೆಗೂ ಕ್ರಮಿಸುವ ಶಕ್ತಿ ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಗ್ನಿ ಕ್ಷಿಪಣಿ ಸರಣಿಯ ಈ ಕ್ಷಿಪಣಿಯನ್ನು ಒಡಿಶಾ ಕರಾವಳಿ ತೀರದಲ್ಲಿರುವ ಅಬ್ದುಲ್ ಕಲಾಂ ದ್ವೀಪದಿಂದ ಬೆಳಿಗ್ಗೆ 10.55ಕ್ಕೆ ಸಂಚಾರಿ ಉಡಾವಣಾ ಕೇಂದ್ರದಿಂದ ಯಶಸ್ವಿಯಾಗಿ ಪರೀಕ್ಷಿಸಲಾಯಿತು ಎಂದು ಡಿಆರ್‌ಡಿಒ ಮೂಲಗಳು ತಿಳಿಸಿವೆ.

ಕ್ಷಿಪಣಿಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿದೆ.



ಒಡಿಶಾದ ಬಾಲಸೋರ್‌ನಲ್ಲಿ ಸೋಮವಾರ 'ಅಗ್ನಿ ಪ್ರೈಂ' ಕ್ಷಿಪಣಿಯನ್ನು ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು –ಪಿಟಿಐ ಚಿತ್ರ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಶಾಂತಮ್ಮ, ರತ್ನಕುಮಾರ್, ಜಯಮ್ಮ, ಅರುಣ್ ಕುಮಾರ್, ಲಲಿತಾ ಲಹರಿ,** 550, 26ನೇ ಮುಖ್ಯರಸ್ತೆ, 2ನೇ ಹಂತ, ಬಿಟಿಎಂ ಲೇಔಟ್, ಬೆಂಗಳೂರು	25,000
2	**ಮಂಜುನಾಥ್ ಪಾಟೀಲ್,** 33, ಉರುಕುಂಡ ಈರಣ್ಣ ನಿಲಯ, ಮುನಿಕೆಂಪಣ್ಣ ಲೇಔಟ್, ದಾಸರಹಳ್ಳಿ, ಕೆಂಪಾಪುರ, ಬೆಂಗಳೂರು	25,000
3	**ಎನ್.ಪಿ.ನಾರಾಯಣ,** 550, 26ನೇ ಮುಖ್ಯರಸ್ತೆ, 2ನೇಹಂತ, ಬಿಟಿಎಂ ಲೇಔಟ್, ಬೆಂಗಳೂರು	25,000
4	**ಡಾ.ಬಿ.ರಾಜಾನಂದಮೂರ್ತಿ,** ಅಧ್ಯಕ್ಷರು, ಬುದ್ಧ ಪ್ರತಿಷ್ಠಾನ, ಬೆಂಗಳೂರು	21,000
5	**ಅಳವಂದರ ಗಿರಿಧರ ನರಸಿಂಹನ್,** 66, 2ನೇ ಅಡ್ಡರಸ್ತೆ, ಜಿಕೆಡಬ್ಲ್ಯು ಲೇಔಟ್, ವಿಜಯನಗರ, ಬೆಂಗಳೂರು	12,000
6	**ಮೃತ್ಯುಂಜಯ ಹಿರೇಮಠ,** c/o ಬಸವರಾಜ್ ಹಿರೇಮಠ, ಕುರುಬಗೊಂಡ ಪೋಸ್ಟ್, ಹಾವೇರಿ ತಾಲ್ಲೂಕು, ಜಿಲ್ಲೆ	10,000
7	**ಕೆ.ವಿಜಯಕುಮಾರ್,** 37–38, ಕೌಸ್ತುಭ, ಸಪ್ತಗಿರಿ ಲೇಔಟ್, 2ನೇ ಹಂತ, ಚನ್ನಸಂದ್ರ, ಕಾಡುಗೋಡಿ ಪೋಸ್ಟ್, ಬೆಂಗಳೂರು	10,000
8	**ಮಲರ್‌ಮಣಿ ಕೆ.,** ಶಾರದಾ ಕಾಲೊನಿ, ಬೆಂಗಳೂರು	10,000
9	**ಮೋಹನ್ ವಿ.ಎಸ್,** 765, 9ನೇ ಸಿ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಹಂಪಿನಗರ, ಬೆಂಗಳೂರು	10,000
10	**ಸಾಹಿತ್ಯ ಯೋಗಾನಂದ,** 2503, 10ನೇ ಮುಖ್ಯರಸ್ತೆ ಡಿ ಬ್ಲಾಕ್, 2ನೇ ಹಂತ, ರಾಜಾಜಿನಗರ, ಬೆಂಗಳೂರು	7,000
11	**ಸಿದ್ದಮೇಸ್ತ್ರಿ ಜಿ,** 164, 4ನೇ ಬಿ ಕ್ರಾಸ್, 4ನೇ ಹಂತ, 4ನೇ ಘಟ್ಟ, ಬಸವೇಶ್ವರ ನಗರ, ಪಶ್ಚಿಮ ಕಾರ್ಡ್ ರಸ್ತೆ, ಬೆಂಗಳೂರು	5,001
12	**ಕೆ.ಆರ್.ಸುಬ್ರಹ್ಮಣ್ಯಂ,** ಬೆಂಗಳೂರು	5,000
13	**ಎಸ್.ರಂಗನಾಥನ್,** ಬೆಂಗಳೂರು	5,000
14	**ರವಿಪ್ರಕಾಶ್ ಬಿ.ಜಿ.,** ಫ್ಲ್ಯಾಟ್ 105, ಸೂರ್ಯ ಸಫೈರ್ ಅಪಾರ್ಟ್‌ಮೆಂಟ್, ಎನ್‌ಆರ್‌ಐ ಲೇಔಟ್ ಮುಖ್ಯರಸ್ತೆ, ಕಲ್ಕೆರೆ, ರಾಮಮೂರ್ತಿ ನಗರ ಬಳಿ, ಬೆಂಗಳೂರು	5,000
15	**ಶ್ರೀನಿಧಿ ರಘುರಾಂ,** ಬಿಟಿಎಂ ಲೇಔಟ್, ಬೆಂಗಳೂರು	5,000
16	**ರತ್ನಾ ಮೂರ್ತಿ,** ಬೆಂಗಳೂರು	5,000
17	**ಅಂಬುಜಾಂಬ,** 3505, 16ನೇ ಅಡ್ಡರಸ್ತೆ, ನಂಜನಗೂಡು	5,000
18	**ಸುಮನ್ ಹರೀಶ್ ಸಂತ್,** ಸಿ302, ಅರುಣ್ ಪೆಟಿಯೊಸ್, ಕೆಂಚನಹಳ್ಳಿ, ಯಲಹಂಕ, ಬೆಂಗಳೂರು	5,000
19	**ಚೇತನಾ ಜಿ,** 210, 7ನೇ ಅಡ್ಡರಸ್ತೆ, ಕೆಂಚೇನಹಳ್ಳಿ, ಆರ್.ಆರ್.ನಗರ, ಬೆಂಗಳೂರು	5,000
20	**ಪ್ರೊ.ಆರ್.ಶಿವಪ್ಪ,** 54, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ರೈಲ್ವೆಲೇಔಟ್, ಬೋಗಾದಿ, ಸಾಯಿ ಸರಸ್ವತಿ ಸ್ಕೂಲ್ ಸಮೀಪ, ಮೈಸೂರು	5,000
21	**ಮಂಜುಳಾ ದೇವಿ ಜಿ,** ನಂ.25, 1ನೇ ಮುಖ್ಯರಸ್ತೆ, ಜ್ಞಾನಭಾರತಿ, ಬಿಡಿಎ ಲೇಔಟ್, ವಲಗೇರಹಳ್ಳಿ, ಬೆಂಗಳೂರು	4,000
22	**ಶಿವಕುಮಾರ್ ಜಿ.ಬಿ.,** ನಂ.15, ಬ್ಲಾಕ್ ನಂ.31, ಮಾನಸಿ ನಗರ, ಹಂಚ್ಯ ಪೋಸ್ಟ್, ಮೈಸೂರು	3,000
23	**ಮಂಜುನಾಥ್ ಎಸ್.ಕೆ.,** ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತ (ನಿವೃತ್ತ), 82, 3ನೇ ಮುಖ್ಯರಸ್ತೆ, ಸಾರ್ವಭೌಮ ನಗರ, ಬೆಂಗಳೂರು	2,500
24	**ರುದ್ರಮ್ಮ ಎಸ್.ಎಂ.,** W/o ಬಿ.ಟಿ.ಎಂ. ಗುರುಸಿದ್ಧ ಶಾಸ್ತ್ರಿ, ಶ್ರೀಗುರು ನಿವಾಸ, ವಿನೋಬಾನಗರ, 1ನೇ ಹಂತ, 2ನೇ ಕ್ರಾಸ್, ಶಿವಮೊಗ್ಗ	2,500
25	**ಸಿದ್ಧಗಂಗಮ್ಮ ಕೋಟೆ,** ಚಿಕ್ಕಮಗಳೂರು	2,001
26	**ಜಿ.ಚನ್ನಮ್ಮ,** ಕೆಎಚ್‌ಬಿ ಶಿರ್ಕೆ ಅಪಾರ್ಟ್‌ಮೆಂಟ್ಸ್, ಕೆಂಗೇರಿ ಉಪನಗರ, ಬೆಂಗಳೂರು	2,001
27	**ಕೆ.ಸಿ.ಅಪ್ಪಯ್ಯ,** ಕೊಡಗು	2,000
28	**ಎಂ.ಎನ್.ಗೋಪಾಲಾಚಾರ್,** 578, ಶ್ರೀ ಲಕ್ಷ್ಮಿನಿವಾಸ, ಎಚ್‌ಬಿಆರ್ ಲೇಔಟ್, 1ನೇ ಹಂತ, 3ನೇ ಬ್ಲಾಕ್, 6ನೇ ಮುಖ್ಯರಸ್ತೆ, ಬೆಂಗಳೂರು	2,000
29	**ವೈ.ಆರ್.ವಿಶ್ವೇಶ್ವರಯ್ಯ,** ಗುರುಕೃಪಾ ಆಚಾರ್ ಬೀದಿ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ	2,000
30	**ಕಮಲಾ ನಂದಕುಮಾರ್,** 37/1, 15ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು	2,000
31	**ಮಂಜುನಾಥ್ ಎಸ್.ಎಸ್.,** ಪಿ.ಬಿ.ನಂ 60, 4ನೇ ಅಡ್ಡರಸ್ತೆ, ವಿದ್ಯಾಗಿರಿ, ಬಾಗಲಕೋಟೆ	2,000
32	**ನಾರಾಯಣಪ್ಪ ಕೆ,** ವಿದ್ಯಾನಗರ, 1ನೇ ಅಡ್ಡರಸ್ತೆ, ಶಿವಮೊಗ್ಗ	2,000
33	**ಸಂಧ್ಯಾ ಎಸ್.ಡಿ,** 3/386, ಅರುಣಗಿರಿ, 3ನೇ ಅಡ್ಡರಸ್ತೆ, ರವೀಂದ್ರ ನಗರ, ಶಿವಮೊಗ್ಗ	2,000
34	**ರಮಿಳಾ ಉಮಾಶಂಕರ,** ಕಾವೇರಿಪುರ	1,234
35	**ಹೊನ್ನಿಹಾಳ್ ಮಹಾಲಿಂಗಪ್ಪ ಯದಪ್ಪ,** c/o ಅಮ್ಮಣಗಿ ಜಿ.ಎಂ., ಮಹಾಲಿಂಗಪುರ	1,111
36	**ಡಿ.ಎ.ಕಾಳಪ್ಪ,** 612, 6ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ಮೈಕೊ ಲೇಔಟ್, ಬಿಟಿಎಂ 2ನೇ ಹಂತ, ಬೆಂಗಳೂರು	1,001
37	**ಬಿ.ಕೃಷ್ಣಗೌಡ,** 361, ಮೈಕೊ ಲೇಔಟ್, ಬಿಟಿಎಂ 2ನೇ ಹಂತ, ಬೆಂಗಳೂರು	1,001
38	**ನಾಗೇಶ್ ಎಲ್.ಆರ್,** ಬಿಜಿ–02, ರಾಮ್ ಚೈತನ್ಯ ಅಪಾರ್ಟ್‌ಮೆಂಟ್ಸ್, ಸಾಯಿಬಾಬಾ ದೇವಸ್ಥಾನ ಸಮೀಪ, ಸಹಕಾರನಗರ, ಬೆಂಗಳೂರು	1,001
39	**ಪ್ರೇಮಾ ಶ್ರೀಧರನ್,** 264, 31ನೇ ವಾರ್ಡ್, ನೆಹರೂ ಕಾಲೊನಿ, ಹಳೆ ಬಲ್ದೋಟ ಕಚೇರಿ ಹತ್ತಿರ, ಹೊಸಪೇಟೆ	1,001
40	**ಡಾ.ಎಸ್.ಪಿ.ಗೌಡರ್,** ನಂ. 3079, ವಿವೇಕಾನಂದ ನಗರ, ಗುರುಭವನ ಹಿಂಭಾಗ, ಹಿರೇಕೆರೂರು, ಹಾವೇರಿ	1,000
41	**ಬಿ.ಎನ್.ಕೊಳದೂರ್,** ನಿವೃತ್ತ ಉಪನ್ಯಾಸಕರು, ಜಯನಗರ, ರಾಮದುರ್ಗ, ಬೆಳಗಾವಿ	1,000
42	**ಗಿರೀಶ್ ಕೃಷ್ಣಪ್ಪ,** ಬೆಂಗಳೂರು	1,000
43	**ರಾಹತ್ ಅಲಿ,** ಬಸ್‌ನಿಲ್ದಾಣ ಸಮೀಪ, ಎಸ್.ಎಚ್.ರೋಡ್, ಮಲೆಬೆನ್ನೂರು	1,000
44	**ಬಾಲಕೃಷ್ಣ ಕಾಮತ್,** ಶಾರದಾ ಎಂಟರ್‌ಪ್ರೈಸಸ್, ಮನಿಸಿಪಲ್ ಗ್ರೌಂಡ್ ಎದುರು, ಕೊಪ್ಪ	1,000
45	**ಶಿವಕುಮಾರ ಎಚ್,** 246, S/o ಹೊನ್ನಯ್ಯ, ಹಡ್ಲುಗದ್ದೆ ಗ್ರಾಮ, ಶಿರವಾಸೆ, ಚಿಕ್ಕಮಗಳೂರು	1,000

'ನದಿ ದಾಟುವಾಗ ಆಲೋಚಿಸಬೇಕು'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಎಲ್ಲ ಶಾಸಕರಿಗೂ ಒಂದು ದಿನ ಮುಖ್ಯಮಂತ್ರಿ ಆಗಬೇಕೆಂಬ ಅಭಿಲಾಷೆ ಇರುತ್ತದೆ. ಅವರವರ ಬೆಂಬಲಿಗರು ತಮ್ಮ ಆಶಯವನ್ನು ಬಹಿರಂಗವಾಗಿ ವ್ಯಕ್ತಪಡಿಸುವುದರಲ್ಲಿ ತಪ್ಪಿಲ್ಲ' ಎಂದು ಬಿ.ಕೆ. ಹರಿಪ್ರಸಾದ್ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಭಿವ್ಯಕ್ತಿ ಸ್ವಾತಂತ್ರ್ಯ ಇದೆ ಎಂಬ ಕಾರಣಕ್ಕೆ ಪಕ್ಷಕ್ಕೆ ಧಕ್ಕೆ ತರುವಂಥ ಹೇಳಿಕೆ ನೀಡಬಾರದು' ಎಂದರು.

'ನದಿಯನ್ನು ದಾಟುವಾಗಲಷ್ಟೇ ನಾವು ಅದರ ಆಳ– ಅಗಲದ ಬಗ್ಗೆ ಆಲೋಚಿಸಬೇಕು. ನದಿ ದಾಟುವ ಸಂದರ್ಭ ಇನ್ನೂ ಬಂದಿಲ್ಲ. ನದಿಯ ದಡದ ಹತ್ತಿರಕ್ಕೂ ಬರದೆ ಆ ಬಗ್ಗೆ ಯೋಚಿಸುವ ಅಗತ್ಯವಿಲ್ಲ' ಎಂದು ಅವರು ಮಾರ್ಮಿಕವಾಗಿ ನುಡಿದರು.

'ನಮ್ಮ ಪಕ್ಷದಲ್ಲಿ ಇರುವವರು ನಾಗಪುರ ವಿಶ್ವವಿದ್ಯಾಲಯದ ನಿರ್ದೇಶನದ ಮೇರೆಗೆ ನಟಿಸುವ ಪಾತ್ರಧಾರಿಗಳಲ್ಲ. ಬದಲಿಗೆ, ಹೈಕಮಾಂಡ್ ಆದೇಶ ಪಾಲಿಸುವವರು' ಎಂದು ಅವರು ತಿಳಿಸಿದರು.

'ಮುಂದಿನ ಮುಖ್ಯಮಂತ್ರಿ ಯಾರಾಗಬೇಕು' ಎಂಬ ನಿರ್ಧಾರವನ್ನು ಚುನಾವಣೆಯಲ್ಲಿ ಬಹುಮತ ಪಡೆದ ನಂತರ ಹೈಕಮಾಂಡ್ ಕೈಗೊಳ್ಳುತ್ತದೆ' ಎಂದರು. 'ದೆಹಲಿ ಭೇಟಿ ವೇಳೆ ನಾವು ವರಿಷ್ಠರನ್ನು ಭೇಟಿ ಮಾಡಿ ಈ ವಿಷಯದ ಕುರಿತು ದೂರು ನೀಡುವ ಉದ್ದೇಶ ಹೊಂದಿಲ್ಲ' ಎಂದೂ ಸ್ಪಷ್ಟಪಡಿಸಿದರು.

ದೂರು ನೀಡುವುದಿಲ್ಲ: ಪಕ್ಷದ ವರಿಷ್ಠರಿಗೆ ಯಾವುದೇ ದೂರು ಸಲ್ಲಿಸುವುದಿಲ್ಲ. ಅದರ ಅಗತ್ಯವೂ ಇಲ್ಲ ಎಂದು ಪಕ್ಷದ ಮುಖಂಡ ಕೆ.ಎಚ್. ಮುನಿಯಪ್ಪ ಅವರೂ ಹೇಳಿದರು.

ಬಣ ರಾಜಕೀಯ ಕೊನೆಗಾಣಿಸುವಂತೆ ಮನವಿ?

ನವದೆಹಲಿ: 'ಭಾವಿ ಮುಖ್ಯಮಂತ್ರಿ' ಹೇಳಿಕೆಯಿಂದ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಉಂಟಾಗುತ್ತಿರುವ ಮುಜುಗರ ತಪ್ಪಿಸುವಂತೆ ಪಕ್ಷದ 'ತಟಸ್ಥ' ಗುಂಪಿನ ಕೆಲವು ನಾಯಕರು ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

ಸೋಮವಾರ ಇಲ್ಲಿ ಪಕ್ಷದ ಮುಖಂಡ ಕೆ.ಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿರುವ ಮಾಜಿ ಸಂಸದ ಕೆ.ಎಚ್. ಮುನಿಯಪ್ಪ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಮಾಜಿ ಶಾಸಕ ಬಿ.ಆರ್. ಪಾಟೀಲ ಮತ್ತಿತರರು, ಅನಗತ್ಯ ಹೇಳಿಕೆಗಳಿಂದ ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಸೃಷ್ಟಿಯಾಗಿದೆ. ಇಂಥ ಬೆಳವಣಿಗೆಗಳಿಗೆ ಅವಕಾಶ ನೀಡದಂತೆ ನಿಯಂತ್ರಿಸಬೇಕು ಎಂದು ಕೋರಿದ್ದಾರೆ ಎಂದು ತಿಳಿದುಬಂದಿದೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬೆಂಬಲಿಗರು ಮುಂದಿನ ಮುಖ್ಯಮಂತ್ರಿ ವಿಷಯದಲ್ಲಿ ನೀಡುತ್ತಿರುವ ಹೇಳಿಕೆಗಳು ಪಕ್ಷಕ್ಕೆ ತೀವ್ರ ಹಾನಿ ಉಂಟು ಮಾಡುತ್ತಿವೆ. ಕೂಡಲೇ ಎರಡೂ ಬಣಗಳ ನಡುವಿನ ತಿಕ್ಕಾಟ ಕೊನೆಗೊಳಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

'ಪಾಸ್‌ಪೋರ್ಟ್‌ನಲ್ಲಿ ಕೋವಿಶೀಲ್ಡ್ ಲಸಿಕೆ ಸೇರಿಸಿ'

ನವದೆಹಲಿ (ಪಿಟಿಐ): ಯುರೋಪಿಯನ್ ಒಕ್ಕೂಟ ಮತ್ತು ಇತರ ರಾಷ್ಟ್ರಗಳಿಗೆ ತೆರಳುವವರು ಕೋವಿಶೀಲ್ಡ್ ಲಸಿಕೆ ಹಾಕಿಸಿಕೊಂಡಿದ್ದರೂ ಅದನ್ನು ಪಾಸ್‌ಪೋರ್ಟ್‌ನಲ್ಲಿ ಪರಿಗಣಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಮನವಿ ಮಾಡಿದೆ.



ಪೂನಾ ವಾಲಾ

ಕೋವಿಶೀಲ್ಡ್ ಹಾಕಿಸಿಕೊಂಡವರಿಗೆ ವಿದೇಶಕ್ಕೆ ತೆರಳಲು ಅನುಮತಿ ನಿರಾಕರಿಸುವುದರಿಂದ ವಿದ್ಯಾಭ್ಯಾಸಕ್ಕೆ ತೆರಳುವ ವಿದ್ಯಾರ್ಥಿಗಳು ಮತ್ತು ವಾಣಿಜ್ಯ ವ್ಯವಹಾರಕ್ಕೆ ಪ್ರಯಾಣಿಸುವ ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಇದರಿಂದ ಭಾರತೀಯ ಮತ್ತು ಜಾಗತಿಕ ಆರ್ಥಿಕತೆಗೂ ತೀವ್ರ ಅಡ್ಡಿ ಉಂಟಾಗುತ್ತಿದೆ ಎಂದು ಎಸ್‌ಐಐ ಹೇಳಿದೆ.

ಫೈಜರ್/ಬಯೋಟೆಕ್, ಮಾಡರ್ನಾ, ಆಸ್ಟ್ರಾಜೆನೆಕಾ, ಜಾನ್ಸನ್ ಮತ್ತು ಜಾನ್ಸನ್ ಅಂಡ್ ಜಾನ್ಸನ್ ಈ ನಾಲ್ಕು ಲಸಿಕೆಗಳನ್ನು ಮಾತ್ರ ಯುರೋಪಿಯನ್ ಮೆಡಿಸಿನ್ಸ್ ಏಜೆನ್ಸಿ (ಇಎಂಎ) ಅನುಮೋದಿಸಿದೆ. ಈ ಲಸಿಕೆಗಳನ್ನು ಹಾಕಿಸಿಕೊಂಡವರಿಗೆ ಮಾತ್ರ ಯುರೋಪಿಯನ್ ಒಕ್ಕೂಟದ ರಾಷ್ಟ್ರಗಳಿಗೆ ಪಾಸ್‌ಪೋರ್ಟ್‌ಗಳನ್ನು ನೀಡಲಾಗುತ್ತಿದೆ.

ಎಸ್‌ಐಐನ ಸಿಇಒ ಆಧಾರ್ ಸಿ. ಪೂನಾ ವಾಲಾ ಅವರು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ಈ ಸಂಬಂಧ ಪತ್ರ ಬರೆದು, ಈ ವಿಷಯದಲ್ಲಿ ಮಧ್ಯಪ್ರವೇಶಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕ್ರಿಕೆಟ್: ಶ್ರೀಲಂಕಾ ತಂಡದ ಮೂವರ ಅಮಾನತು

ಕೊಲಂಬೊ (ಪಿಟಿಐ): ಬಯೋಬಬಲ್ ನಿಯಮ ಉಲ್ಲಂಘಿಸಿದ ಆರೋಪದ ಮೇಲೆ ಶ್ರೀಲಂಕಾ ಕ್ರಿಕೆಟ್ ತಂಡದ ಆಟಗಾರರಾದ ಕುಶಲ್ ಮೆಂಡಿಸ್, ನಿರೋಶನ್ ಡಿಕ್ವೆಲ್ಲಾ ಮತ್ತು ಧನುಷ್ಕಾ ಗುಣತಿಲಕ ಅವರನ್ನು ಅಮಾನತು ಮಾಡಲಾಗಿದೆ. ಸದ್ಯ ತಂಡವು ಇಂಗ್ಲೆಂಡ್ ಪ್ರವಾಸದಲ್ಲಿದ್ದು, ಈ ಮೂವರಿಗೆ ತವರಿಗೆ ಮರಳುವಂತೆ ಶ್ರೀಲಂಕಾ ಕ್ರಿಕೆಟ್ ಮಂಡಳಿ (ಎಸ್‌ಎಲ್‌ಸಿ) ಸೂಚಿಸಿದೆ.

ಆತಿಥೇಯ ಇಂಗ್ಲೆಂಡ್ ಎದುರು ಭಾನುವಾರ ರಾತ್ರಿ ನಡೆದ ಅಂತಿಮ ಟಿ–20 ಪಂದ್ಯದ ನಂತರ ಬ್ಯಾಟ್ಸ್‌ಮನ್ ಕುಶಲ್ ಹಾಗೂ ವಿಕೆಟ್ ಕೀಪರ್ ನಿರೋಶನ್ ಅವರು ಗುಣತಿಲಕ ಅವರೊಂದಿಗೆ ಡರ್ಹಮ್‌ನ ಬೀದಿಗಳಲ್ಲಿ ಓಡಾಡುತ್ತಿದ್ದದ್ದು ವಿಡಿಯೊಂದರಲ್ಲಿ ದಾಖಲಾಗಿದೆ. ಶ್ರೀಲಂಕಾ ತಂಡವು ಈ ಪಂದ್ಯದಲ್ಲಿ 89 ರನ್‌ಗಳಿಂದ ಸೋತಿತ್ತು.

‘ನಿಯಮ ಉಲ್ಲಂಘಿಸಿದ ಕುಶಲ್, ಗುಣತಿಲಕ ಹಾಗೂ ನಿರೋಶನ್ ಡಿಕ್ವೆಲ್ಲಾ ಅವರನ್ನು ಕಾರ್ಯಕಾರಿ ಸಮಿತಿಯು ಅಮಾನತು ಮಾಡಿದೆ. ಘಟನೆ ಕುರಿತು ತನಿಖೆ ನಡೆಸಲಾಗುವುದು‘ ಎಂದು ಎಸ್‌ಎಲ್‌ಸಿ ಕಾರ್ಯದರ್ಶಿ ಮೋಹನ್ ಡಿಸಿಲ್ವಾ ಹೇಳಿದ್ದಾರೆ. ಬ

ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್: ಒಲಿಂಪಿಕ್ಸ್‌ಗೆ ಭರ್ಜರಿ ಸಿದ್ಧತೆ

ಚಿನ್ನ ಗೆದ್ದ ರಾಹಿ ಸರ್ನೋಬತ್

ಒಸಿಜೆಕ್, ಕ್ರೊವೇಷ್ಯಾ (ಪಿಟಿಐ): ಅಮೋಘ ಲಯದಲ್ಲಿರುವ ಭಾರತದ ರಾಹಿ ಸರ್ನೋಬತ್ ಅವರು ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ಟೂರ್ನಿಯಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಮಹಿಳೆಯರ 25 ಮೀಟರ್ಸ್ ಪಿಸ್ತೂಲ್ ವಿಭಾಗದಲ್ಲಿ ಅವರು ಸೋಮವಾರ ಅಗ್ರಸ್ಥಾನ ಗಳಿಸಿದರು. ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ಯುವ ಶೂಟರ್ ಮನು ಭಾಕರ್ ಏಳನೇ ಸ್ಥಾನಕ್ಕೆ ಸಮಾಧಾನಪಡಬೇಕಾಯಿತು.

ಈ ಟೂರ್ನಿಯಲ್ಲಿ ಭಾರತ ಗೆದ್ದ ಮೊದಲ ಚಿನ್ನ ಇದು. ಎರಡು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಈಗಾಗಲೇ ತಂಡದ ಮಡಿಲು ಸೇರಿವೆ.

ಸೌರಭ್ ಚೌಧರಿ ಹಾಗೂ ಮನು ಜೊತೆಯಾಗಿ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಬೆಳ್ಳಿ ಗೆದ್ದಿದ್ದರು. ಅಲ್ಲದೆ ಮನು, ರಾಹಿ ಹಾಗೂ ಯಶಸ್ವಿನಿ ದೇಸ್ವಾಲ್ ಅವರಿದ್ದ ಮಹಿಳಾ ತಂಡ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಕಂಚು ತನ್ನದಾಗಿಸಿಕೊಂಡಿತ್ತು.


ರಾಹಿ ಸರ್ನೋಬತ್– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಇದಕ್ಕೂ ಮೊದಲು ಸೌರಭ್ ಚೌಧರಿ ಪುರುಷರ 10 ಮೀಟರ್ಸ್ ಏರ್ ಪಿಸ್ತೂಲ್ ವಿಭಾಗದಲ್ಲಿ ಕಂಚು ಗೆದ್ದಿದ್ದರು.

ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ 30 ವರ್ಷದ ರಾಹಿ, ಫೈನಲ್‌ನಲ್ಲಿ 39 ಸ್ಕೋರ್ ದಾಖಲಿಸಿದರು. ಅರ್ಹತಾ ಸುತ್ತಿನಲ್ಲಿ 591 ಸ್ಕೋರ್ ಗಳಿಸಿ ಎರಡನೇ ಸ್ಥಾನ ಪಡೆದಿದ್ದರು.

ಬೆಳ್ಳಿ ಗೆದ್ದ ಫ್ರಾನ್ಸ್‌ನ ಮತಿಲ್ದೆ ಲ್ಯಾಮೊಲ್ಲೆ ಫೈನಲ್‌ನಲ್ಲಿ ದಾಖಲಿಸಿದ ಸ್ಕೋರ್ 31. ರಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತೆ, ರಷ್ಯಾದ ವಿಟಾಲಿನಾ ಬ್ಯಾಟ್‌ರಶ್ಕಿನಾ (28) ಕಂಚು ಗೆದ್ದರು.

ಮನು ಭಾಕರ್ ಫೈನಲ್‌ನಲ್ಲಿ ಕೇವಲ 11 ಸ್ಕೋರ್ ದಾಖಲಿಸಿದ್ದರು. ಶೂಟ್ ಆಫ್‌ನಲ್ಲಿ ಅವರು ಬಲ್ಗೇರಿಯಾದ ವಿಕ್ಟೋರಿಯಾ ಚೈಕಾ ಎದುರು ಸೋಲನುಭವಿಸಿದರು.

ಮಹಿಳೆಯರ 50 ಮೀ. ರೈಫಲ್ ತ್ರಿ ಪೊಸಿಷನ್ಸ್‌ನಲ್ಲಿ ಭಾರತಕ್ಕೆ ನಿರಾಸೆ ಕಾದಿತ್ತು. ಈ ವಿಭಾಗದಲ್ಲಿ ಸ್ಪರ್ಧಿಸಿದ್ದ ತೇಜಸ್ವಿನಿ ಸಾವಂತ್ ಮತ್ತು ಅಂಜುಮ್ ಮೌದ್ಗಿಲ್ ಫೈನಲ್ ತಲುಪಲೂ ವಿಫಲರಾದರು.

ಮುಖ್ಯಾಂಶಗಳು

- ಫ್ರಾನ್ಸ್‌ನ ಮತಿಲ್ದೆ ಲ್ಯಾಮೊಲ್ಲೆಗೆ ಬೆಳ್ಳಿ ಪದಕ
- ಯುವ ಶೂಟರ್ ಮನು ಭಾಕರ್‌ಗೆ ಏಳನೇ ಸ್ಥಾನ
- ಮಹಿಳೆಯರ 50 ಮೀ.ರೈಫಲ್ ತ್ರಿ ಪೋಸಿಷನ್ಸ್‌ನಲ್ಲಿ ಭಾರತಕ್ಕೆ ನಿರಾಸೆ


ಕ್ರೊವೇಷ್ಯಾ ತಂಡವನ್ನು ಮಣಿಸಿದ ಸಂಭ್ರಮದಲ್ಲಿ ಸ್ಪೇನ್ ಆಟಗಾರರು– ಎಎಫ್‌ಪಿ ಚಿತ್ರ

ಯೂರೊ ಕಪ್: ಕ್ವಾರ್ಟರ್‌ಗೆ ಸ್ಪೇನ್

ಕೋಪನ್‌ಹೇಗನ್ (ಎಎಫ್‌ಪಿ: ಅಮೋಘ ಆಟವಾಡಿದ ಸ್ಪೇನ್ ತಂಡವು ಕ್ರೊವೇಷ್ಯಾವನ್ನು 5–3ರಿಂದ ಮಣಿಸಿ ಯೂರೊ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಸೋಮವಾರ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿತು.

ಸ್ಪೇನ್ ಪರ ಪ್ಯಾಬ್ಲೊ ಸರಾಬಿಯಾ (38ನೇ ನಿಮಿಷ), ಸೀಜರ್ ಅಜ್ಪಿಲಿಕುಟಾ (57ನೇ ನಿ.), ಫೆರಾನ್ ಟೊರೆಸ್ (76ನೇ ನಿ.), ಅಲ್ವಾರೊ ಮೊರಾಟಾ (100ನೇ ನಿ) ಮತ್ತು ಮೈಕೆಲ್ ಒಯರಾಜ್ಬಾಲ್ (103ನೇ ನಿ.) ಗೋಲು ದಾಖಲಿಸಿದರು.

ಕ್ರೊವೇಷ್ಯಾದ ಮಿಸ್ಲಾವ್ ಒರಿಸಿಕ್ (85ನೇ ನಿ.) ಹಾಗೂ ಮಾರಿಯೊ ಪೆಸಾಲಿಕ್ (90+2ನೇ ನಿ.) ಗೋಲು ದಾಖಲಿಸಿದರೆ, ಎದುರಾಳಿ ತಂಡದ ಪೆಡ್ರಿ ಒಂದು ಉಡುಗೊರೆ ಗೋಲು ನೀಡಿದರು.

ಪಂದ್ಯ ಹೆಚ್ಚುವರಿ ಅವಧಿಯವರೆಗೆ ನಡೆಯಿತು.

ಸೆವಿಲೆಯಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ನಾಯಕ ಕ್ರಿಸ್ಟಿಯಾನೊ ರೊನಾಲ್ಡೊ ಅವರನ್ನು ನಿಯಂತ್ರಿಸಿದ ಬೆಲ್ಜಿಯಂ ಏಕೈಕ ಗೋಲಿನೊಂದಿಗೆ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಪಂದ್ಯದಲ್ಲಿ ಹಾಲಿ ಚಾಂಪಿಯನ್ ಪೋರ್ಚುಗಲ್ 0–1ರಲ್ಲಿ ಸೋತು ಹೊರಬಿದ್ದಿತು.

‘ಯುಎಇಯಲ್ಲಿ ಟಿ20 ವಿಶ್ವಕಪ್’

ನವದೆಹಲಿ (ಎಎಫ್‌ಪಿ): ಭಾರತದಲ್ಲಿ ನಡೆಸಲು ಉದ್ದೇಶಿಸಿದ್ದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯನ್ನು ಯುಎಇಗೆ ಸ್ಥಳಾಂತರಿಸಲಾಗುವುದು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸೋಮವಾರ ತಿಳಿಸಿದೆ.

ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ಯುಎಇಯಲ್ಲಿ ಟೂರ್ನಿಯನ್ನು ಆಯೋಜಿಸಲು ಸಿದ್ಧ ಇರುವುದಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಗೆ ತಿಳಿಸಲಾಗಿದೆ. ದೇಶದಲ್ಲಿ ಕೋವಿಡ್ ಆತಂಕ ಇನ್ನೂ ಇದೆ. ಪ್ರಯಾಣ ನಿರ್ಬಂಧಗಳು ಜಾರಿಯಲ್ಲಿವೆ. ಇಂಥ ವೇಳೆ ಟೂರ್ನಿ ಆಯೋಜನೆ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವುದು ಕಷ್ಟಸಾಧ್ಯ’ ಎಂದು ಬಿಸಿಸಿಐ ಖಜಾಂಚಿ ಅರುಣ್ ಧುಮಾಲ್ ತಿಳಿಸಿದ್ದಾರೆ.

‘ಅರ್ಹತಾ ಸುತ್ತಿನ ಪಂದ್ಯಗಳನ್ನು ಒಮಾನ್‌ನಲ್ಲಿ ಆಯೋಜಿಸಲಾಗುವುದು. ಉಳಿದ ಪಂದ್ಯಗಳು ದುಬೈ, ಅಬುಧಾಬಿ ಮತ್ತು ಶಾರ್ಜಾದಲ್ಲಿ ನಡೆಯಲಿವೆ’ ಎಂದು ಮಂಡಳಿಯ ಉಪಾಧ್ಯಕ್ಷ ರಾಜೀವ್ ಶುಕ್ಲಾ ತಿಳಿಸಿದ್ದಾರೆ.

ವಿಂಬಲ್ಡನ್: ಮೊದಲ ಸುತ್ತಿನಲ್ಲೇ ಸಿಟ್ಸಿಪಾಸ್‌ಗೆ ಆಘಾತ

ಜೊಕೊವಿಚ್ ಶುಭಾರಂಭ

ಲಂಡನ್ (ಎಎಫ್‌ಪಿ): ಹಾಲಿ ಚಾಂಪಿಯನ್, ಸರ್ಬಿಯಾದ ನೊವಾಕ್ ಜೊಕೊವಿಚ್ ವಿಂಬಲ್ಡನ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಜಯ ಗಳಿಸಿದರು. ಆದರೆ ಫ್ರೆಂಚ್ ಓಪನ್ ಟೂರ್ನಿಯ ರನ್ನರ್ ಅಪ್ ಸ್ಟೆಫನೊಸ್ ಸಿಟ್ಸಿಪಾಸ್ ಮೊದಲ ತಡೆ ದಾಟುವಲ್ಲಿ ವಿಫಲರಾದರು.

ಬ್ರಿಟನ್‌ನ ಜ್ಯಾಕ್ ಡ್ರಾಪರ್ ಎದುರಿನ ಪಂದ್ಯದ ಮೊದಲ ಸೆಟ್‌ನಲ್ಲಿ ಸೋಲುಂಡರೂ ಚೇತರಿಸಿಕೊಂಡ ಜೊಕೊವಿಚ್ 4-6, 6-1, 6-2, 6-2ರಲ್ಲಿ ಗೆಲುವು ಸಾಧಿಸಿದರು.

ವಿಶ್ವ ಕ್ರಮಾಂಕದಲ್ಲಿ 253ನೇ ಸ್ಥಾನದಲ್ಲಿರುವ ಡ್ರಾಪರ್ ಅವರಿಗೆ ಪ್ರಮುಖ ಟೂರ್ನಿಯೊಂದರಲ್ಲಿ ಇದು ಐದನೇ ಪಂದ್ಯವಾಗಿತ್ತು. ಮಳೆಯಿಂದಾಗಿ ಒದ್ದೆಯಾಗಿದ್ದ ಅಂಗಣದಲ್ಲಿ 34 ವರ್ಷದ ಜೊಕೊವಿಚ್ ಆರಂಭದಲ್ಲಿ ನಿಯಂತ್ರಣ ಕಳೆದುಕೊಂಡರು. ಎಡಗೈ ಆಟಗಾರ ಡ್ರಾಪರ್ ಮೊದಲ ಸೆಟ್‌ನಲ್ಲಿ ಬ್ರೇಕ್ ಪಾಯಿಂಟ್‌ಗಳನ್ನು ಉಳಿಸಿಕೊಂಡು ಗಮನ ಸೆಳೆದರು.


ಒದ್ದೆಯಾಗಿದ್ದ ಅಂಗಣದಲ್ಲಿ ನೊವಾಕ್ ಜೊಕೊವಿಚ್ ಜಾರಿಬಿದ್ದರು –ಎಎಫ್‌ಪಿ ಚಿತ್ರ

ಎರಡನೇ ಸೆಟ್‌ನಿಂದ ಜೊಕೊವಿಚ್ ಲಯ ಕಂಡುಕೊಂಡರು. ಒಟ್ಟು 25 ಏಸ್ ಸಿಡಿಸಿದ ಅವರು 19 ವರ್ಷದ ಎದುರಾಳಿಯನ್ನು ಸುಲಭವಾಗಿ ಮಣಿಸಿದರು.

57ನೇ ಕ್ರಮಾಂಕದ, ಅಮೆರಿಕದ ಫ್ರಾನ್ಸಿಸ್ ಟೈಫೊಯ್ 6-4, 6-4, 6-3 ರಿಂದ ಗ್ರೀಸ್‌ನ ಸಿಟ್ಸಿಪಾಸ್‌ಗೆ ಸೋಲುಣಿಸಿ ಎರಡನೇ ಸುತ್ತಿಗೆ ಲಗ್ಗೆಯಿಟ್ಟರು.

ಮಹಿಳಾ ವಿಭಾಗದಲ್ಲಿ ಬೆಲಾರಸ್‌ನ ಅರಿನಾ ಸಬಲೆಂಕಾ ಮೊದಲ ಸುತ್ತಿನ ಪಂದ್ಯದಲ್ಲಿ ರುಮೇನಿಯಾದ ಮೋನಿಕಾ ನಿಕುಲೆಸ್ಕು ವಿರುದ್ಧ 6-1, 6-4ರಲ್ಲಿ ಜಯ ಗಳಿಸಿದರು.

ಮಳೆಯಿಂದಾಗಿ ಟೂರ್ನಿಯ ಆರಂಭ ತಡವಾಯಿತು. ಹೀಗಾಗಿ ಮೊದಲ ಸುತ್ತಿನ 64 ಪಂದ್ಯಗಳ ಪೈಕಿ 16 ಪಂದ್ಯಗಳನ್ನು ರದ್ದುಗೊಳಿಸಲಾಯಿತು.

ಶ್ರೀಲಂಕಾ ತಲುಪಿದ ಧವನ್ ಬಳಗ

ಕೊಲಂಬೊ (ಪಿಟಿಐ): ಏಕದಿನ ಮತ್ತು ಟಿ20 ಸರಣಿ ಆಡಲಿರುವ ಶಿಖರ್ ಧವನ್ ನೇತೃತ್ವದ ಭಾರತ ಕ್ರಿಕೆಟ್ ತಂಡ ಸೋಮವಾರ ಶ್ರೀಲಂಕಾ ತಲುಪಿತು. ರಾಹುಲ್ ದ್ರಾವಿಡ್ ಕೋಚ್ ಆಗಿರುವ ಮತ್ತು ಆರು ಮಂದಿ ಹೊಸಬರನ್ನು ಹೊಂದಿರುವ ತಂಡ ಮುಂಬೈನಿಂದ ತೆರಳಿತು.

ಜುಲೈ 13ರಿಂದ ಸರಣಿಗಳು ನಡೆಯಲಿದ್ದು ತಲಾ ಮೂರು ಏಕದಿನ ಮತ್ತು ಟಿ20 ಪಂದ್ಯಗಳನ್ನು ಆಡಲಿದೆ. ವಿರಾಟ್ ಕೊಹ್ಲಿ ನೇತೃತ್ವದ ಮುಖ್ಯ ತಂಡ ಇಂಗ್ಲೆಂಡ್‌ನಲ್ಲಿ ಟೆಸ್ಟ್ ಸರಣಿ ಆಡಲು ತೆರಳಿದೆ. ವೇಗಿ ಭುವನೇಶ್ವರ್ ಕುಮಾರ್ ತಂಡದ ಉಪನಾಯಕನಾಗಿದ್ದಾರೆ.

ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ, ಸ್ಪಿನ್ ಜೋಡಿ ಕುಲದೀಪ್ ಯಾದವ್ ಮತ್ತು ಯಜುವೇಂದ್ರ ಚಾಹಲ್, ಯುವ ಆಟಗಾರರಾದ ದೇವದತ್ತ ಪಡಿಕ್ಕಲ್, ಪೃಥ್ವಿ ಶಾ, ನಿತೀಶ್ ರಾಣಾ, ಋತುರಾಜ್ ಗಾಯಕವಾಡ್, ವೇಗಿ ಚೇತನ್ ಸಕರಿಯಾ ಮತ್ತು ವಿಕೆಟ್ ಕೀಪರ್‌ಗಳಾದ ಇಶಾನ್ ಕಿಶನ್ ಮತ್ತು ಸಂಜು ಸ್ಯಾಮ್ಸನ್ ಇದ್ದಾರೆ.

ಮಂಗಳವಾರದಿಂದ ಜುಲೈ ಒಂದರ ವರೆಗೆ ತಂಡ ಕ್ವಾರಂಟೈನ್‌ನಲ್ಲಿರಲಿದೆ. ಜುಲೈ ಎರಡರಿಂದ ನಾಲ್ಕರ ವರೆಗೆ ಹಂತಹಂತವಾಗಿ ಅಭ್ಯಾಸ ಮಾಡಲಿದ್ದು ಐದರಿಂದ ಪೂರ್ಣಪ್ರಮಾಣದ ಅಭ್ಯಾಸ ನಡೆಯಲಿದೆ.


ಶ್ರೀಲಂಕಾದಲ್ಲಿ ಭಾರತ ತಂಡದ ಆಟಗಾರರು– ಟ್ವಿಟರ್ ಚಿತ್ರ

ಬಿಟಿಸಿ: ಜುಲೈ 18ರಿಂದ ರೇಸ್ ಆರಂಭಕ್ಕೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್ ಜುಲೈ 18ರಿಂದ ಬೇಸಿಗೆ ರೇಸ್‌ಗಳನ್ನು ನಡೆಸಲು ನಿರ್ಧರಿಸಿದ್ದು, ಇದಕ್ಕೆ ರಾಜ್ಯ ಸರ್ಕಾರದಿಂದ ಅನುಮತಿ ಸಿಗುವ ಭರವಸೆ ವ್ಯಕ್ತಪಡಿಸಿದೆ. 10 ದಿನಗಳ ಅವಧಿಯ ರೇಸ್‌ಗಳ ಕರಡು ವೇಳಾಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ.


ಈ ಅವಧಿಯಲ್ಲಿ ಪ್ರಮುಖ ರೇಸ್‌ಗಳಾದ ಫಿಲ್ಲೀಸ್ ಮತ್ತು ಕೋಲ್ಟ್ಸ್ ಚಾಂಪಿಯನ್‌ಷಿಪ್ ರೇಸ್‌ಗಳನ್ನು ಕ್ರಮವಾಗಿ ಜುಲೈ 31 ಮತ್ತು ಆಗಸ್ಟ್ 1 ರಂದು; ಬೆಂಗಳೂರು ಸೆಂಟ್ ಲೆಗರ್ ರೇಸ್‌ನ್ನು ಆಗಸ್ಟ್ 15ರಂದು ಮತ್ತು ಕಿಂಗ್‌ಫಿಷರ್ ಅಲ್ಟ್ರಾ ಡರ್ಬಿ ಬೆಂಗಳೂರು ರೇಸ್‌ನ್ನು ಆಗಸ್ಟ್ 22ರಂದು ನಡೆಸಲು ಬಿಟಿಸಿ ಉದ್ದೇಶಿಸಿದೆ. ‘ಕೊರೊನಾ ವೈರಸ್ ಕಾರಣ ವಿಳಂಬವಾಗಿರುವ ರೇಸಿಂಗ್ ಚಟುವಟಿಕೆಗಳನ್ನು ಪುನರಾರಂಭಿಸುವ ವಿಶ್ವಾಸದಲ್ಲಿದ್ದು, ಸರ್ಕಾರದಿಂದ ಅನುಮೋದನೆ ನಿರೀಕ್ಷಿಸುತ್ತಿದ್ದೇವೆ‘ ಎಂದು ಬಿಟಿಸಿ ಮುಖ್ಯಸ್ಥ ವಿನೋದ್ ಶಿವಪ್ಪ ತಿಳಿಸಿದ್ದಾರೆ.

ಸೋನಿಯಾ ಹೆಸರನ್ನೂ ಅಂತಿಮಗೊಳಿಸಿದ ಬಿಎಫ್‌ಐ

ರಾಷ್ಟ್ರೀಯ ಯುವ ತಂಡದ ಮುಖ್ಯ ಕೋಚ್ ಭಾಸ್ಕರ ಭಟ್ಟ ಅವರನ್ನು ದ್ರೋಣಾಚಾರ್ಯ ಪ್ರಶಸ್ತಿಗೆ ಶಿಫಾರಸು ಮಾಡಲಾಗಿದೆ.

ಅರ್ಜುನ ಪುರಸ್ಕಾರಕ್ಕೆ ಗೌರವ್, ಕೌರ್ ಹೆಸರು ಶಿಫಾರಸು

ನವದೆಹಲಿ (ಪಿಟಿಐ): ಸಿಮ್ರನ್‌ಜೀತ್ ಕೌರ್, ಗೌರವ್ ಸೋಳಂಕಿ ಮತ್ತು ಸೋನಿಯಾ ಚಾಹಲ್ ಅವರನ್ನು ಭಾರತ ಬಾಕ್ಸಿಂಗ್ ಫೆಡರೇಷನ್ (ಬಿಎಫ್‌ಐ) ಈ ವರ್ಷದ ಅರ್ಜುನ ಪುರಸ್ಕಾರಕ್ಕೆ ಶಿಫಾರಸು ಮಾಡಿದೆ.



ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿರುವ ಸಿಮ್ರನ್‌ಜೀತ್ (ಮಹಿಳೆಯರ 60 ಕೆಜಿ ವಿಭಾಗ), 2018ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದಿದ್ದರು. ಪುರುಷರ 57 ಕೆಜಿ ವಿಭಾಗದಲ್ಲಿ ಸ್ಪರ್ಧಿಸುವ ಗೌರವ್, 2018ರ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ವಿಜೇತರಾಗಿದ್ದಾರೆ. ಅದೇ ವರ್ಷ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸೋನಿಯಾ ಚಾಹಲ್ (ಮಹಿಳೆಯರ 57 ಕೆಜಿ ವಿಭಾಗ) ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದರು.

‘ಬಾಕ್ಸರ್‌ಗಳ ನಾಲ್ಕು ವರ್ಷಗಳ ಸಾಮರ್ಥ್ಯವನ್ನು ಆಧರಿಸಿ ಪ್ರಶಸ್ತಿಗೆ ಅಂತಿಮಗೊಳಿಸಲಾಗಿದೆ‘ ಎಂದು ಬಿಎಫ್‌ಐ ಪ್ರಧಾನ ಕಾರ್ಯದರ್ಶಿ ಹೇಮಂತ್ ಕಲಿಟಾ ಹೇಳಿದ್ದಾರೆ. ಮಹಿಳಾ ತಂಡದ ಸಹಾಯಕ ಕೋಚ್ ಸಂಧ್ಯಾ ಗುರುಂಗ್ ಅವರನ್ನು ದ್ರೋಣಾಚಾರ್ಯ ಪ್ರಶಸ್ತಿಗೆ ಶಿಫಾರಸು ಮಾಡಲಾಗಿದೆ.

ಅಥ್ಲೆಟಿಕ್ಸ್: 400 ಮೀಟರ್ಸ್ ಓಟದಲ್ಲಿ ಸಾಧನೆ

ಪ್ರಿಯಾಗೆ ಚಿನ್ನ; ಪೂವಮ್ಮಗೆ ಬೆಳ್ಳಿ

ಪಟಿಯಾಲ (ಪಿಟಿಐ): ಮಿಂಚಿನ ಓಟದ ಮೂಲಕ ಪ್ರತಿಸ್ಪರ್ಧಿಗಳನ್ನು ಹಿಂದಿಕ್ಕಿದ ಕರ್ನಾಟಕದ ಪ್ರಿಯಾ ಮೋಹನ್ ಮತ್ತು ಎಂ.ಆರ್.ಪೂವಮ್ಮ ಇಲ್ಲಿ ನಡೆಯುತ್ತಿರುವ ಅಂತರರಾಜ್ಯ ಅಥ್ಲೆಟಿಕ್ ಕೂಟದಲ್ಲಿ ಸೋಮವಾರ ಪದಕಗಳನ್ನು ಗೆದ್ದುಕೊಂಡರು. 400 ಮೀಟರ್ಸ್ ಓಟದ ಸ್ಪರ್ಧೆಯಲ್ಲಿ ಪ್ರಿಯಾ ಚಿನ್ನಕ್ಕೆ ಮುತ್ತಿಕ್ಕಿದರೆ ಪೂವಮ್ಮ ಬೆಳ್ಳಿ ಪದಕ ಗೆದ್ದುಕೊಂಡರು.

ಲೇನ್ ಮೂರರಲ್ಲಿ ಓಡಿದ ಯುವ ಅಥ್ಲೀಟ್ ಪ್ರಿಯಾಗೆ ಪೂವಮ್ಮ ಮಾತ್ರವಲ್ಲದೆ ಕೇರಳದ ಜಿಶ್ನಾ ಮ್ಯಾಥ್ಯೂ, ತಮಿಳುನಾಡಿನ ರೇವತಿ ವೀರಮಣಿ ಮತ್ತು ಹರಿಯಾಣದ ರಚನಾ ಅವರಿಂದ ತೀವ್ರ ಪೈಪೋಟಿ ಎದುರಾಗಿತ್ತು. ಕೊನೆಯ 200 ಮೀಟರ್ಸ್‌ನಲ್ಲಿ ಪ್ರಿಯಾ ವೇಗ ಹೆಚ್ಚಿಸಿಕೊಂಡರು. 53.29 ಸೆಕೆಂಡುಗಳಲ್ಲಿ ಅವರು ಗುರಿ ಮುಟ್ಟಿದರೆ ಪೂವಮ್ಮ ಅಂತಿಮ ಗೆರೆ ದಾಟಲು 53.54 ಸೆಕೆಂಡು ತೆಗೆದುಕೊಂಡರು.

ತಜಿಂದರ್‌ಗೆ ಚಿನ್ನದ ಪದಕ: ಒಲಿಂಪಿಕ್ಸ್‌ಗೆ ಆಯ್ಕೆಯಾಗಿರುವ ತಜಿಂದರ್ ಪಾಲ್ ತೂರ್ ಶಾಟ್‌ಪಟ್‌ನಲ್ಲಿ ಚಿನ್ನ ಗೆದ್ದರು. ಮಹಿಳೆಯರ ಜಾವೆಲಿನ್ ಥ್ರೋದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಅನು ರಾಣಿ ಚಿನ್ನ ಗೆದ್ದರೂ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಲು ವಿಫಲರಾದರು.


ಪ್ರಿಯಾ ಮೋಹನ್


ಎಂ.ಆರ್.ಪೂವಮ್ಮ

ಫಲಿತಾಂಶಗಳು: ಪುರುಷರ 400 ಮೀಟರ್ಸ್ ಓಟ: ಕಳಿಗ ಕುಮಾರಗೆ (ಶ್ರೀಲಂಕಾ)–1. ಕಾಲ: 45.73ಸೆಕೆಂಡು, ವಿಕ್ರಾಂತ್ ಪಾಂಚಾಲ್ (ಹರಿಯಾಣ)–2, ಸಾರ್ಥಕ್ ಭಾಂಬ್ರಿ (ದೆಹಲಿ)–3; 1500 ಮೀ ಓಟ: ಅಜಯ್ ಕುಮಾರ್ ಸರೋಜ್ (ಉತ್ತರ ಪ್ರದೇಶ)–1. ಕಾಲ: 3 ನಿಮಿಷ 42.55, ಶಶಿಭೂಷಣ್ ಸಿಂಗ್ (ಪಶ್ಚಿಮ ಬಂಗಾಳ)–2, ರಾಹುಲ್ (ದೆಹಲಿ)–3; ಲಾಂಗ್‌ಜಂಪ್: ಮುಹಮ್ಮದ್ ಅನೀಶ್ (ಕೇರಳ)–1. 7.76 ಮೀಟರ್ಸ್, ಯುಗಾಂತ್ ಶೇಖರ್ ಸಿಂಗ್ (ಉತ್ತರ ಪ್ರದೇಶ)–2, ರಿಷಭ್ (ಉತ್ತರಪ್ರದೇಶ)–3; ಶಾಟ್‌ಪಟ್: ತಜಿಂದರ್ ಸಿಂಗ್ ತೂರ್ (ಪಂಜಾಬ್)–1. ಅಂತರ: 21.10 ಮೀ, ಕರವೀರ್ ಸಿಂಗ್ (ಪಂಜಾಬ್)–2, ವನಂ ಶರ್ಮಾ (ರಾಜಸ್ತಾನ್)–3.

ಮಹಿಳೆಯರ 400 ಮೀಟರ್ಸ್ ಓಟ: ಪ್ರಿಯಾ ಮೋಹನ್ (ಕರ್ನಾಟಕ)–1. ಕಾಲ: 53.29 ಸೆ, ಎಂ.ಆರ್.ಪೂವಮ್ಮ (ಕರ್ನಾಟಕ)–2, ರೇವತಿ ವೀರಮಣಿ (ತಮಿಳುನಾಡು)–3; 10,000 ಮೀ ಓಟ: ಪೂಜಾ ಎಚ್ (ರಾಜಸ್ತಾನ)–1. ಕಾಲ: 35:29.59, ಫೂಲನ್ ಪಾಲ್ (ಉತ್ತರ ಪ್ರದೇಶ)–2, ಜ್ಯೋತಿ (ಉತ್ತರ ಪ್ರದೇಶ)–3; ಜಾವೆಲಿನ್ ಥ್ರೋ: ಅನು ಅಮರ್‌ಪಾಲ್ ರಾಣಿ (ಉತ್ತರಪ್ರದೇಶ)–1. ಅಂತರ: 62.83ಮೀ, ಸಂಜನಾ ಚೌಧರಿ (ರಾಜಸ್ತಾನ)–2, ಪುಷ್ಪಾ (ಹರಿಯಾಣ)–3.

ಇಂಡಿಯಾ, ಹೈದರಾಬಾದ್ ಓಪನ್ ಟೂರ್ನಿ ರದ್ದು

ನವದೆಹಲಿ (ಪಿಟಿಐ): ಇಂಡಿಯಾ ಓಪನ್ ಸೂಪರ್ 500 ಮತ್ತು ಹೈದರಾಬಾದ್ ಓಪನ್ ಸೂಪರ್ 100 ಟೂರ್ನಿಗಳನ್ನು ಕೋವಿಡ್ ಕಾರಣದಿಂದ ರದ್ದುಗೊಳಿಸಿರುವ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್) ಈ ಬಾರಿ ಉಳಿದಿರುವ ಟೂರ್ನಿಗಳ ಹೊಸ ವೇಳಾಪಟ್ಟಿ ಪ್ರಕಟಿಸಿದೆ.

ಒಲಿಂಪಿಕ್ಸ್ ಅರ್ಹತೆಯ ಟೂರ್ನಿಗಳಲ್ಲಿ ಒಂದಾಗಿದ್ದ ಇಂಡಿಯಾ ಓಪನ್ ಟೂರ್ನಿಯನ್ನು ಮೇ 11ರಿಂದ 16ರ ವರೆಗೆ ನಡೆಸಲು ಉದ್ದೇಶಿಸಲಾಗಿತ್ತು. ಆದರೆ ದೆಹಲಿಯಲ್ಲಿ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿದ್ದ ಕಾರಣ ಮುಂದೂಡಲಾಗಿತ್ತು. ಹೈದರಾಬಾದ್ ಓಪನ್ ಆಗಸ್ಟ್ 24ರಿಂದ 29ರ ವರೆಗೆ ನಡೆಯಬೇಕಾಗಿತ್ತು.

ಹೊಸ ವೇಳಾಪಟ್ಟಿಯಲ್ಲಿ ಟೂರ್ನಿ ಸೈಯದ್ ಮೋದಿ ಟೂರ್ನಿಗೆ ಅವಕಾಶ ನೀಡಲಾಗಿದೆ.


‘ಅಲ್ಪಸಂಖ್ಯಾತರ ಜನಸಂಖ್ಯೆ ಬೆಳವಣಿಗೆ: ಅಸ್ಸಾಂ ಸರ್ಕಾರದಿಂದ ನಿರ್ದಿಷ್ಟ ನೀತಿ’

ಗುವಾಹಟಿ: ‘ಬಡತನ ಮತ್ತು ಅನಕ್ಷರತೆ ನಿರ್ಮೂಲನೆ ಮಾಡುವ ಉದ್ದೇಶದಿಂದ ಅಲ್ಪಸಂಖ್ಯಾತರ ಜನಸಂಖ್ಯೆ ಬೆಳವಣಿಗೆಯನ್ನು ನಿಧಾನಗೊಳಿಸಲು ಸರ್ಕಾರ ನಿರ್ದಿಷ್ಟ ನೀತಿಯನ್ನು ಅಳವಡಿಸಿಕೊಳ್ಳಲಿದೆ’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ.

‘ಆರೋಗ್ಯ, ಶೈಕ್ಷಣಿಕ ಉಪಕ್ರಮಗಳನ್ನು ವಿಸ್ತರಿಸುವುದು ಮತ್ತು ಮುಸ್ಲಿಂ ಜನಸಂಖ್ಯೆ ಬೆಳವಣಿಗೆಯನ್ನು ಪರಿಶೀಲಿಸುವುದು ರಾಜ್ಯ ಸರ್ಕಾರದ ಪ್ರಾಥಮಿಕ ಉದ್ದೇಶವಾಗಿದೆ’ ಎಂದು ಶರ್ಮಾ ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

‘ಇದೊಂದು ರಾಜಕೀಯ ವಿಷಯವಲ್ಲ. ನಮ್ಮ ತಾಯಂದಿರ ಮತ್ತು ಸಹೋದರಿಯರ ಯೋಗಕ್ಷೇಮ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಮುದಾಯದ ಯೋಗಕ್ಷೇಮ ಮುಖ್ಯ’ ಎಂದು ಅವರು ಪ್ರತಿಪಾದಿಸಿದರು.

‘ಅಸ್ಸಾಂ ತನ್ನ ವಾರ್ಷಿಕ ಜನಸಂಖ್ಯೆ ಬೆಳವಣಿಗೆಯನ್ನು ಶೇ 1.6ಕ್ಕೆ ನಿರ್ವಹಿಸಲು ಸಮರ್ಥವಾಗಿದೆ. ಆದರೆ ಅಂಕಿ–ಅಂಶಗಳನ್ನು ಗಮನಿಸಿದಾಗ ಮುಸ್ಲಿಂ ಜನಸಂಖ್ಯೆಯ ಬೆಳವಣಿಗೆಯು ಶೇ 29ರ ದರದಲ್ಲಿದೆ ಎಂಬುದು ತಿಳಿದುಬಂದಿದೆ. ಹಿಂದೂಗಳ ಜನಸಂಖ್ಯೆ ಬೆಳವಣಿಗೆ ಶೇ 10ರ ದರದಲ್ಲಿದೆ’ ಎಂದೂ ಅವರು ಹೇಳಿ ದ್ದಾರೆ.


ಹಿಮಂತ ಶರ್ಮಾ

‘ಮುಸ್ಲಿಂ ಸಮುದಾಯದ ಮುಖಂಡರೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆ. ಸಮುದಾಯದಲ್ಲಿ ನಾಯಕತ್ವ ಸೃಷ್ಟಿಸಲು ಮುಂದಿನ ತಿಂಗಳು ಕೆಲವು ಸಂಸ್ಥೆಗಳೊಂದಿಗೆ ಸಮಾ ಲೋಚನೆ ನಡೆಸಲಾಗುವುದು’ ಎಂದರು.

ಅಧ್ಯಕ್ಷ ಜೋ ಬೈಡನ್‌ರಿಂದ ನಿರ್ದೇಶನ: ಜಾನ್ ಕಿರ್ಬಿ

ಇರಾನ್ ಬೆಂಬಲಿತ ಉಗ್ರರ ತಾಣಗಳ ಮೇಲೆ ಅಮೆರಿಕ ವೈಮಾನಿಕ ದಾಳಿ

ವಾಷಿಂಗ್ಟನ್ (ಪಿಟಿಐ): ಸಿರಿಯಾ ಮತ್ತು ಇರಾಕ್ ನಡುವೆ ಗಡಿಯಲ್ಲಿನ ಇರಾನ್ ಬೆಂಬಲಿತ ಉಗ್ರಗಾಮಿಗಳ ಗುಂಪಿನ ಮೂರು ಶಸ್ತ್ರಾಸ್ತ್ರ ಸಂಗ್ರಹಗಾರ ನೆಲೆಗಳನ್ನು ಗುರಿಯಾಗಿಸಿ ಭಾನುವಾರ ಅಮೆರಿಕ ವೈಮಾನಿಕ ದಾಳಿ ನಡೆಸಿದೆ.

ಉಗ್ರಗಾಮಿಗಳು ಇರಾಕ್‌ನಲ್ಲಿದ್ದ ಅಮೆರಿಕದ ಪಡೆಗಳ ಮೇಲೆ ದಾಳಿ ನಡೆಸಲು ಈ ನೆಲೆ ಬಳಸುತ್ತಿದ್ದರು ಎಂದು ಎಂದು ಪೆಂಟಗನ್‌ನ ಮಾಧ್ಯಮ ಕಾರ್ಯದರ್ಶಿ ಜಾನ್ ಕಿರ್ಬಿ ತಿಳಿಸಿದ್ದಾರೆ.

‘ಅಧ್ಯಕ್ಷ ಜೋ ಬೈಡನ್ ನಿರ್ದೇಶನದ ಮೇರೆಗೆ ಅಮೆರಿಕದ ಮಿಲಿಟರಿ ಪಡೆಗಳು, ಸಿರಿಯಾದಲ್ಲಿರುವ ಎರಡು, ಇರಾಕ್‌ನ ಒಂದು ಸಂಗ್ರಹಗಾರಗಳನ್ನು ಗುರಿಯಾಗಿಸಿ ವೈಮಾನಿಕ ದಾಳಿ ನಡೆಸಲಾಯಿತು’ ಎಂದರು.

‘ಇರಾನ್ ಬೆಂಬಲಿತ ಸೇನಾಪಡೆಗಳ ದಾಳಿಯಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಕೈಗೊಂಡ ರಕ್ಷಣಾತ್ಮಕ ವೈಮಾನಿಕ ದಾಳಿ ಇದು‘ ಎಂದು ಕಿರ್ಬಿ ದಾಳಿಯನ್ನು ಸಮರ್ಥಿಸಿಕೊಂಡಿದ್ದಾರೆ.

‘ಅಮೆರಿಕ, ಭವಿಷ್ಯದಲ್ಲಿನ ಅಪಾಯಗಳನ್ನು ತಪ್ಪಿಸಲು ಸಕಾಲಿಕವಾಗಿ ಸೂಕ್ತ ಕ್ರಮವನ್ನು ಕೈಗೊಂಡಿದೆ. ಈ ಮೂಲಕ ರಾಷ್ಟ್ರದ ಸೇನೆ ವಿರುದ್ಧದ ದಾಳಿಕೋರರಿಗೆ ಸ್ಪಷ್ಟ ಸಂದೇಶವನ್ನು ರವಾನಿಸಿದೆ‘ ಎಂದು ಕಿರ್ಬಿ ಹೇಳಿದರು.

ಜೋ ಬೈಡನ್ ಅಧಿಕಾರಕ್ಕೆ ಬಂದ ನಂತರ, ಸಿರಿಯಾ –ಇರಾಕ್ ಗಡಿಯ ಮೇಲೆ ಎರಡನೇ ಬಾರಿ ಅಮೆರಿಕದ ಪಡೆಗಳು ದಾಳಿ ನಡೆಸಿವೆ. ಹಿಂದೆ ಫೆಬ್ರುವರಿಯಲ್ಲಿ ಪೂರ್ವ ಸಿರಿಯಾದ ಮೇಲೆ ಇಂತಹ ದಾಳಿ ನಡೆದಿತ್ತು.